
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

29 ಮಾರ್ಚ್ 2017 ಪುಟ 20 ರೂ. 15/-



ಮಸಿ ಬಳಿಯುವ ನೀಚರು





ತುಮಕೂರು

ವಿದ್ಯಾರ್ಥಿಗಳ ಸಾವಿನ ಹಿಂದೆ 'ಸೇಡಿ'ನ ಜಾಡು!







ಗಣಿಕಳ್ಳರಿಗೆ ಅಚ್ಛೇದಿನ್





ಶಾಕ್ ನೀಡಿದ

ಪಂಚರಾಜ್ಯಗಳ ಫಲಿತಾಂಶ

ದಾವಣಗೆರೆಯಲ್ಲಿ ಮಕ್ಕಳ ಕಳ್ಳ ಸಾಗಣೆ ಜಾಲ

ಮತ್ತೊಬ್ಬ ದಲಿತ ವಿದ್ಯಾರ್ಥಿಯ ಹತ್ಯೆ





ಇರೋಂ ಶರ್ಮಿಳಾಗೆ 90, ನೋಟಾ 143: ಚಳವಳಿಗಾರರಿಗೆ ಪಾಠಗಳೇನು?


ಈಚೆಗೆ ನಡೆದ ಚುನಾವಣೆಯಲ್ಲಿ ಮಣಿಪುರ ರಾಜ್ಯದ ವಿಧಾನಸಭಾ ಕ್ಷೇತ್ರವೊಂದರಲ್ಲಿ ಬಂದ ಫಲಿತಾಂಶವು ಹಲವರಿಗೆ ಆಶ್ಚರ್ಯವನ್ನು ತಂದಿತು. ಆ ರಾಜ್ಯದ ಹಾಲಿ ಮುಖ್ಯಮಂತ್ರಿಯ ವಿರುದ್ಧ ಸ್ಪರ್ಧಿಸಿದ್ದ ಒಬ್ಬ ಅಭ್ಯರ್ಥಿಗೆ, ಮಹಿಳಾ ಅಭ್ಯರ್ಥಿಗೆ ಬಂದ ಮತಗಳ ಸಂಖ್ಯೆಯು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ಆ ವಿಧಾನಸಭಾ ಕ್ಷೇತ್ರದ ಹೆಸರು ಗೊತ್ತಿರದವರು, ಮುಖ್ಯಮಂತ್ರಿಯ ಹೆಸರು ಗೊತ್ತಿರದವರಿಗೂ ಆ ಮಹಿಳಾ ಅಭ್ಯರ್ಥಿ ಇರೋಂ ಶರ್ಮಿಳಾ ಚಾನು ಎಂದು ಗೊತ್ತಿದೆ. ಕ್ಷೇತ್ರದ ಹೆಸರು ಥೌಬಾಲ್. ಅದೇ ಕ್ಷೇತ್ರದಿಂದ ಗೆದ್ದು ಮೂರು ಸಾರಿ ಮುಖ್ಯಮಂತ್ರಿ ಆಗಿದ್ದ ವ್ಯಕ್ತಿ ಕಾಂಗ್ರೆಸ್‌ನ ಇಬೋಬಿ ಸಿಂಗ್. ಆತನಿಗೆ 18,649 ಮತಗಳು ದಕ್ಕಿದ್ದವು. ಬಿಜೆಪಿಯ ಎಲ್.ಬಸಾಂತಾ ಸಿಂಗ್‌ಗೆ 8,179 ಮತಗಳು ಸಿಕ್ಕಿದ್ದರೆ, ಎಐಟಿಸಿಯ ಎಲ್.ಸುರೇಶ್ ಸಿಂಗ್‌ಗೆ 144 ಮತಗಳು ಸಿಕ್ಕಿದ್ದವು. ಅದರ ನಂತರದ ಹೆಚ್ಚು ಮತಗಳು ನೋಟಾ- ಯಾರಿಗೂ ನನ್ನ ಮತವಿಲ್ಲದ್ದು 143. ನಂತರದ್ದು ಇರೋಂ ಶರ್ಮಿಳಾ ಸ್ಥಾನ, 90 ಮತಗಳು. ಎ.ಕೆ.ಮ್ಯಾಂಗ್ಲೋಮ್ಯಾವ್ರೋ ಸಿಂಗ್ ಎಂಬ ಸ್ವತಂತ್ರ ಅಭ್ಯರ್ಥಿಗೆ 66 ಮತಗಳು ಸಿಕ್ಕವು.

ಈ ಲೇಖನ ಓದುತ್ತಿರುವವರಲ್ಲಿ ಶೇ.99ರಷ್ಟು ಜನರ ನೆನಪಿನಲ್ಲಿ ಇಬೋಬಿ ಸಿಂಗ್ ಎಂಬಾತನ ಹೆಸರು ಇರಲಿಲ್ಲ, ಇರೋಂ ಶರ್ಮಿಳಾ ಹೆಸರು ಗೊತ್ತಿತ್ತು, ಏಕೆಂದರೆ ಆಕೆ ಕಳೆದ ಆಗಸ್ಟ್ 9ಕ್ಕೆ ತಾನೇ ಕೊನೆಗೊಳಿಸಿಕೊಂಡ ಉಪವಾಸ ಸತ್ಯಾಗ್ರಹ ಆರಂಭಿಸಿದ್ದು ನವೆಂಬರ್ 4, 2000ರಂದು, 16 ವರ್ಷಗಳ ಹಿಂದೆ. ಆಕೆ, ಉಪವಾಸದಿಂದ ಸತ್ತು ಹೋಗಬಹುದೆಂದು ಕಂಡಾಗಲೆಲ್ಲಾ, ಪೊಲೀಸರು ಎತ್ತಿಕೊಂಡು ಹೋಗಿ ಆಸ್ಪತ್ರೆಯಲ್ಲಿ ಗ್ಲುಕೋಸ್ ಮತ್ತು ಮೂಗಿಗೆ ಹಾಕಿದ ಕೊಳವೆಯ ಮೂಲಕ ಆಹಾರ ನೀಡಿ ಬದುಕಿಸುತ್ತಿದ್ದರು. ಚೇತರಿಕೆ ಕಂಡು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಕೂಡಲೇ ಇರೋಂ ಶರ್ಮಿಳಾ ಮತ್ತೆ ಬಂದು ಉಪವಾಸ ಕೂರುತ್ತಿದ್ದರು. ಈ ಉಪವಾಸ ಕೂತಿದ್ದು ಯಾತಕ್ಕಾಗಿ? ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (Armed forces special power act - AFSPA)ಯಡಿಯಲ್ಲಿ ಮಣಿಪುರವನ್ನು ತರಲಾಗಿತ್ತು, ಅದರ ಅಡಿಯಲ್ಲಿ ಭಾರತೀಯ ಸೇನೆ ನಡೆಸಿದ ದೌರ್ಜನ್ಯ, ಕೊಲೆ ಮತ್ತು ಅತ್ಯಾಚಾರಗಳಿಗೆ ಕೊನೆಯೇ ಇಲ್ಲ, ಇದು ಆ ನಾಡಿನ ಜನರ ಘನತೆಯನ್ನೇ ಅಲ್ಲಾಡಿಸಿತ್ತು, ಹೀಗಾಗಿ ಈ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಆಕೆ ಉಪವಾಸ ನಡೆಸಿದ್ದರು.

ಈ ಕಾಯ್ದೆಯ ರಕ್ಷಣೆಯಡಿ ಭಾರತೀಯ ಸೈನ್ಯ ನಡೆಸಿದ ಅತ್ಯಾಚಾರಗಳನ್ನು ವಿರೋಧಿಸಿ, ಮಣಿಪುರದ ಕೆಲವು ತಾಯಂದಿರು ಸಂಪೂರ್ಣ ನಗ್ನರಾಗಿ, 'ಭಾರತದ ಸೈನ್ಯವೇ ನಮ್ಮ ಮೇಲೆ ರೇಪ್ ಮಾಡು' ಎಂಬ ಬ್ಯಾನರ್ ಹಿಡಿದು, ಸೈನ್ಯದ ಕಚೇರಿಯ ಗೇಟಿನ ಮುಂದೆ ಪ್ರತಿಭಟಿಸಿದ್ದರು. ಅದೂ ಸಹ ಭಾರತದಾದ್ಯಂತ ಸುದ್ದಿಯಾಗಿತ್ತು, ಸಂವೇದನೆಯಿದ್ದವರು ತಲ್ಲಣಿಸಿದ್ದರು. ಇವೆಲ್ಲದರ ಪರಿಣಾಮವಾಗಿ ಮನುಷ್ಯರ ಹಕ್ಕುಗಳ ಕುರಿತು ಅರಿವು ಹಾಗೂ ಸೂಕ್ಷ್ಮತೆ ಇರುವವರೆಲ್ಲರೂ ಆ ಕಾಯ್ದೆಯ ವಿರುದ್ಧ ಇದ್ದರು. ಇರೋಂ ಶರ್ಮಿಳಾರ ಹೋರಾಟದ ಕುರಿತು ವಿಶೇಷ ಅಭಿಮಾನ ಇಟ್ಟುಕೊಂಡಿದ್ದರು.

ಆಕೆ ಕಳೆದ ಆಗಸ್ಟ್ 9ರಂದು ಉಪವಾಸ ಹಿಂತೆಗೆದುಕೊಂಡಾಗ, ದೇಶದ ಉಳಿದ ಭಾಗಗಳ ಜನರು, ಶರ್ಮಿಳಾ ಸೋತರು ಎಂದು ಭಾವಿಸಲಿಲ್ಲ, ಈ ದೇಶದ ಪ್ರಭುತ್ವಗಳ ಸಂವೇದನಾಶೀಲತೆಗೇ ಧಿಕ್ಕಾರ ಹೇಳಿದರು. ಆದಾಗಿ ಕೆಲವು ದಿನಗಳಲ್ಲಿ ಶರ್ಮಿಳಾ People's Resurgence Justice Alliance ಎಂಬ ಪಕ್ಷವನ್ನು ಘೋಷಿಸಿ, ತಾನು ಚುನಾವಣೆಗೆ ಸ್ಪರ್ಧಿಸಿ ಹೋರಾಟವನ್ನು ಮುಂದುವರೆಸುವುದಾಗಿ ಹೇಳಿದರು. ಅದರಂತೆಯೇ ಸ್ಪರ್ಧಿಸಿದರು. ಆಕೆಯ ಜೊತೆ ಅದೇ ಪಕ್ಷದಿಂದ ಒಟ್ಟು ಮೂವರು ಸ್ಪರ್ಧಿಸಿದ್ದರು. ಶರ್ಮಿಳಾ ಗೆದ್ದುಬಿಡಬಹುದೆಂಬ ನಿರೀಕ್ಷೆಯನ್ನು ಹೆಚ್ಚಿನವರು ಇಟ್ಟುಕೊಂಡಿರಲಿಲ್ಲ, ಆದರೆ, ಷಾಕ್ ಆಗಿದ್ದು ಆಕೆಗೆ ಕೇವಲ 90 ಮತಗಳು ಬಂದವೆಂಬುದು.

ಇದಕ್ಕೆ ಕಾರಣವೇನಿರಬಹುದೆಂದು ಫೇಸ್‌ಬುಕ್‌ನಲ್ಲಿ ನಾನು ಒಂದು ಪೋಸ್ಟ್ ಹಾಕಿದಾಗ ಹಲವು ಗೆಳೆಯರು ಅದಕ್ಕೆ ಪ್ರತಿಕ್ರಿಯಿಸಿದರು. ಚುನಾವಣೆಯೆಂಬುದು ಆದರದ್ದೇ ಆದ ಪ್ರಕ್ರಿಯೆ, ತಂಡ, ಸಂಘಟನೆ ಕೇಳುತ್ತದೆ. ಅದ್ಯಾವುದನ್ನೂ ಶರ್ಮಿಳಾ ಮಾಡಿರಲಿಲ್ಲ ಮತ್ತು ಮಾಡುವಷ್ಟು ಸಮಯವೂ ಆಕೆಗಿರಲಿಲ್ಲ ಎಂಬುದು ಹಲವರ ಅಭಿಪ್ರಾಯವಾಗಿತ್ತು, ಅದರ ಜೊತೆಗೆ ಇನ್ನೂ ಕೆಲವು ಸಂಗತಿಗಳನ್ನು ಗೆಳೆಯರು ತಿಳಿಸಿದರು.



ಬುಡಕಟ್ಟು ಸಮುದಾಯದಲ್ಲಿ ಹೆಚ್ಚಿನ ಮಹಿಳಾ ಸಮಾನತೆ ಇರುತ್ತದೆ ಹಾಗೂ ಆಸ್ತಿ ಹಕ್ಕು ಕೊಟ್ಟಿರುತ್ತಾರೆ. ಆದರೆ ಅವರು ಮಹಿಳೆಯರನ್ನು ತಮ್ಮ ನಾಯಕಿಯರನ್ನಾಗಿ ಒಪ್ಪುವುದಿಲ್ಲ, ಆಕೆ ಹೊರದೇಶದ ವ್ಯಕ್ತಿಯನ್ನು ಮದುವೆಯಾಗುವುದು ಅಲ್ಲಿನವರಿಗೆ ಇಷ್ಟವಾಗಿರಲಿಕ್ಕಿಲ್ಲ (ಗೋವಾ ಮೂಲದ ಅನಿವಾಸಿ ಭಾರತೀಯ ಡೆಸ್ಮಂಡ್ ಕುಟಿನ್ಹೋ ಆಕೆಯ ಸ್ನೇಹಿತನಾಗಿದ್ದು, ಚುನಾವಣೆಯ ನಂತರ ಮದುವೆಯಾಗುವುದಾಗಿ ಶರ್ಮಿಳಾ ಘೋಷಿಸಿದ್ದಾರೆ). ಡೆಸ್ಮಂಡ್ ಒಮ್ಮೆ ಕೋರ್ಟಿನಲ್ಲಿ ಕಾಣಿಸಿಕೊಂಡು, ಆಕೆಯ ಕೈಹಿಡಿದು ನಿಂತಿದ್ದು ಸಹಚಳವಳಿಗಾರರಿಗೇ ಇಷ್ಟವಾಗಿರಲಿಲ್ಲ, ಡೆಸ್ಮಂಡ್‌ನನ್ನು ಹಿಡಿದು ಬಡಿಯಲಾಗಿತ್ತು, ಇದು ಅಲ್ಲಿ ಒಂದು ದೊಡ್ಡ ಸುದ್ದಿಯಾಯಿತು. ಹೊರಗಿನವರು ಮಣಿಪುರದಲ್ಲಿ ಬಂದು ನೆಲೆಸುವುದನ್ನು ವಿರೋಧಿಸುವ ಒಂದು ಹೋರಾಟವೂ ಅದೇ ನೆಲದಲ್ಲಿ ನಡೆಯುತ್ತಿದೆ.

ಆಕೆ ಉಪವಾಸ ಹಿಂತೆಗೆದುಕೊಂಡಿದ್ದು ಜನರಿಗೆ ಇಷ್ಟವಾಗಲಿಲ್ಲ; ಆಕೆಯನ್ನು ಹುತಾತ್ಮಳಂತೆ ನೋಡಲು ಮಾತ್ರ ಅವರು ಬಯಸುತ್ತಿದ್ದರು. ಉಪವಾಸ ಹಿಂತೆಗೆದು ಕೊಂಡು, ಚುನಾವಣಾ ಕ್ಷೇತ್ರವನ್ನು ಪ್ರವೇಶಿಸುವ ತೀರ್ಮಾನ ವನ್ನು ತೆಗೆದುಕೊಳ್ಳುವಾಗ ತನ್ನ ಸಹಚಳವಳಿಗಾರರೊಂದಿಗೆ ಚರ್ಚಿಸಿರಲಿಲ್ಲ, ಹೀಗಾಗಿ ಆಕೆಗೆ ಬೇಕಾದ ಸಂಘಟಿತ ಬಲ ಒದಗಿಬರಲಿಲ್ಲ, ಯಾವುದೂ ಆಕೆಯ ಪರವಾಗಿ ಇರದೇ ಇದ್ದಾಗ, ಗೆಲ್ಲುವ ಅಭ್ಯರ್ಥಿ ಆಗುವ ಸಾಧ್ಯತೆಯೇ ಇರದಾಗ, ಜನರು ಮತ ಹಾಕುವ ಸಾಧ್ಯತೆ ಇನ್ನೂ ಕಡಿಮೆ. ತಾನು ಎಲ್ಲಿ ಸ್ಪರ್ಧಿಸಿದರೆ ಹೆಚ್ಚಿನ ಅನುಕೂಲ ಆಗಬಹುದೆಂಬುದನ್ನು ನೋಡದೇ, ಮುಖ್ಯಮಂತ್ರಿ ವಿರುದ್ಧ ಸ್ಪರ್ಧಿಸಲು ಹೋಗಿದ್ದರಿಂದಲೂ ಹೀಗೆ ಆಗಿದೆ ಎಂಬುದು ಕೆಲವರ ಅನಿಸಿಕೆ.

ಇದೆಲ್ಲವೂ ನಿಜವಿರಬಹುದು. ಇದಲ್ಲದೇ ಇನ್ನೂ ಕೆಲವು ನಿರ್ದಿಷ್ಟ ಕಾರಣಗಳು ಮಣಿಪುರವನ್ನು ಬಲ್ಲವರಿಗೆ ಗೊತ್ತಿರಬಹುದು. ಆದರೆ, ಎಲ್ಲೆಡೆಯ ಚಳವಳಿಗಾರರು ಕಲಿಯಬಹುದಾದ ಕೆಲವು ಪಾಠಗಳು ಸದರಿ ವಿದ್ಯಮಾನದಲ್ಲಿರಬಹುದು. ಅದರ ಕುರಿತು ಚರ್ಚಿಸುವ ಉದ್ದೇಶ ಈ ಲೇಖನಕ್ಕಿದೆ. 143 ಜನರು ಯಾರಿಗೂ ಓಟು ಹಾಕುವುದು ಬೇಡ ಎಂದು ನಿರ್ಧರಿಸುವಾಗ ಅವರಿಗೆ, ಅದರ ಬದಲು ಇರೋಂ ಶರ್ಮಿಳಾ ಒಂದು ಆಯ್ಕೆ ಎಂದು ಏಕೆ ಅನ್ನಿಸಲಿಲ್ಲ ಎಂಬುದು ಮಿಕ್ಕೆಲ್ಲಕ್ಕಿಂತ ಹೆಚ್ಚು ಕಾಡುತ್ತದೆ.

ಜನ ಚಳವಳಿಗೂ ಜನಪರ ಚಳವಳಿಗೂ ಇರುವ ಒಂದು ವ್ಯತ್ಯಾಸ ಆಗಾಗ ಚರ್ಚೆಯಾಗುತ್ತಿರುತ್ತದೆ. ಸಮಸ್ಯೆಯಲ್ಲಿರುವ ಜನರ ಪರವಾಗಿ ಬೇರೆಯವರು ಕೈಗೆತ್ತಿಕೊಂಡು, ಬೇರೆಯವರೇ ಅದನ್ನು ಮುನ್ನಡೆಸುವ ಚಳವಳಿಗಳನ್ನು ಜನಪರ ಚಳವಳಿಗಳು ಎಂದು ಕರೆದಿದ್ದೇನೆ. ಅದರ ಉದ್ದೇಶಗಳು ಘನವಾಗಿರಬಹುದು; ಇಂತಹ ಹೋರಾಟ ಮಾಡುವವರು ಪ್ರಾಮಾಣಿಕರಾಗಿದ್ದು, ತಮ್ಮ 'ವೈಯಕ್ತಿಕ ಸುಖ'ಗಳನ್ನು 'ತ್ಯಾಗ' ಮಾಡಿ, ಬಲುಕಷ್ಟದಿಂದ ಅವನ್ನು ನಡೆಸುತ್ತಿರಲೂಬಹುದು. ಆದರೆ, ಅದರಲ್ಲಿ ಜನರು ಪ್ರೇಕ್ಷಕರಾಗಿಯೋ, ಅತಿಥಿಗಳಾಗಿಯೋ ಇರುವ ಸಾಧ್ಯತೆ ಹೆಚ್ಚು, ಜನಚಳವಳಿಯಲ್ಲಿ, ಸಂತ್ರಸ್ತ ಜನತೆಯ ಪಾಲ್ಗೊಳ್ಳುವಿಕೆಗೆ ಹೆಚ್ಚು ಮಹತ್ವ. ಒಂದು ಹೋರಾಟ ಜನಪರ ಚಳವಳಿಯಾಗಿ ಆರಂಭವಾಗಿ ನಂತರ ಜನಚಳವಳಿಯಾಗಲೂಬಹುದು. ಆದರೆ, ಎಂದೆಂದೂ ಅದು ಜನಪರ ಚಳವಳಿಯಾಗಿಯೇ ಉಳಿದುಕೊಂಡುಬಿಟ್ಟರೆ ಅದೊಂದು ಸಮಸ್ಯೆಯೇ.

ಕೆಲವೊಮ್ಮೆ ಅತ್ಯಂತ ಗಂಭೀರವಾದ, ತೀವ್ರವಾದ ಸಮಸ್ಯೆಯಲ್ಲಿ ಸಿಲುಕಿಕೊಂಡಿರುವವರೂ ತಾವೇ ಅದನ್ನು ಬಗೆಹರಿಸಿಕೊಳ್ಳುವ ಹೋರಾಟದಲ್ಲಿ ಗಂಭೀರವಾಗಿ, ತೀವ್ರವಾಗಿ ತೊಡಗದೇ ಇರಬಹುದು. ಇನ್ನಾರೋ ತಮ್ಮ ಪರವಾಗಿ ಹೋರಾಟ ಮಾಡಿ ಬಗೆಹರಿಸಿಕೊಟ್ಟರೆ ಅವರಿಗೆ ಖುಷಿಯೇ. ಬಗೆಹರಿಯಬೇಕು ಎಂಬುದೇನೋ ಸರಿ, ಆದರೆ ಅದಕ್ಕೆ ಹೋರಾಟ ಮಾಡಲು ಸಿದ್ಧರಿಲ್ಲದೇ ಇರಬಹುದು. ಏಕೆಂದರೆ, ಅವರ ಮಟ್ಟಿಗೆ ಅದು ಅಷ್ಟು ದೊಡ್ಡ ಸಮಸ್ಯೆ ಆಗಿರುವುದಿಲ್ಲ, ಅವರಿಗಿಂತ ಅವರ ಪರವಾಗಿ ಹೋರಾಟ ಮಾಡುವವರೇ ಹೆಚ್ಚು 'ಫೀಲ್' ಮಾಡುತ್ತಿರಬಹುದು. ಅಫ್ಸ್ಪಾ ಎಂಬುದು ಮಣಿಪುರದ ಜನರಿಗೆ ಒಂದು ಸಮಸ್ಯೆಯೇ ಆಗಿರಲಿಲ್ಲ ಎಂದು ಹೇಳಲಾಗದು. ಆದರೆ, ಅದನ್ನು 16 ವರ್ಷಗಳ ಕಾಲ ನಿರಂತರವಾಗಿ ಅಲ್ಲಿನ ಜನ ಫೀಲ್ ಮಾಡಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ.

ಜನರು ಅನುಭವಿಸುತ್ತಿರುವ ಸಮಸ್ಯೆಯ ಕುರಿತಂತೆ ಹೋರಾಡಲು ಅದೇ ಜನರ ಹತ್ತಿರ ಚಳವಳಿಗಾರರು ಹೋದಾಗ, 'ಸರಿ, ನಾವು ನಿಮ್ಮ ಜೊತೆ ಬರುತ್ತೇವೆ, ಬಂದರೆ ನಮಗೇನು ಸಿಗುತ್ತದೆ?' ಎಂಬ ಪ್ರಶ್ನೆ ಕೆಲವೊಮ್ಮೆ ಎದುರಾಗುತ್ತದೆ. ಚಳವಳಿಗಾರರು ಎಂಬುದೊಂದು ಪ್ರತ್ಯೇಕ ಪ್ರಬೇಧವಾಗಿ ಹುಟ್ಟಿಕೊಂಡಿರುವುದು ಎಷ್ಟು ಸರಿ ಎಂದು ಕೆಲವರು ಪ್ರಶ್ನೆ ಕೇಳುತ್ತಾರೆ. ಸಂತರು, ಸನ್ಯಾಸಿಗಳು, ಶರಣರು, ಫಕೀರರು ಇತ್ಯಾದಿ ಜನ ಗುಂಪುಗಳು ಯಾವತ್ತಿಂದಲೂ ಎಲ್ಲಾ ದೇಶಗಳಲ್ಲೂ ಇದ್ದಿವೆ. ಅದರಲ್ಲಿ ಅಸಲಿ, ನಕಲಿ ಸಹ ಎಲ್ಲಾ ಕಾಲದಲ್ಲೂ ಇದ್ದಿದ್ದಾರೆ. ಆದರೆ, ಸಮಾಜದಲ್ಲಿ 'ಉತ್ಪಾದಕ' ಎಂದು ಹೇಳಬಹುದಾದ ವಿವಿಧ ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳಾಚೆ, ಸಮಾಜಕ್ಕೆ ಉಪಕಾರಿಯಾದ ವಿವಿಧ ರೀತಿಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು ಎಲ್ಲಾ ಸಮಾಜದಲ್[ಲೂ] ಇರುತ್ತಾರೆ. ಅದನ್ನು ವೃತ್ತಿಯನ್ನಷ್ಟೇ ಆಗಿಸಿಕೊಂ[ಡ] ಪರವಾಗಿಲ್ಲ; ಲಾಭದ ವೃತ್ತಿಯಾಗಿಸಿಕೊಳ್ಳುವುದ[ು] ಕಷ್ಟವುಂಟುಮಾಡುತ್ತದೆ ಅಷ್ಟೇ. ಪ್ರಾಮಾಣಿಕ ಚಳವಳಿಗಾರರ ಬಗ್ಗೆ ಜನರಲ್ಲಿ ಗೌರವ ಇರುತ್ತ[ದೆ] ಆದರೆ, ಅವರನ್ನು ಅನುಸರಿಸುವುದರಲ್ಲಿ ಆಸಕ್ತಿ ಇರುವುದಿಲ್ಲ. 'ಭಗತ್‌ಸಿಂಗ್ ನಮ್ಮ ನೆಚ್ಚಿನ ಕ[...] ಆದರೆ ಪಕ್ಕದ ಮನೆಯಲ್ಲಿ ಹುಟ್ಟಿದರೆ ಒಳ್ಳೆಯ[...] ಎಂಬ ಮಾತು ಸಾಕಷ್ಟು ಕಾಲದಿಂದ ಚಾಲ್ತಿಯ[ಲ್ಲಿದೆ].

ಸಂತತನದ ಆಚೆ, ಸಮಾಜ ಪರಿವರ್ತನೆಯ[...] ಚಳವಳಿಯು ಸಮಾಜಕ್ಕೆ ನಾಯಕತ್ವ ಒದಗಿಸಬ[ೇಕು] ಚಳವಳಿಗೂ ಕೆಲವು ಸಂಘಟನೆಗಳು ನಾಯಕತ್ವ ಒದಗಿಸಬೇಕು; ಸಂಘಟನೆಗಳಿಗೆ ವ್ಯಕ್ತಿಗಳು ನಾ[ಯಕತ್ವ] ಒದಗಿಸಬೇಕು. ಈ ನಾಯಕತ್ವವು ನಿರ್ದಿಷ್ಟ ಹೋರಾಟಕ್ಕೆ ಮಾತ್ರ ಸೀಮಿತವಾಗಿರುತ್ತದೆಯೋ[...] ಅದರಾಚೆಗೆ ಸಮಗ್ರ ಬದಲಾವಣೆಯ ಕಡೆಗೂ[...] ನಡೆಯುತ್ತದೆಯೇ ಎಂಬುದು ಮುಖ್ಯ. ಜನ ಸಾಮಾನ್ಯರ ಮೇಲೆ ಆರೋಪ ಹೊರಿಸಿ, 'ಜನ[...] ಸರಿಯಿಲ್ಲ' ಎಂದು ಹೇಳಿ ನಿರಾಶರಾಗುವುದು [...] ಬಾರಿ ನಡೆಯುತ್ತದೆ. ಇನ್ನೊಂದೆಡೆ 'ಜನರ ಮ[...] ವಿಶ್ವಾಸವಿಡಿ, ಜನರೇ ಚರಿತ್ರೆಯ ನಿರ್ಮಾಪಕರ[ು]' ಎಂದು ಮಂತ್ರದ ಗಿಳಿಪಾಠವನ್ನೂ ಒಪ್ಪಿಸಲಾಗ[ುತ್ತದೆ]. ಇವೆರಡೂ ಸರಿಯಿದೆ ಎನಿಸುತ್ತದೆ. ಅಂತಿಮವಾ[ಗಿ] ಜನರೇ ಚರಿತ್ರೆಯ ನಿರ್ಮಾಪಕರು ಎಂಬುದು [...] ಸತ್ಯವಾದರೂ, ಜನರ ಸಮಷ್ಟಿ ವಿವೇಕವು ಪ್ರಬುದ್ಧವಾಗಿ ಹರಳುಗಟ್ಟುವುದೂ ಹಂತಹಂ[ತವಾಗಿ] ಆಗುತ್ತದೆ ಅಲ್ಲವೇ? ಒಂದು ಇಶ್ಯೂವಿನಿಂದ [...] ಇಶ್ಯೂಗಳೆಡೆಗೆ, ನೇರವಾಗಿ ಸಂಬಂಧಿಸಿದ ಇಶ್ಯೂವಿನಿಂದ ನೇರವಾಗಿ ಸಂಬಂಧಿಸದೇ ಇರ[ುವ] ಇಶ್ಯೂವಿನೆಡೆಗೆ, ನಿರ್ದಿಷ್ಟ ಸಮಸ್ಯೆಯಿಂದ ಸಮ[ಗ್ರ] ರಾಜಕಾರಣದೆಡೆಗೆ ಹೀಗೆ ಅದು ದಾಟುವ ಬ[ಗೆ] ಹೇಗೆ? ಈ ಕುರಿತು ಚಳವಳಿಗಾರರು ತಲೆ ಕೆಡಿಸಿಕೊಳ್ಳಬೇಕೇನೋ!

ಹಾಗಿಲ್ಲದೇ, ಸಮಷ್ಟಿ ವಿವೇಕ (Collec[tive] wisdom) ಯಾವಾಗಲೂ ಸರಿ ಇರುತ್ತದೆ, ಚುನಾವಣೆಗಳಲ್ಲಿ ಎಲ್ಲಾ ಕಾಲದಲ್ಲೂ ವ್ಯಕ್ತವಾಗ[ುತ್ತದೆ] ಎಂದು ಕೆಲವರು ಹೇಳುತ್ತಾರೆ. ಈ ಸಮಷ್ಟಿ ಎಂಬುದು ಒಂದು ಕ್ಷೇತ್ರದ್ದೋ, ಒಂದು ರಾಜ[್ಯದ್ದೋ] ಅಥವಾ ಇಡೀ ದೇಶದ್ದೋ ಎಂಬ ಪ್ರಶ್ನೆ ಏಳ[ುತ್ತದೆ]. ಏಕೆಂದರೆ ಕೆಲವು ಕ್ಷೇತ್ರಗಳಲ್ಲಿ ನಾಲ್ಕೈದು ಸಾ[ರಿ] ದುಷ್ಟರನ್ನೇ ಆಯ್ಕೆ ಮಾಡುತ್ತಿರುತ್ತಾರೆ. 30-40 ವರ್ಷಗಳ ಕಾಲ ಆ ಕ್ಷೇತ್ರದಲ್ಲಿ ಯಾವ ಕೆಲಸ[ವನ್ನೂ] ಮಾಡದೇ, ಯಥಾಸ್ಥಿತಿ ಕಾಪಾಡಿಕೊಂಡು ಬಂದಿರುವವರು ಸತತವಾಗಿ ಗೆಲ್ಲುತ್ತಾ ಬಂದಿದ[್ದಾರೆ]. ಹೀಗಾಗಿ ಜನರು ದಡ್ಡರು, ಸ್ವಾರ್ಥಿಗಳು, ಶಕ್ತಿಯಿಲ್ಲದವರು ಎಂದು ಭಾವಿಸಬೇಕಾಗುತ್ತದ[ೆ].

ಸಾಮಾಜಿಕ ಬದಲಾವಣೆಗೆ ಚಳವಳಿಯೇ [...] ಪರ್ಯಾಯ ಎಂದು ಪ್ರತಿಪಾದಿಸುವ ಚಳವಳಿ[ಗಾರರು] ಆ ರೀತಿ ಜನರೂ ಭಾವಿಸುವಂತೆ ಮಾಡುವು[ದು] ಮೊದಲ ಸವಾಲು. ಏಕೆಂದರೆ, ಈ ರೀತಿ ಜನ[ರು] ಭಾವಿಸುತ್ತಿಲ್ಲ; ಚುನಾವಣಾ ಪ್ರಕ್ರಿಯೆಯಲ್ಲಿ ಜನ[ರು] ಎಷ್ಟು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೋ [ಆ] ಪ್ರಮಾಣದಲ್ಲಿ ಚಳವಳಿಗಳಲ್ಲಿ ಭಾಗವಹಿಸುತ್ತಿಲ್ಲ. ಎರಡನೆಯ ಸವಾಲು, ಚಳವಳಿಗಳಲ್ಲಿ ತೊಡಗಿಕೊಳ್ಳುವವರು, ಚಳವಳಿಗಳ ಫಲಾನುಭವಿಗಳು ಚುನಾವಣಾ ಕಣವೂ ಆ ಹೋರಾಟ ಕ್ಷೇತ್ರದ ಭಾಗ ಎಂದು ಭಾವಿಸು[ವಂತೆ] ಮಾಡುವುದು. ಇವೆರಡೂ ಆಗಿಲ್ಲ, ಬಹಳಷ್ಟು [...] ಅದೇ ಚಳವಳಿಯ ಫಲಾನುಭವಿಗಳಿಗೂ ಚಳವಳಿಗಳಿಗೂ ಸಂಬಂಧವಿರುವುದಿಲ್ಲ. ಅದು[...] ಹೋಗಲಿ ಎಂದರೆ, ಚಳವಳಿಗಳಲ್ಲಿ ಅತ್ಯಂತ ಸಕ್ರಿಯವಾಗಿ ತೊಡಗಿಸಿಕೊಂಡವರೂ, ಅದೇ ಚಳವಳಿಯ ವಿರೋಧಿಗಳ ಪರವಾಗಿ ಚುನಾವ[ಣಾ] ಕೆಲಸ ಮಾಡುತ್ತಾರೆ.

'ಚರಿತ್ರೆಯನ್ನು ನಿರ್ಮಾಣ ಮಾಡುವ' ಜ[ನರು] ಪ್ರಜ್ಞಾಪೂರ್ವಕವಾಗಿ ನಡೆಸಬೇಕಾದ ರಾಜಕೀಯ [ಪ್ರ]ಕ್ರಿಯೆಗೆ ಸಜ್ಜಾಗಲು ಒಂದಷ್ಟು ತರಬೇತಿ ಬೇ[ಕು]. ಇದು ಸುಲಭದ್ದಲ್ಲ. ನೋಟಾ ಹಾಕಿದ ಜನರು ಇರೋಂ ಶರ್ಮಿಳಾರನ್ನು ತಿರಸ್ಕರಿಸಿದ್ದಲ್ಲ; ಅವ[ರು] ಚುನಾವಣಾ ವ್ಯವಸ್ಥೆಯ ಕುರಿತು ತೋರಿದ [...] ಎಂಬಂತೆಯೂ ಯಾರಾದರೂ ವಿಶ್ಲೇಷಣೆ ಮಾಡಬಹುದು. ಅಂತಿಮವಾಗಿ ಈ ಸಂಸದೀಯ ಪ್ರಜಾತಂತ್ರ ವ್ಯವಸ್ಥೆ ಕಟ್ಟಲ್ಪಟ್ಟಿರುವ ರೀತಿಯಲ್ಲಿ[ನ] ಸಮಸ್ಯೆಯನ್ನು ಬಿಟ್ಟು ಮಾಡುವ ಯಾವ ವಿಶ್ಲೇಷಣೆಗಳೂ ಸರಿಯಿರುವ ಸಾಧ್ಯತೆಯಿಲ್ಲ.

ಮತ್ತೊಬ್ಬ ದಲಿತ ವಿದ್ಯಾರ್ಥಿಯ ಸಾಂಸ್ಥಿಕ ಹತ್ಯೆ


ಮುತ್ತುಕೃಷ್ಣನ್‌ಗೆ ನಟ ರಜನೀಕಾಂತ್ ಎಂದರೆ ...ಬಾ ಅಭಿಮಾನ. ಅದರಲ್ಲೂ ರಜನೀಕಾಂತ್ 'ಕಬಾಲಿ' ...ದಲ್ಲಿ ದಲಿತರ ಏಳಿಗೆಗೆ ಶ್ರಮಿಸಿದ್ದು ಆತನಿಗೆ ತುಂಬಾ ...ಷ್ಟವಾಗಿತ್ತು. ಆದ್ದರಿಂದಲೇ ಆತ ತನ್ನನ್ನು ರಜನಿ ಕೃಷ್ ...ದು ಕರೆದುಕೊಳ್ಳಲು ಇಷ್ಟಪಡುತ್ತಿದ್ದ. ತಮಿಳುನಾಡಿನ ...ದು ಬಡ ಮತ್ತು ವಿದ್ಯಾಹೀನ ದಲಿತ ಕುಟುಂಬದಲ್ಲಿ ...ಟ್ಟಿದ್ದ ರಜನಿ ಕೃಷ್ ಪ್ರತಿಭಾವಂತ ವಿದ್ಯಾರ್ಥಿ ಯಾಗಿದ್ದ. ...ಡಗಳಿಗೆ ಬಣ್ಣ ಹಚ್ಚುತ್ತಾ, ಮತ್ತಿನ್ಯಾವುದೋ ಚಾಕರಿ ...ಡುತ್ತ ಒಂದಿಷ್ಟು ಹಣ ಸಂಪಾದಿಸಿ ಕಾಲೇಜ್ ಮೆಟ್ಟಿಲು ...ತ್ತಿದ್ದ. ತಮಿಳುನಾಡಿನಲ್ಲಿ ಬಿ.ಎ. ಓದುತ್ತಿದ್ದಾಗಲೇ ...ಹಲಿಯ ಪ್ರತಿಷ್ಠಿತ ಜೆಎನ್‌ಯು ಸೇರಲು ಬಯಸಿ ...ರಡು ಬಾರಿ ಪ್ರವೇಶ ಪರೀಕ್ಷೆಗಳನ್ನು ಬರೆದಿದ್ದ. ಆದರೆ ...ಮ್ಮೆ ಆಗದಿದ್ದರಿಂದ 2012ರಲ್ಲಿ ಹೈದರಾಬಾದಿನಲ್ಲಿರುವ ...ಂದ್ರ ವಿವಿಯಲ್ಲಿ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಗೆ ...ರಿದ್ದ. ಎಂ.ಎ ಮುಗಿಸಿದ ನಂತರ ಮತ್ತೆ ಜೆಎನ್‌ಯು ...ವೇಶ ಪರೀಕ್ಷೆ ಬರೆದ. ಆಗಲೂ ಪ್ರವೇಶ ಸಿಗದಿದ್ದಾಗ ...014ರಲ್ಲಿ ಎಚ್‌ಸಿಯುನಲ್ಲೇ ಎಂ.ಫಿಲ್ ಸೇರಿದ. ...ೋದವರ್ಷ ನಾಲ್ಕನೆ ಯತ್ನದಲ್ಲಿ ಜೆಎನ್‌ಯು ಪ್ರವೇಶ ...ರೀಕ್ಷೆಯಲ್ಲಿ ಪಾಸ್ ಆದಾಗ ಆತನ ಸಂತೋಷಕ್ಕೆ ಪಾರವೇ ...ರಲಿಲ್ಲ. ಎಚ್‌ಸಿಯುನಲ್ಲಿ ಆತ ಮಾಡುತ್ತಿದ್ದ ಎಂ.ಫಿಲ್‌ಅನ್ನು ...ರ್ಧಕ್ಕೆ ಬಿಟ್ಟು ಜೆಎನ್‌ಯು ಸೇರಿದ.

ಅಂತಹ ಮುತ್ತುಕೃಷ್ಣನ್ ಅರ್ಥಾತ್ ರಜನಿ ಕೃಷ್ ...ದ ಸೋಮವಾರ ಆತ್ಮಹತ್ಯೆ ಮಾಡಿಕೊಂಡು ಈ ...ೋಕವನ್ನೇ ತ್ಯಜಿಸಿದ್ದಾನೆ.

ಕೃಷ್‌ನ ಸಾವು ರೋಹಿತ್ ವೇಮುಲನ ಸಾಂಸ್ಥಿಕ ...ಲೆಯನ್ನು ನೆನಪಿಸುತ್ತದೆ. ಕೃಷ್ ಸಾವಿನ ಸುದ್ದಿ ಕೇಳುತ್ತಿದ್ದಂತೆ ...ಎನ್‌ಯು ವಿದ್ಯಾರ್ಥಿ ಉಮರ್ ಖಾಲಿದ್ ತನ್ನ ...ೇಸ್‌ಬುಕ್ ವಾಲ್‌ನಲ್ಲಿ "ನಮ್ಮ ವಿಶ್ವವಿದ್ಯಾಲಯಗಳು ...ಮನಿತ ಸಮುದಾಯಗಳ ಸ್ಮಶಾನಗಳಾಗುತ್ತಿವೆ" ಎಂದು ...ರುಗಿದ. ಯಾಕೆ ರೋಹಿತ್, ಕೃಷ್ ತರಹದ ಪ್ರತಿಭಾವಂತ ...ಲಿತ ವಿದ್ಯಾರ್ಥಿಗಳು ಎಷ್ಟೆಲ್ಲ ಸಮಸ್ಯೆಗಳನ್ನು ...ದುರಿಸಿಯೂ ಮುಂದೆ ಬಂದು ಕೊನೆಯ ಹಂತದಲ್ಲಿ ...ಚೆಲ್ಲಿ ತಮ್ಮ ಬದುಕನ್ನು ಅಂತ್ಯಗೊಳಿಸುತ್ತಾರೆ? ...ತ್ತರ ಸುಲಭ: ಜೆಎನ್‌ಯು ಮತ್ತು ಎಚ್‌ಸಿಯು ...ಹದ ಪ್ರತಿಷ್ಠಿತ ಕ್ಯಾಂಪಸ್‌ಗಳಲ್ಲೂ ಜಾತಿವ್ಯವಸ್ಥೆ ...ಷ್ಟು ಆಳವಾಗಿ ಬೇರೂರಿದೆ ಎಂದರೆ ಅದನ್ನು ...ದುರಿಸಲಾಗದೇ ರೋಹಿತ್ ಮತ್ತು ಕೃಷ್ ...ಹದ ಪ್ರತಿಭೆಗಳು ಮಣ್ಣುಪಾಲಾಗುತ್ತಿವೆ.

ರೋಹಿತ್‌ನಂತೆ ಕೃಷ್ ವಿದ್ಯಾರ್ಥಿ ...ಘಟನೆಗಳ ಬಗ್ಗೆಯಾಗಲೀ, ಅವುಗಳ ...ಜಕೀಯದ ಬಗ್ಗೆಯಾಗಲೀ ಹೆಚ್ಚು ಆಸಕ್ತಿ ...ೊಂದಿರಲಿಲ್ಲ, ತಾನಾಯಿತು ತನ್ನ ಓದಾಯಿತು ...ಬಂತಿರುತ್ತಿದ್ದ. ಆತನಿಗೆ ರೋಹಿತ್‌ನ ...ರಿಚಯವಿತ್ತು ಆದರೆ ರೋಹಿತ್ ಕರೆದರೂ ...ಪ್ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯ ಸಭೆಗಳಿಗೆ ...ೋಗುತ್ತಿರಲಿಲ್ಲ. "ಅಣ್ಣಾ, ನೀವು ಯಾವುದೇ ನಿರ್ಧಾರ ...ೆದುಕೊಂಡರೂ ನನ್ನ ಸಮ್ಮತಿ ಇರುತ್ತದೆ" ಎಂದು ...ಳಿ ಜಾರಿಕೊಳ್ಳುತ್ತಿದ್ದ ಕೃಷ್ ಹೆಚ್ಚಾಗಿ ತನ್ನ ಸಮಯವನ್ನು ...ಥಾಲಯದಲ್ಲಿ ಕಳೆಯುತ್ತಿದ್ದ. ತನಗೆ ಇಂಗ್ಲಿಷ್ ಚೆನ್ನಾಗಿ ...ರೊಲ್ಲ ಎಂದು ಅರಿತಿದ್ದ ಆತ ಈ ಕೊರತೆಯನ್ನು ...ೀರಲು ಹೆಚ್ಚು ಶ್ರಮ ವ್ಯಯಿಸುತ್ತಿದ್ದ. ಕೃಷ್ ತನ್ನ ...ಸಂಗದಲ್ಲಿ ಎಷ್ಟು ಮುಳುಗಿಹೋಗಿದ್ದನೆಂದರೆ ಎಚ್‌ಸಿಯು ...ದಲಿತ ರೋಹಿತ್ ಮತ್ತು ಆತನ ಐವರು ಸಂಗಡಿಗರನ್ನು ...ಮಾನತ್ತುಗೊಳಿಸಿತ್ತು ಎಂಬುದೂ ತಡವಾಗಿ ಅವನ ...ವಿಗೆ ಬಂದಿತ್ತು. ಕಳೆದವರ್ಷ ಜನವರಿ 17ರಂದು ...ೋಹಿತ್ ನೇಣುಹಾಕಿಕೊಂಡ ಸಂಗತಿ ಕೃಷ್‌ನನ್ನು ...ಚ್ಚಿಬೀಳಿಸಿತ್ತು. ಆಗ ಆತನೂ ರೋಹಿತನಿಗೆ ನ್ಯಾಯ ...ಗಿ ನಡೆದ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದ. ಜೊತೆಗೆ ...ೋಹಿತ್ ಜೊತೆಗಿನ ತನ್ನ ಆರು ಭೇಟಿಗಳನ್ನು ಮತ್ತು ...ೋಹಿತನ ತಾಯಿ ರಾಧಿಕಾ ಅವರ ಜೊತೆಗೆ ...ಭಟನೆಗಳಲ್ಲಿ ಭಾಗವಹಿಸಿದ್ದನ್ನು ಕುರಿತು ತನ್ನ ಬ್ಲಾಗ್‌ನಲ್ಲಿ ...ಂದು ಲೇಖನ ಬರೆದಿದ್ದ. ಆ ಲೇಖನ ಹೀಗೆ ...ತ್ಯಗೊಂಡಿತ್ತು:

"ಈ ಅಮಾಯಕ ಅಮ್ಮನ ನೋವು ನನಗೆ ...ರ್ಥವಾಗುತ್ತದೆ. ಯಾಕೆಂದರೆ ನನ್ನ ಅಮ್ಮ ನನಗೆ ...ಳುತ್ತಿದ್ದರು 'ನಮ್ಮ ಸಮುದಾಯಕ್ಕೆ ನಮ್ಮ ಹುಡುಗರೇ ..., ಅವರು ಓದಿ, ತಮ್ಮ ಕಾಲುಗಳ ಮೇಲೆ ನಿಂತು ...ಮ್ಮ ಕುಟುಂಬಗಳಿಗೆ ಮಾತ್ರವಲ್ಲ, ಬದಲಾಗಿ ಇಡೀ ...ಮುದಾಯದ ನೆರವಿಗೆ ನಿಲ್ಲುತ್ತಾರೆ' ಎಂದು. ಪ್ರೀತಿಯ ...ೇಶದ್ರೋಹಿಗಳೇ, ಈ ದೇಶ ಒಂದು ಅಮಾಯಕ ...ಮ್ಮಯ ಮಗನನ್ನು ಕೊಂದು ಹಾಕಿತು. ಅವರು ...ೇಳುತ್ತಾರೆ 'ಭಾರತ ಮಾತೆ ಒಬ್ಬ ಮಗನನ್ನು ...ಳೆದುಕೊಂಡಿದ್ದಾಳೆ' ಎಂದು. ಆದರೆ ಆ ತಾಯಿಯ ...ತಿ ಯಾವುದು ಎಂದು ಪ್ರಶ್ನಿಸುವ ಮೂಲಕ ಆಕೆಗೆ



ನೋವು ಉಂಟು ಮಾಡುತ್ತಾರೆ. ಇಂತಹ ಅನ್ಯಾಯದ ನಂತರವೂ ಆ ತಾಯಿ ಅವರ ರಾಷ್ಟ್ರೀಯತೆಯನ್ನು ಬೆಂಬಲಿಸಬೇಕೆ?

ಪ್ರೀತಿಯ ದೇಶದ್ರೋಹಿಗಳೇ, ನಿಮಗೆ ಹೇಳುತ್ತೇನೆ ಕೇಳಿ, ಒಂದು ದಿನ ಈ ದೇಶದ ನಾಯಕ ಒಂದು ಸೆಲ್ಫಿಗಾಗಿ ಅಥವಾ ವಿದೇಶಿಯರ ಜಯಘೋಷಕ್ಕಾಗಿ ಎಲ್ಲವನ್ನೂ ಮಾರಿಬಿಡುತ್ತಾನೆ. ನೂರಾರು ಅಪ್ಪಾರಾವ್‌ಗಳು ಸಾವಿರಾರು ರೋಹಿತ್‌ರನ್ನು ಕೊಂದ ನಂತರ 'ಆತ/ಆಕೆ ಪ್ರತಿಭಾವಂತ ವಿದ್ಯಾರ್ಥಿ ಆಗಿದ್ದ/ಆಗಿದ್ದಳು' ಎನ್ನುತ್ತಾರೆ. ಅಂಚಿಗೆದೂಡಲ್ಪಟ್ಟ ಸಮುದಾಯಗಳ ಬುದ್ಧಿಜೀವಿಗಳು ತಮ್ಮ ಕಾಲ್ಪನಿಕ ಪಾತ್ರಗಳ ಕುರಿತು ಅಣಕ ಮಾಡಿದರು ಎಂದು ಬಂಧಿಸಲ್ಪಡುತ್ತಾರೆ. ಅದೇ ಹೊತ್ತಿಗೆ ಎಲ್ಲಾ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹತ್ತನೆ ತರಗತಿಯನ್ನೂ ಪಾಸ್ ಮಾಡಲಾಗದವರು ಮುಖ್ಯಸ್ಥರಾಗಿರುತ್ತಾರೆ. ಅಂಥವರು



ಭಿನ್ನಮತೀಯರನ್ನು ದೇಶದ್ರೋಹಿಗಳು ಅಥವಾ ಬಂಡಾಯಗಾರರು ಎಂದು ದೂಷಿಸುತ್ತಾರೆ. ಅವರು ರೋಹಿತ್‌ರಂತಹ, ನನ್ನಂತಹ ಲೆಕ್ಕವಿಲ್ಲದಷ್ಟು ಜನರನ್ನು ದನದ ಮಾಂಸ ತಿಂದದ್ದಕ್ಕೆ, ವಿವೇಚನಾಶೀಲರಾಗಿದ್ದಕ್ಕೆ ದೇಶಕ್ಕೆ ಬೌದ್ಧಿಕವಾಗಿ ಕೊಡುಗೆ ನೀಡಿದ್ದಕ್ಕೆ ಕೊಂದು ಹಾಕುತ್ತಾರೆ. ಆದರೆ ನಾವು ಈ ಭೂಮಿಯ ನಿಜವಾದ ಮಕ್ಕಳು. ನಮ್ಮನ್ನೆಲ್ಲ ಕೊಂದರೆ ಈ ದೇಶವೇ ಇರುವುದಿಲ್ಲ.

ಈ ಅಮಾಯಕ ಅಮ್ಮನನ್ನು ಬೆಂಬಲಿಸಲು ನೀವಿನ್ನೂ ಯಾತಕ್ಕಾಗಿ ಕಾಯುತ್ತಿದ್ದೀರಿ?

ಜಗತ್ತಿನ ನಾವೆಲ್ಲಾ ವಿದ್ಯಾರ್ಥಿಗಳು ರಾಧಿಕಾ ಅಮ್ಮನ ರೋಹಿತ್‌ಗಳಾಗಿ ಈ ಜಾತಿವಿನಾಶದ ಹೋರಾಟವನ್ನು ಬೆಂಬಲಿಸಬೇಕಿದೆ. ಈ ಅಸಹಾಯಕ ಅಮ್ಮನ ನೆರವಿಗೆ ನಾವೆಲ್ಲ ಹೋರಾಡಬೇಕಿದೆ. ಯಾಕೆಂದರೆ ಇವರು ವಿಶ್ವಕ್ಕೇ ಅಮ್ಮ."

ಇಂತಹ ಕೃಷ್ ನಾಲ್ಕು ಬಾರಿ ಜೆಎನ್‌ಯು ಸೇರಲು ಯತ್ನಿಸಿದಾಗ ತುಂಬಾ ಹಣಕಾಸಿನ ಸಮಸ್ಯೆ ಎದುರಿಸಿದ್ದ. ನಾಲ್ಕನೆ ಪ್ರಯತ್ನದ ನಂತರ ಆತ ಫೇಸ್‌ಬುಕ್‌ನಲ್ಲಿ ಹೀಗೆ ಬರೆದಿದ್ದ:

"ಮೊದಲ ಎರಡು ಬಾರಿ ನನಗೆ ಇಂಗ್ಲಿಷ್ ಚೆನ್ನಾಗಿ ಬರುತ್ತಿರಲಿಲ್ಲ, ಆದರೂ ನಾನು ನನ್ನ ಛಲ ಬಿಡಲಿಲ್ಲ. ಪ್ರತಿಬಾರಿ ಇಲ್ಲಿಗೆ ಬರಲು ಹಲವಾರು ತರಹದ ಚಾಕರಿ ಮಾಡುತ್ತಿದ್ದೆ, ಇರುವೆಯಂತೆ ಹಣ ಸಂಗ್ರಹಿಸುತ್ತಿದ್ದೆ. ಜನರನ್ನು ಹಣಕ್ಕಾಗಿ ಬೇಡುತ್ತಿದ್ದೆ, ರೈಲಿನಲ್ಲಿ ಏನನ್ನೂ ತಿನ್ನುತ್ತಿರಲಿಲ್ಲ. ಪ್ರತಿವರ್ಷ ಮಿತ್ರರು 'ಈ ಬಾರಿ ಪಾಸ್ ಆಗ್ತೀಯಾ' ಅನ್ನುತ್ತಿದ್ದರು. ನಾನೂ ಹೆಚ್ಚೆಚ್ಚು ಶ್ರಮ ಹಾಕುತ್ತಿದ್ದೆ ಯಾಕೆಂದರೆ ಕಷ್ಟಪಟ್ಟಷ್ಟು ಯಶಸ್ಸು ಸಿಗುತ್ತದೆ ಎಂದು ನನಗೆ ಗೊತ್ತಿತ್ತು. ಪ್ರತಿವರ್ಷ ನೆಹರೂ ಅವರ ಪ್ರತಿಮೆ ಬಳಿ ಕೂತು ಅವರನ್ನು ಕೇಳುತ್ತಿದ್ದೆ 'ಪ್ಲೀಸ್ ನೆಹರೂಜೀ, ನಮ್ಮ ಮನೆಯಲ್ಲಿ ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಓಟು ಹಾಕುವುದು. ಆದರೆ ನೀವ್ಯಾಕೆ ನನಗೆ ವಿದ್ಯೆ ಕೊಡಲು ನಿರಾಕರಿಸುತ್ತಿದ್ದೀರಿ? ಹೋದ ಬಾರಿಯ ಸಂದರ್ಶನದಲ್ಲಿ ಹನ್ನೊಂದು ನಿಮಿಷಗಳ ನಂತರ ಮೇಡಂ ಒಬ್ಬರು 'ನೀನು ತುಂಬಾ ಸರಳವಾಗಿ ಮಾತನಾಡುತ್ತಿದ್ದೀಯ' ಎಂದಿದ್ದರು. ಆದರೆ ಈ ಬಾರಿಯ ಸಂದರ್ಶನದಲ್ಲಿ ನಾನು ಎಂಟು ನಿಮಿಷ ಮಾತನಾಡಿದ ನಂತರ ಮೂವರು ಪ್ರೊಫೆಸರ್‌ಗಳು 'ನೀನು ತುಂಬಾ ಚೆನ್ನಾಗಿ ಮಾತನಾಡಿದೆ' ಎಂದರು. ನನಗೀಗ ಗೊತ್ತಾಗುತ್ತಿದೆ ಈ ಕೇಂದ್ರ ವಿವಿಯಲ್ಲಿ ಪ್ರವೇಶ ಪಡೆದಿರುವ ಪ್ರಥಮ ಸರ್ಕಾರಿ ಕಲಾ ಕಾಲೇಜು ವಿದ್ಯಾರ್ಥಿ ನಾನೆಂದು. ಸೇಲಂ ಜಿಲ್ಲೆಯಿಂದಲೂ ಆಯ್ಕೆಯಾಗಿರುವ ಪ್ರಥಮ ವ್ಯಕ್ತಿ ನಾನು. ನನ್ನಲ್ಲೊಬ್ಬ ಪಂಡಿತ ಇದ್ದಾನೆ ಎಂದು ಗುರುತಿಸಿ ನನಗೆ ನೆರವು ನೀಡಿದ ಎಲ್ಲರಿಗೂ ಧನ್ಯವಾದಗಳು."

ಈ ಪೋಸ್ಟ್ ಜೊತೆಗೆ ಕೃಷ್ ಜೆಎನ್‌ಯುನಲ್ಲಿರುವ ನೆಹರೂ ಪ್ರತಿಮೆಯ ಮುಂದೆ ಹೊಸ ಚೈತನ್ಯದೊಂದಿಗೆ ಹೆಜ್ಜೆ ಇಡುತ್ತಿರುವಂತೆ ಪೋಸ್ ಕೊಟ್ಟಿದ್ದ ತನ್ನ ಫೋಟೊ ಹಂಚಿಕೊಂಡಿದ್ದ.

ಕೃಷ್‌ಗೆ ವಿಮಾನವನ್ನೇರಿ ಹಾರಬೇಕೆಂಬ ಆಸೆ ಬಹುದಿನಗಳಿಂದ ಇತ್ತು. ಆದರೆ ಬಡತನ ಅಡ್ಡಿಯಾಗಿತ್ತು. ಆತ ಜೆಎನ್‌ಯು ಸೇರಲು ಹೊರಟಾಗ ಮೊದಲ ಬಾರಿಗೆ ವಿಮಾನವನ್ನು ಏರಿದ. ವಿಮಾನದಲ್ಲಿ ಗಗನಸಖಿ ಬಂದು ಆತನ ಕೈಗೆ ಒಂದು ಮೆನುಕಾರ್ಡ್ ಇಟ್ಟು "ನಿಮಗೆ ಯಾವುದು ಬೇಕು?" ಎಂದು ಕೇಳಿದಳು. ಕೃಷ್ ನೋಡುತ್ತಾನೆ ಎಲ್ಲದರ ಬೆಲೆಯೂ ನೂರು ರೂಪಾಯಿಗಿಂತ ಹೆಚ್ಚು. "ಪುಕ್ಕಟೆಯಾಗಿ ಏನು ಸಿಗುತ್ತದೆ?" ಎಂದ ಆತ. "ನೀರು ಕೊಡುತ್ತೇನೆ" ಎಂದಳು ಗಗನಸಖಿ. ಅದಕ್ಕೆ ನಕ್ಕ ಕೃಷ್ "ನಮ್ಮ ಮೆಸ್‌ನಿಂದ ತಂದ ನೀರು ನನ್ನ ಬಳಿ ಇದೆ. ಥ್ಯಾಂಕ್ಸ್" ಅಂದ.

ಕೃಷ್ ಇಷ್ಟಪಟ್ಟೇ ಜೆಎನ್‌ಯು ಸೇರಿದ್ದ. ಆದರೆ ಅಲ್ಲಿಯೂ ಆತನ ಬದುಕು ಸುಖಮಯವಾಗಿಯೇನೂ ಇರಲಿಲ್ಲ. ಆತನಿಗೆ ವಿದ್ಯಾರ್ಥಿವೇತನ ನಾಲ್ಕು ತಿಂಗಳ ನಂತರ ಸಿಕ್ಕಿತ್ತು. ಅದು ಸಿಗುವವರೆಗೂ ಆತ ಪಟ್ಟ ಪಾಡು ಅಷ್ಟಿಷ್ಟಲ್ಲ. ಆತ ರಾತ್ರಿ ಇಡೀ ಗ್ರಂಥಾಲಯದಲ್ಲಿ ಓದುತ್ತಿದ್ದರಿಂದ ಬೆಳಗ್ಗಿನ ತಿಂಡಿ ಆತನಿಗೆ ಸಿಗುತ್ತಿರಲಿಲ್ಲ. ಅದೆಷ್ಟೋ ದಿನ ಆತ ಊಟವಿಲ್ಲದೆ ಇರಬೇಕಿತ್ತು. ಒಮ್ಮೆ ಜೆರಾಕ್ಸ್ ಮಾಡಿಸಿಕೊಳ್ಳಲೂ ಆತನ ಬಳಿ ಹಣ ಇಲ್ಲದಿದ್ದಾಗ, ಬಾಪ್ಸ ನಾಯಕ ರಾಹುಲ್ ಸೋನ್‌ಪಿಂಪ್ಲೆ ಹತ್ತು ರೂಪಾಯಿ ಕೊಟ್ಟಾಗ ಕೃಷ್ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಿದ್ದ.

ಕೃಷ್ ಪ್ರತಿಭಾವಂತನಾಗಿದ್ದರೂ ವಿವಿಯಲ್ಲಿ ತನಗೆ ತಾರತಮ್ಯ ಮಾಡಲಾಗುತ್ತಿದೆ ಎಂಬ ಭಾವನೆಯಲ್ಲಿ ಮುಳುಗಿದ್ದ. ಅದಕ್ಕೆ ಕಾರಣಗಳೂ ಇರುತ್ತವೆ. ಸಾಮಾನ್ಯವಾಗಿ ವಿವಿಗಳಲ್ಲಿ ದಲಿತ ವಿದ್ಯಾರ್ಥಿಗಳನ್ನು ವಿವಿಧ ರೀತಿಯಲ್ಲಿ ಅವಮಾನಿಸಲಾಗುತ್ತದೆ. ಅವರಿಗೆ ಕಡಿಮೆ ಅಂಕಗಳನ್ನು ಬೇಕಂತಲೇ ನೀಡುವುದು, ವಿದ್ಯಾರ್ಥಿವೇತನವನ್ನು ತಡೆಹಿಡಿಯುವುದು, ಥೀಸೀಸ್ ಅನ್ನು ಹಿಂದಿರುಗಿಸುವುದು, ಅವರ ಇಂಗ್ಲಿಷ್‌ಅನ್ನು ಲೇವಡಿ ಮಾಡುವುದು, ಅವರು ಮಾತನಾಡಿಸಿದರೂ ಪ್ರತಿಕ್ರಿಯಿಸದೇ ಇರುವುದು... ಇಂಥವೆಲ್ಲ ನಡೆಯುತ್ತವೆ. ಇದೆಲ್ಲದರಿಂದಾಗಿ ಸಹಜವಾಗಿಯೇ ದಲಿತ ವಿದ್ಯಾರ್ಥಿಗಳಲ್ಲಿ ಖಿನ್ನತೆ ಮೂಡುತ್ತದೆ. ಅದರಲ್ಲೂ ಓದುಬರಹ ಕಲಿತಿರುವ ಮೊದಲನೆ ತಲೆಮಾರಿನವರಾಗಿದ್ದು, ಬಡ ಕುಟುಂಬದಿಂದ ಬಂದಿದ್ದು, ಹಳ್ಳಿಗಾಡಿನವರಾಗಿದ್ದ ಯುಕವರನ್ನು ಇವೆಲ್ಲ ಗಾಢವಾದ ಡಿಪ್ರೆಶನ್‌ಗೆ ದೂಡುತ್ತವೆ. ಪ್ರತಿಭಾವಂತರಾಗಿದ್ದರೂ ತಾವು ಇಲ್ಲಿ ಸಲ್ಲುವವರಲ್ಲ ಎಂಬ ಭಾವನೆ ಹೆಚ್ಚಾಗುತ್ತದೆ.

ಇದೆಲ್ಲದರೊಂದಿಗೆ ಕೃಷ್‌ಗೆ ಒಂದು ಸಮಸ್ಯೆ



ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಎದುರಾಗಿತ್ತು. ಇತಿಹಾಸ ವಿಭಾಗವನ್ನು ಆಯ್ಕೆ ಮಾಡಿಕೊಂಡಿದ್ದ ಕೃಷ್ ಮೊದಲು ಪ್ರೊ. ಬರ್ಟನ್ ಕ್ಲೀಟಸ್ ಅವರನ್ನು ತನ್ನ ಎಂಫಿಲ್ ಪ್ರಬಂಧ ಬರೆಯುವುದಕ್ಕೆ ಮೇಲ್ವಿಚಾರಕರಾಗಿ ಆಯ್ಕೆ ಮಾಡಿಕೊಂಡಿದ್ದ. ಆದರೆ ಆನಂತರ ಆತ ತನ್ನ ಕೆಲಸಕ್ಕೆ ಪ್ರೊ. ನೀಲಾದ್ರಿ ಅವರೇ ಸೂಕ್ತ ಎಂದು ನಿರ್ಧರಿಸಿ ಅವರನ್ನು ಭೇಟಿಯಾಗಿ ತನ್ನ ಮನವಿಯನ್ನು ಸಲ್ಲಿಸಿದ್ದ. ತಾನು ನೀಲಾದ್ರಿಯವರನ್ನು ಕೇಳಿರುವುದಾಗಿ ಆತ ಕ್ಲೀಟಸ್ ಅವರಿಗೂ ತಿಳಿಸಿದ್ದ. ಆದರೆ ಅಷ್ಟು ಹೊತ್ತಿಗಾಗಲೇ ಹೆಚ್ಚು ವಿದ್ಯಾರ್ಥಿಗಳಿಗೆ ಮೇಲ್ವಿಚಾರಕರಾಗಿದ್ದ ನೀಲಾದ್ರಿಯವರು ಕೃಷ್‌ಗೆ ಮೇಲ್ವಿಚಾರಕ ಆಗಲು ನಿರಾಕರಿಸಿದರು. ಕೃಷ್‌ಗೆ ದೊಡ್ಡ ಬಿಕ್ಕಟ್ಟು ಎದುರಾಯಿತು. ಆತ ಬೇಗನೇ ಒಬ್ಬರು ಮೇಲ್ವಿಚಾರಕರನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಅಷ್ಟು ಹೊತ್ತಿಗೆ ಆತನ ಸಹಪಾಠಿಗಳೆಲ್ಲ ತಮ್ಮತಮ್ಮ ಮೇಲ್ವಿಚಾರಕರನ್ನು ಆರಿಸಿಕೊಂಡಾಗಿತ್ತು. ಆಗ ಕೃಷ್ ಮತ್ತೆ ಕ್ಲೀಟಸ್ ಅವರನ್ನು ಸಂಪರ್ಕಿಸಿ ಅವರೊಂದಿಗೆ ಕೆಲಸ ಮಾಡುವುದಾಗಿ ತಿಳಿಸಿದ. ಆದರೆ ಕ್ಲೀಟಸ್ ಅವರು 'ಅದು ಮುಗಿದ ಅಧ್ಯಾಯ' ಎಂದರು. ಇದರಿಂದ ಕೃಷ್‌ಗೆ ಆಘಾತವಾಗಿರಲಿಕ್ಕೂ ಸಾಕು.

ಆತ ಡೆತ್‌ನೋಟ್ ಬರೆದಿಟ್ಟಿಲ್ಲವಾದರೂ ಆತ ಸಾಯುವ ಮೂರು ದಿನಗಳ ಮುನ್ನ ತನ್ನ ಫೇಸ್‌ಬುಕ್ ಪೇಜ್‌ನಲ್ಲಿ ಹೀಗೆ ಬರೆದಿದ್ದ: "ಎಂ.ಫಿಲ್/ಪಿಎಚ್‌ಡಿ ಪ್ರವೇಶಾತಿಯಲ್ಲಿ ಸಮಾನತೆ ಇಲ್ಲ, ವೈವಾವೋಸಿಯಲ್ಲಿ ಸಮಾನತೆ ಇಲ್ಲ, ಸಮಾನತೆಯನ್ನು ನಿರಾಕರಿಸಲಾಗುತ್ತಿದೆ. ಆಡ್ ಬ್ಲಾಕ್ ಮುಂದೆ ವಿದ್ಯಾರ್ಥಿಗಳಿಗೆ ಪ್ರತಿಭಟಿಸುವ ಹಕ್ಕನ್ನು ನಿರಾಕರಿಸಲಾಗುತ್ತಿದೆ. ಅಂಚಿಗೆ ದೂಡಲ್ಪಟ್ಟವರಿಗೆ ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ. ಎಲ್ಲಿ ಸಮಾನತೆಯನ್ನು ನಿರಾಕರಿಸಲಾಗುತ್ತದೆಯೋ ಅಲ್ಲಿ ಎಲ್ಲವನ್ನೂ ನಿರಾಕರಿಸಲಾಗುತ್ತದೆ."

ಕೃಷ್ ಆತ್ಮಹತ್ಯೆಗೆ ಕಾರಣ ಆತ ಎದುರಿಸಿದ ಜಾತಿ ತಾರತಮ್ಯವೇ ಹೊರತು ಮತ್ತೇನಲ್ಲ. ರೋಹಿತ್ ವೇಮುಲ, ಕೃಷ್ ಅವರಂತಹ ನೂರಾರು ದಲಿತ ವಿದ್ಯಾರ್ಥಿಗಳು ಇವತ್ತಿಗೂ ಇದನ್ನು ಎದುರಿಸುತ್ತಿದ್ದಾರೆ. ಈ ದರಿದ್ರ ಜಾತಿ ವ್ಯವಸ್ಥೆ ನಾಶವಾಗುವವರೆಗೂ ರೋಹಿತ್‌ಗಳು, ಕೃಷ್‌ಗಳು ಬಲಿಯಾಗುತ್ತಲೇ ಇರುತ್ತಾರೆ.

ಕೃಷ್‌ಗೆ ಇದು ಚೆನ್ನಾಗಿ ಗೊತ್ತಿತ್ತು. ಆತ ಬರೆದ ಒಂದು ಕವನ ಹೀಗಿದೆ:

"ದಲಿತನೆ ದಲಿತನೆ,
ಭಾರತ ಭೂಮಿಯ ಮಗನೆ,
ನೀನೊಬ್ಬ ದಲಿತ,
ದಲಿತ,
ಈ ಭೂಮಿಯ ಪುತ್ರ,
ಈ ನಾಡಿನ ಮೂಲ,
ನೀನು ಪವಿತ್ರ ಸಮುದ್ರದಲ್ಲಿ ಮಿಂದೆದ್ದರೂ,
ಸ್ವರ್ಗಕ್ಕೋ ಅಥವಾ ನರಕಕ್ಕೋ ಹೋದರೂ,
ನೀನು
ದಲಿತ
ದಲಿತ
ದಲಿತ."

ಕೃಷ್ ಸಾವಿನ ನಂತರ ಜೆಎನ್‌ಯು ವಿದ್ಯಾರ್ಥಿ ಅನಿರ್ಬನ್ ಭಟ್ಟಾಚಾರ್ಯ ಹೀಗೆ ಬರೆದ: "ನಾವು ರಜನಿ ಕೃಷ್‌ನ ಪಾರ್ಥಿವ ಶರೀರವನ್ನು ಹೊತ್ತಿದ್ದ ದೇಹ-ಚೀಲವನ್ನು ಶೀತಲ ಶವಾಗಾರಕ್ಕೆ ಸಾಗಿಸಿದ್ದನ್ನು ನೋಡಿದೆವು. ಆದರೆ ಆ ದೇಹ-ಚೀಲ ಬರೀ ಕೃಷ್‌ನ ಶರೀರವನ್ನು ಹೊಂದಿರಲಿಲ್ಲ. ಈ ವ್ಯವಸ್ಥೆ ಶೀತಲ ಶವಾಗಾರದಲ್ಲೇ ಇಡಬಯಸುವ ಹತ್ತಾರು ಪ್ರಶ್ನೆಗಳೂ ಆ ದೇಹ-ಚೀಲದಲ್ಲಿದ್ದವು."

ದಾವಣಗೆರೆಯಲ್ಲಿ ಮಕ್ಕಳ ಕಳ್ಳಸಾಗಣೆ ಜಾಲ

ಕಳೆದ ವಾರ ದಾವಣಗೆರೆಯ ಸಮಾರಂಭ ಮುಗಿಸಿಕೊಂಡು, ಯೋಗೇಶ್ ಮಾಸ್ತರ್ ಮೇಲೆ ಹಲ್ಲೆ ನಡೆಸಿದ ಪುಂಡ ಕೇಸರಿ ಕಿರಾತಕರಿಗೆ ತಕ್ಕ ಶಾ... ಮಾಡಿ ನಾವು ಬೆಂಗಳೂರಿಗೆ ವಾಪಸಾಗುತ್ತಿದ್ದಂತೆಯೇ ನಮ್ಮನ್ನು ಅನುಸರಿಸಿ ಅದೇ ದಾವಣಗೆರೆಯಿಂದ ಮತ್ತೊಂದು ಆಘಾತಕಾರಿ ಸುದ್ದಿ ಬಂತು. ಅದು ಮಕ್ಕಳ ಮಾರಾಟ ಜಾಲದ ಭಯಾನಕ ಸುದ್ದಿ! ಅದೂ ಬಿಜೆಪಿ ಜಿಲ್ಲಾ ಪಂಚಾಯತ್ ಸದಸ್ಯನ ದುಷ್ಟಕೂಟ ನಡೆಸುತ್ತಿರೋ ಜಾಲ!! ಮೊನ್ನೆಯಷ್ಟೇ ಡೋಂಗಿ 'ದೇಶಭಕ್ತ ಸಂತತಿಯ ಬಿಜೆಪಿಗಳ ಜೂಹಿ ಚೌಧರಿ ಅನ್ನೋ ಹೇತ್ಲಾಂಡಿ ಹೆಂಗಸೊಬ್ಬಳು ಬಂಗಾಳದ ಮಕ್ಕಳ ಕಳ್ಳಸಾಗಾಣಿ... ಯಲ್ಲಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು ನಮ್ಮ ಮನಸ್ಸಿನಲ್ಲಿನ್ನೂ ಹಸಿ ಇತ್ತು. ನಾವು ತಡ ಮಾಡಲಿಲ್ಲ. ನಮ್ಮ ವರದಿಗಾರ ಟಿ.ಎನ್.ಷಣ್ಮುಖ, ಆ ಹೊಲಸು ಜಾಲದ ಗರ್ಭಕ್ಕೇ ಧುಮುಕಿ, ಸಂತ್ರಸ್ತರನ್ನು ಸಂದರ್ಶಿಸಿ, ಕರುಳು ಹಿಂಡುವ ಈ ತನಿಖಾ ವರದಿಯನ್ನು ನಿಮ್ಮ ಮುಂದಿಟ್ಟಿದ್ದಾರೆ....


ನನ್ನ ಕಾರು ಮಾಯಕೊಂಡದತ್ತ ಮುಖ ಮಾಡಿ ಚಲಿಸುತ್ತಿದ್ದರೆ, ಮನಸ್ಸೆಲ್ಲ ಒಂದೆರಡು ದಿನಗಳ ಹಿಂದೆ ಓದಿದ್ದ ಸುದ್ದಿಯನ್ನೇ ಮೆಲುಕು ಹಾಕುತ್ತಿತ್ತು. ಪಶ್ಚಿಮ ಬಂಗಾಳದ ಜಲ್‌ಪೈಗುರಿ ಜಿಲ್ಲೆಯ ಬಿಜೆಪಿ ಮಹಿಳಾ ಮೋರ್ಚಾದ ನಾಯಕಿಯಾಗಿದ್ದ ಜೂಹಿ ಚೌಧರಿ ಎಂಬಾಕೆಯನ್ನು ಸಿಐಡಿ ಪೊಲೀಸರು ಭಾರತ-ನೇಪಾಳ ಗಡಿಭಾಗದ ಡಾರ್ಜಿಲಿಂಗ್‌ನಲ್ಲಿ ಬಂಧಿಸಿದ್ದರು. ಆಕೆ ಮಕ್ಕಳ ಕಳ್ಳಸಾಗಾಣಿಕೆಯ ಕಿಂಗ್‌ಪಿನ್! ಇತ್ತೀಚೆಗೆ ಒಂದೊಂದಾಗಿ ಕಳಚಿ ಬೀಳುತ್ತಿರುವ ಬಿಜೆಪಿಯ ಲೇಟೆಸ್ಟ್ ಮುಖವಾಡ!! ಆದರೆ ಅಂತದ್ದೇ ಸುದ್ದಿ ನಮ್ಮ ಕಾಲಬುಡದಲ್ಲೇ ಸದ್ದಿಡಿದ ಮಾಹಿತಿ ಕೇಳಿಸಿಕೊಂಡು ನನಗೆ ಶಾಕ್ ಆಗಿತ್ತು. ಕಾರ್ಮಿಕ ಹೋರಾಟವನ್ನು ಕಟ್ಟಿದ ದಾವಣಗೆರೆಯ ವಾತಾವರಣದಲ್ಲಿ ಇಂತಹ ಅನಿಷ್ಟ ಇದುವರೆಗೆ ನಡೆದದ್ದೇ ಇಲ್ಲ. ಈ ಬಿಜೆಪಿಗಳ ದೆಸೆಯಿಂದ ದಾವಣಗೆರೆಗೆ ಆ ಕಳಂಕವೂ ಮೆತ್ತಿಕೊಂಡಂತಾಗಿದೆ. ಮಾಹಿತಿ ಸಿಗುತ್ತಿದ್ದಂತೆಯೇ ಬೆಂಗಳೂರಿನ ಪತ್ರಿಕಾ ಕಚೇರಿಗೆ ಫೋನಾಯಿಸಿ, ವಿಷಯ ತಿಳಿಸಿ ಸ್ಥಳಕ್ಕೆ ಹೊರಡಲು ಸಿದ್ಧವಾದೆ. ಆದರೆ ಈ ಸೈತಾನಿ ಜಂತುಗಳ ಕ್ರಿಮಿನಲ್ ಹುಟ್ಟುಗುಣಗಳ ಬಗ್ಗೆ ಅರಿವಿದ್ದ ನನ್ನ ಇಬ್ಬರು ಸ್ನೇಹಿತರು ನಾನು ಒಬ್ಬನೇ ಹೋಗುವುದು ಸರಿಯಲ್ಲ ಅಂತ ಅಂದಾಜಿಸಿ, ತಾವೂ ನನ್ನೊಟ್ಟಿಗೆ ಹೊರಟರು.

ಮಾಯಕೊಂಡದಿಂದ ಕೇವಲ ಒಂದು ಕಿಲೋಮೀಟರ್ ದೂರದಲ್ಲಿರೋ ಹದ್ನೆ ಗ್ರಾಮವೇ ಈ ವಿಷಜಾಲದ ಸುದ್ದಿ ಬಿಟ್ಟುಕೊಟ್ಟ ಊರು. ಬೆಳಗ್ಗೆ ಏಳು ಗಂಟೆಗೆಲ್ಲ ನಾವು ಆ ಊರಿನಲ್ಲಿದ್ದೆವು. ಸುಮಾರು ಮೂರು ಸಾವಿರ ಜನಸಂಖ್ಯೆಯಿರುವ ಮಧ್ಯಮ ಗಾತ್ರದ ಹಳ್ಳಿ. ಲಿಂಗಾಯತರು, ನಾಯಕರು, ಮಾದಿಗ ಜನಾಂಗಗಳು ಇವೆಯಾದರೂ ಲಂಬಾಣಿ ಸಮುದಾಯವೇ ಇಲ್ಲಿ ಮೆಜಾರಿಟಿಗರು. ಸರಾಸರಿ ಭಾರತದಂತೆ ಇಲ್ಲೂ ಬಡತನವಿದೆ, ಬಡತನವನ್ನು ಜೀವಂತವಾಗಿಡಲು ರಾಜಕಾರಣವೂ ಇದೆ. ರಾಜಕಾರಣದ ಚುಕ್ಕಾಣಿ ಲಂಬಾಣಿಗರ ಕೈಯಲ್ಲಿದೆ. ಅಲ್ಲಿನ ರಾಜಕೀಯ ಚಿತ್ರಣದ ಬಗ್ಗೆ ನಮಗೆ ಮೊದಲೇ ಸಿಕ್ಕಿದ್ದ ಮಾಹಿತಿಗಳನ್ನು ನಿಜಗೊಳಿಸುವ ಕುರುಹುಗಳು ಕಂಡವು.

ನಾವು ಹೋಗಬೇಕಿದ್ದ ಮನೆಯನ್ನು ಹುಡುಕಲು ಹೆಚ್ಚೇನು ತ್ರಾಸಾಗಲಿಲ್ಲ. ಒಳಗಿರುವ ಬಡತನದ ದಾರಿದ್ರ್ಯವನ್ನು ಬಚ್ಚಿಡಲು ಮನೆ ಕಿಂಚಿತ್ತೂ ಚೌಕಾಸಿ ಮಾಡಲಿಲ್ಲ. ನಾವು ಹುಡುಕುತ್ತಿದ್ದುದು ಆಶಾ ಎಂಬ ಹೆಂಗಸನ್ನು. ಆಕೆಯೇ ಸದ್ಯದ ಜಾಲಕ್ಕೆ ಬಲಿಯಾಗಿರೋ ತಾಜಾ ಸಂತ್ರಸ್ತೆ. ಮನೆಯ ಒಳಹೊಕ್ಕ ನಮ್ಮನ್ನು ಉಪಚರಿಸುವ ಸ್ಥಿತಿಯಲ್ಲಿ ಆಕೆ ಇರಲಿಲ್ಲ. ಅದು ನಮಗೂ ಬೇಕಾಗಿರಲಿಲ್ಲ. ಆಕೆ ಹೇಳಲಿರುವ ವಂಚನೆಯ ಕತೆಯಷ್ಟೇ ನಮಗೆ ಮುಖ್ಯವಾಗಿತ್ತು.

ಆಕೆ ವಿಧವೆ, ಸಾಲದ್ದಕ್ಕೆ ಮೂರು ಹೆಣ್ಮಕ್ಕಳು. ಮೂರನೇ ಮಗುವನ್ನು ಗರ್ಭದಲ್ಲಿ ಹೊತ್ತಿದ್ದಾಗಲೇ ಗಂಡ ಮುತ್ತುನಾಯ್ಕ ಶಿವನ ಪಾದ ಸೇರಿದ್ದ. ಹಳ್ಳಿಗಾಡಿನ ಬಡವರಿಗೆ ಬಳುವಳಿಯಾಗಿ ಬರುವ ಕುಡಿತದ ಚಟವೇ ಅವನನ್ನು ಅಕಾಲಿಕ ಮರಣಕ್ಕೆ ದೂಡಿತ್ತು. ಗಂಡನಂತೆ ಹೆಂಡತಿ ಆಶಾ ಕೂಡಾ ಕುಡಿತದ ದಾಸಿ. ಅದರಲ್ಲೂ ಗಂಡ ಸತ್ತಮೇಲೆ ಅವಳ ಕುಡಿತದ ಚಟ ಮತ್ತಷ್ಟೂ ಜಾಸ್ತಿಯಾಗಿತ್ತು. ಬದುಕೂ ದುಸ್ತರವಾಗಿತ್ತು. ಕೊನೆಯ ಮಗುವಿಗೆ ಈಗಿನ್ನು ಮೂರು ವರ್ಷ. ಹೆಸರು ಗೀತಾ. ನಮಗೆ ತೋರಿಸಿದ ಫೋಟೋದಲ್ಲಿ ಬಲು ಮುದ್ದಾದ ಮುಖದ ಮಗು. ಸದ್ಯ ಖೂಳರ ಕೈಗೆ ಸಿಲುಕಿ ನಿಗೂಢವಾಗಿ ಮಾರಾಟವಾಗಿರೋ ನತದೃಷ್ಟ ಮಗು ಆಕೆಯೇ!

ಇದಿಷ್ಟು ಆ ಕುಟುಂಬದ ಬ್ರೀಫ್ ಹಿನ್ನೆಲೆ. ಮೊದಲೇ ಕುಡಿತದ ದಾಸ್ಯದಿಂದ ಜರ್ಜರಿತಳಾಗಿದ್ದ ಆಶಾ, ಈಗ ಹೆತ್ತ ಕುಡಿಯನ್ನು ಕಳೆದುಕೊಂಡು ಇನ್ನಷ್ಟೂ ವಿಚಲಿತಳಾಗಿದ್ದಳು. ನಮ್ಮ ಪ್ರಶ್ನೆಗಳಿಗೆ ಆಕೆ ವ್ಯವಸ್ಥಿತವಾಗಿ ಉತ್ತರಿಸದಿದ್ದರೂ ಆಕೆಯ ಮಾತುಗಳಲ್ಲಿ ಸತ್ಯ ಎದ್ದು ಕಾಣುತ್ತಿತ್ತು. ತನ್ನ ಸ್ವಂತ ಮುಠ್ಠಾಳತನದಿಂದ ಮಗಳನ್ನು ಕಳೆದುಕೊಂಡ ಮಮತೆಯ ವೇದನೆ ಕೇಳಿಸುತ್ತಿತ್ತು. ಬಾಯಿಬಿಡದಂತೆ ಆಕೆಯನ್ನು ಬೆದರಿಸಿದ್ದ ದಮನ ಕಾಣಿಸುತ್ತಿತ್ತು. ಅವಳಿಗೇ ಅರಿವಿಲ್ಲದೆ ಭಯಾನಕ ಜಾಲವೊಂದನ್ನು ಬಿಚ್ಚಿಡುವ ಮೊದಲ ಸಾಕ್ಷಿದಾರಳಾಗಿ ತನ್ನ ದುರಂತವನ್ನು ಹೇಳಿಕೊಳ್ಳುತ್ತಾ ಸಾಗಿದಳು. ಅವಳ ನೋವು ತುಂಬಿದ ದನಿಯನ್ನು ನಾನು


ಮಗಳು ಗೀತ

'ಪತ್ರಿಕೆ'ಯೊಂದಿಗೆ ನೋವು ತೋಡಿಕೊಳ್ಳುತ್ತಿರುವ ತಾಯಿ ಆಶಾ

ಹೀಗೆ ಅರ್ಥ ಮಾಡಿಕೊಂಡೆ...

ಬಡತನಕ್ಕೆ ಗಾಳ

ಗಂಡನಿಲ್ಲದ ವಿದ್ರಾವಕ ಬದುಕಿಗೆ ಆದಾಯವೂ ಇರಲಿಲ್ಲ. ಮೂರು ಹೆಣ್ಮಕ್ಕಳನ್ನು ಸಾಕಲು ಅಸಹಾಯಕಳಾಗಿದ್ದ ಆಶಾಗೆ ಕುಡಿತದ ಚಟ ಬೇರೆ ಪೀಡಿಸುತ್ತಿತ್ತು. ಅದೇ ಊರಿನ ಸುರೇಶ್ ನಾಯ್ಕ, ದಿನೇಶ್ ನಾಯ್ಕ ಎಂಬಿಬ್ಬರು ಖತರ್ನಾಕ್ ಸೋದರ ಜೋಡಿಯ ಕಣ್ಣು ಆಶಾಳ ಬಡತನದ ಮೇಲೆ ಬಿದ್ದಿತ್ತು. ಊರಲ್ಲಿ ಬಿಜೆಪಿ ಕಾರ್ಯಕರ್ತರು ಅಂತ ಪೋಜು ಕೊಟ್ಟುಕೊಂಡು ಜನರಿಗೆಲ್ಲ ಸುಖಾಸಮ್ಮನೆ ಕಿರುಕುಳ ಕೊಟ್ಟುಕೊಂಡು ಓಡಾಡುತ್ತಿದ್ದ ಇವರಿಗಿದ್ದ ಮತ್ತೊಂದು ಕರಾಳ ಮುಖ ಊರ ಜನರಿಗೆ ತಿಳಿದೇ ಇರಲಿಲ್ಲ.


ಆಶಾಳ ಮಗು ಕಳ್ಳಸಾಗಾಣಿಕೆಯ ನಂತರ ಈ ಸೋದರ ಜೋಡಿಯ ದಂಧೆಗಳು ಒಂದೊಂದಾಗಿ ಬೆಳಕಿಗೆ ಬರುತ್ತಿವೆ. ಅದರಲ್ಲೂ ಬೆಂಗಳೂರಿನಲ್ಲಿರೋ ಇವರ ತಂಗಿ ಅರ್ಪಿತ ಎಂಬ ಚಮಕ್ ಲೇಡಿಯ ಎಂಟ್ರಿಯನ್ನು ನೋಡಿದರೆ ಇವರದು ಮಕ್ಕಳ ಕಳ್ಳಸಾಗಾಣಿಕೆಯ ವ್ಯವಸ್ಥೆಯ ಜಾಲವೇ ಇರಬಹುದೆನ್ನುವ ಅನುಮಾನ ಮೂಡಿಸುತ್ತದೆ. ಸುರೇಶ್ ನಾಯ್ಕ ಮತ್ತು ದಿನೇಶ್ ನಾಯ್ಕನಿಗೆ ಪೊಲಿಟಿಕಲ್ ಗಾಡ್‌ಫಾದರ್ ಆಗಿ ನಿಂತಿರೋದು ಉಮೇಶ್ ನಾಯ್ಕ ಎಂಬ ಮತ್ತೊಬ್ಬ ಸಂಬಂಧಿ. ಈತ ಹಾಲಿ ಕೊಡಗನೂರು ಕ್ಷೇತ್ರದ ಬಿಜೆಪಿ ಜಿಲ್ಲಾ ಪಂಚಾಯತಿ ಮೆಂಬರು. ಈ ಹಿಂದೆ 2010ರಲ್ಲಿ, ಉಮೇಶ್ ನಾಯ್ಕನ ಹೆಂಡತಿ ಶಾರದಮ್ಮ ಜಿ.ಪಂ. ಸದಸ್ಯೆಯಾಗಿದ್ದಾಗ ಗಂಡಹೆಂಡತಿ ಜೋಡಿ ಜಿ.ಪಂ. ಕ್ಷೇತ್ರವನ್ನು ಸುಣ್ಣಗೆ ಬೋಳಿಸಿ ದುಂಡಗಾಗಿದ್ದರು. ಅದಾದಮೇಲೆ ಹುಟ್ಟೂರು ಹದ್ನೆ ತೊರೆದು ದಾವಣಗೆರೆ ಸೇರಿದ ಉಮೇಶ್ ನಾಯ್ಕ ಹಾಲಿ ಕೊಡಗನೂರು ಜಿ.ಪಂ. ಕ್ಷೇತ್ರದ ಬಿಜೆಪಿ ಜೆಡ್‌ಪಿ ಮೆಂಬರಾಗಿ ಆಯ್ಕೆಯಾಗಿದ್ದಾನೆ. ಇವನ ಕುಮ್ಮಕ್ಕಿನಿಂದಲೇ ಸುರೇಶ್ ನಾಯ್ಕ ಮತ್ತು ದಿನೇಶ್ ನಾಯ್ಕ ಲಂಗುಲಗಾಮಿಲ್ಲದೆ ಮೆರೆದಾಡುತ್ತಿದ್ದಾರೆ. ಇಂತಹ ಕಲ್ಯಾಟಕ್ಕೆ ಕೈಹಾಕಲು ಈ ಕುಮ್ಮಕ್ಕೇ ಕಾರಣ.

ತೀರ್ಥಹಳ್ಳೀಲಿ ಡೀಲ್

ಆಶಾಳ ಬಡತನ ಮತ್ತು ಅಸಹಾಯಕತೆ ಮೇಲೆ ಕಣ್ಣು ಹಾಕಿದ ಜೋಡಿ ಅವಳ ಕುಡಿತದ ಚಟವನ್ನೇ ಪ್ಲಸ್ ಪಾಯಿಂಟ್ ಮಾಡಿಕೊಂಡು 'ನಿನಗೆ ಮಕ್ಕಳನ್ನು ಸಾಕೋದು ಕಷ್ಟವಾಗುತ್ತೆ, ಅದಕ್ಕೇ ನಾವು ಹೇಳಿದಂತೆ ಚಿಕ್ಕ ಮಗಳನ್ನು ಮಾರಿಬಿಟ್ಟರೆ ಬರೋ ದುಡ್ಡಲ್ಲಿ ನೀನು ಆರಾಮಾಗಿ ಕುಡಿದುಕೊಂಡಿರಬಹುದು. ಜೊತೆಗೆ ಒಂದು 'ಮಗು ಸಾಕುವ ತಾಪತ್ರಯವೂ ತಪ್ಪುತ್ತೆ' ಅಂತ ಪುಸಲಾಯಿಸಿದ್ದರು. ಕುಡಿತಕ್ಕೆ ದಾಸಿಯಾಗಿದ್ದ ಆಶಾಳಿಗೂ ತನ್ನ ಪರಿಸ್ಥಿತಿಯನ್ನು ಗಮನಿಸಿ ಅದೇ ಸರಿ ಅಂತನ್ನಿಸಿತ್ತು. ಆದರೆ ಯಾವ ಕಾರಣಕ್ಕೂ ಈ ವಿಚಾರ ಬೇರೆಯವರಿಗೆ ಗೊತ್ತಾಗಬಾರದು ಅನ್ನೋ ಶರತ್ತು ವಿಧಿಸಿ, ಆಕೆಯನ್ನು ಒಪ್ಪಿಸಿದ್ದರು.

ತಮ್ಮ ಪ್ಲ್ಯಾನ್ ಪ್ರಕಾರ, ಹೆಣ್ಣುಮಗು ಗೀತಾ ಸಮೇತ ತಾಯಿ ಆಶಾಳನ್ನು ಹದ್ನೆಯಿಂದ ಈ ಅಣ್ತಮ್ಮಂದ್ರ ಜೋಡಿ ಸೀದಾ ಕರೆಯ್ಕೊಂಡು ಶಿವಮೊಗ್ಗದ ತೀರ್ಥಹಳ್ಳಿಗೆ. ತೀರ್ಥಹಳ್ಳಿಯ ಬಸ್‌ಸ್ಟ್ಯಾಂಡ್‌ಗೆ ಬಂದವರೇ ಆಶಾಳ ಕೈಗೆ ಕೇವಲ ಆರು ಸಾವಿರ ತುರುಕಿ ಮಗುವನ್ನು ಅಪಹರಿಸಿ ಒಯ್ದಿದ್ದರು. ಮೊದಲು ಆ ಮಗುವನ್ನು ಯಾರೋ ದತ್ತು ತಗೋಳ್ತಾರೆ ಅಂತ ಹೇಳಲಾಗಿದ್ದರೂ, ಅಲ್ಲಿ ಯಾರೂ ಇರಲಿಲ್ಲ. ಆಶಾಳನ್ನು ಲಾಡ್ಜ್‌ವೊಂದರಲ್ಲಿ ಕೂಡಿಹಾಕಿ ಇಡೀ ರಾತ್ರಿ ಕಂಠಪೂರ್ತಿ ಕುಡಿಸಿದ್ದರು.

ಸುರೇಶ್ ನಾಯ್ಕ ಮಗುವನ್ನು ಕರೆದೊಯ್ದರೆ, ದಿನೇಶ್ ನಾಯ್ಕ ಆಶಾಳ ಬಳಿಯೇ ಇದ್ದು ಆಕೆ ರಾದ್ಧಾಂತ ಮಾಡದಂತೆ ತಡೆಯಲು ಯತ್ನಿಸುತ್ತಿದ್ದ. ಹಣದ ಆಸೆಗೆ ಮೂರು ವರ್ಷದ ತನ್ನ ಮಗಳನ್ನು ಮಾರಾಟ ಮಾಡಲು ಆಶಾ ಒಪ್ಪಿಕೊಂಡಿದ್ದೇನೋ ನಿಜ. ಆದರೆ ಯಾವಾಗ ಮುದ್ದಾದ ಮಗು ತನ್ನಿಂದ ಕಣ್ಮರೆಯಾಯಿತೋ ಅವಳ ಒಳಗಿನ ತಾಯ್ತನ ವಿಲವಿಲ ಒದ್ದಾಡಲು ಶುರುಮಾಡಿತ್ತು. 'ನನಗೆ ಮಗು ಬೇಕು. ಕೊನೆಯ ಬಾರಿಗಾದರೂ ಮಗುವಿನ ಮುಖ ತೋರಿಸು' ಎಂದು ದಿನೇಶ್ ನಾಯ್ಕನನ್ನು ಗೋಗರೆದಿದ್ದಳು.


ಉಮೇಶ್ ನಾಯ್ಕ್

ಮಗು ಮಾರಾಟದಂತಾ ಕಿರಾತಕ ಬುದ್ಧಿಯ ದಿನೇಶ್ ನಾಯ್ಕನಿಗೆ ಕರುಳ ಸಂಕಟ ಅದ್ಹೇಗೆ ಅರ್ಥವಾಗಬೇಕು? ಹಠಮಾಡುತ್ತಿದ್ದ ಆಶಾಳಿಗೆ ದಿನೇಶ್ ನಾಯ್ಕ ಕೊಲೆಯ ಧಮಕಿ ಹಾಕಿದ್ದಲ್ಲದೆ ಅವಳ ಕೈಗಿಟ್ಟಿದ್ದ ಆರು ಸಾವಿರವನ್ನೂ ಕಿತ್ತುಕೊಂಡು ಕಾಣದ ಊರಿನಲ್ಲಿ ಆಶಾಳನ್ನು ನಿರ್ಗತಿಕಳನ್ನಾಗಿ ಮಾಡಿದ್ದ. ಆಗಲಾದರೂ ಆಕೆ ತಮ್ಮ ದಾರಿಗೆ ಬರಬಹುದೆನ್ನುವುದು ಅವನ ನಂಬಿಕೆಯಾಗಿತ್ತು. ಯಾವಾಗ ಕೈಲಿ ಬಿಡಿಗಾಸಿಲ್ಲದಂತಾಯಿತೋ ಆಗ ಆಶಾ ಕರುಳ ಕುಡಿಯ ಹಂಬಲ ಮರೆತು ತೆಪ್ಪಗಾಗಿದ್ದಳು. ಮಗುವನ್ನು ತೀರ್ಥಹಳ್ಳಿಯಲ್ಲಿ ಮಾರಾಟ ಮಾಡಿದರೂ ಅದು ಅಲ್ಲಿಂದ ದೂರ ಹೊರಟೋಗಿದೆ ಎಂಬುದು ಸ್ಪಷ್ಟ. ಬಹುಶಃ ಇವರಿಬ್ಬರ ತಂಗಿ, ಬೆಂಗಳೂರಿನಲ್ಲಿರೋ ಅರ್ಪಿತಾ ಇಂತಹ ಮಕ್ಕಳ ಮಾರಾಟ ದಂಧೆ ನಡೆಸುತ್ತಿದ್ದು, ಅನುಮಾನ ಬರದ... ತೀರ್ಥಹಳ್ಳಿಗೆ ಕರೆತಂದು ಅಲ್ಲಿಂದ ಅರ್ಪಿತಾ ಮೂ... ಬೆಂಗಳೂರಿಗೋ, ಮತ್ತೆಲ್ಲಿಗೋ ಸಾಗಿಸಿರುವ ಸಾಧ್ಯತೆಯ...

ಅರ್ಪಿತಾ ಎಂಟ್ರಿ

ಇಡೀ ಪ್ರಕರಣ ಒಂದು ಜಾಲದಂತೆ ಅನುಮ... ಮೂಡಿಸಲು ಮುಖ್ಯ ಕಾರಣವಾಗಿರೋದು ತ... ಅರ್ಪಿತಾಳ ಎಂಟ್ರಿ. ಆಶಾ ಊರಿಗೆ ವಾಪಾಸಾದ ನಂತರ... ತನಗೆ ತನ್ನ ಮಗು ವಾಪಾಸ್ ಬೇಕು ಅಂತ ವರ... ತೆಗೆಯುತ್ತಲೇ ಇದ್ದಳು. ತಮಗಿದ್ದ ಪೊಲಿಟಿಕಲ್ ಪ್ರಭ... ಮತ್ತು ಗೂಂಡಾ ಇಮೇಜುಗಳ ಬಲದಿಂದ ಆಕೆಯ... ಸ್ವಲ್ಪ ದಿನಗಳ ಮಟ್ಟಿಗೆ ಹೆದರಿಸುವಲ್ಲಿ ಸುರೇಶ್ ಮ... ದಿನೇಶ್ ನಾಯ್ಕಗಳು ಯಶಸ್ವಿಯಾಗಿದ್ದರೂ ಗುಸುಗು... ಗಾಳಿ ಸುದ್ದಿ ಊರ ತುಂಬಾ ಹರಡಲು ಶುರು ಮಾಡಿ... ಅಲ್ಲದೇ ಆಶಾಳ ಸಂಬಂಧಿ ಗಂಗೀಬಾಯಿ ಎಂಬ ಮುದ... ಕೂಡಾ ವಿಷಯಕ್ಕೆ ಬಾಯಿಮಾತಿನ ಪ್ರಚಾರ ನೀಡ... ಮುಂದಾಗಿದ್ದಳು. ಹೀಗೇ ಬಿಟ್ಟರೆ ತಮ್ಮ ಬಂಡವ... ಎಲ್ಲಿ ಬಯಲಿಗೆ ಬರುತ್ತೋ ಅಂತ ಅಣ್ಣತಮ್ಮಂದಿ... ಗಾಬರಿ ಬಿದ್ದಾಗಲೇ ಅರ್ಪಿತಾ ಅಚಾನಕ್ಕಾಗಿ ಎಂಟ್ರಿ ಕೊ... ಒಂದು ಅದ್ಭುತ ದಾಳ ಉರುಳಿಸಿಹೋಗುತ್ತಾಳೆ.

ಬೆಂಗಳೂರಿಂದ ಧಾವಿಸಿಬಂದ ಅರ್ಪಿತಾ ತ... ಅಣ್ಣಂದಿರ ಕೈಗೆ ಒಂದು ಕರಾರುಪತ್ರವನ್ನು ಕೊ... ಹೋಗಿದ್ದಳು. ಅದು ತನ್ನ ಮಗುವನ್ನು ಸ್ವಇಚ್ಛೆಯಿ... ದತ್ತು ನೀಡುತ್ತಿರುವುದಾಗಿ ಬರೆದ ಕಾಗದದ ಮೇಲೆ ಆ... ಹೆಬ್ಬೆಟ್ಟು ಒತ್ತಿದ್ದ ಪತ್ರ! ಆ ಪತ್ರವನ್ನೇ ಗಂಗೀಬಾ... ಮತ್ತು ಆಶಾಳ ಮುಖಕ್ಕಿಡಿದ ಧೂರ್ತ ಸೋದರರು ನಿ... ಒಪ್ಪಿ ಮಗುವನ್ನು ಕೊಟ್ಟು ಈಗ ದಾಂಧಲೆ ಮಾಡುತ್ತಿದ್ದೀ... ನಿನ್ನ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡ್ತೇವೆ ಅ... ಹೆದರಿಸಿದ್ದರು. ಕುಡಿದ ಅಮಲಿನಲ್ಲಿ ಅಂತ ಪತ್ರಕ್ಕೆ ಆ... ಹೆಬ್ಬೆಟ್ಟು ಒತ್ತಿದ್ದನೋ ಇಲ್ಲವೋ ಅಂತ ಆಶಾ... ಗೊಂದಲವಾಗಿತ್ತು. ಯಾಕೆಂದರೆ ... ಆಕೆಯ... ತೀರ್ಥಹಳ್ಳಿಗೆ ಕರೆದೊಯ್ದ ಘಳಿಗೆಯಿಂದಲೂ ಇಡೀ ದ... ಆಕೆಗೆ ಭರ್ಜರಿಯಾಗೇ ಪಾನ ಸೇವನೆ ಮಾಡಿಸಿದ್ದ... ಅಂತಹ ಮತ್ತಿನಲ್ಲಿದ್ದ ಆಶಾಳಿಂದ ಹೆಬ್ಬೆಟ್ಟು ಹಾಕಿಸಿಕೊಂಡ... ಲೂಬಹುದು.

ಆ ವೀಕ್ನೆಸ್ಸನ್ನೇ ಬಂಡವಾಳ ಮಾಡಿಕೊಂಡು ಕರಾ... ಪತ್ರವನ್ನು ಸೃಷ್ಟಿಸಿ ಬ್ಲ್ಯಾಕ್‌ಮೇಲ್ ಮಾಡಿ ಬೆದರಿಸುವ... ಅರ್ಪಿತಾ ಚಾಲಾಕಿಯಾಗಿದ್ದಾಳೆಂದರೆ ಆಕೆ ಇಂಥಾ ಮ... ಕಳ್ಳಸಾಗಾಣಿಕೆಯಲ್ಲಿ ಪಳಗಿದವಳೇ ಆಗಿರಬೇಕು. ಒಂದೊ... ಆ ಕರಾರುಪತ್ರಕ್ಕೆ ಆಶಾ ಹೆಬ್ಬೆಟ್ಟು ಒತ್ತಿದ್ದರ... ಮೈಮರೆಯುವಂತೆ ಕುಡಿಸಿ ವಂಚನೆಯಿಂದ ಹೆಬ್ಬೆ... ಒತ್ತಿಸಿಕೊಳ್ಳುವುದು ಸಹ ಪಳಗಿದ ಕಿರಾತಕರ ತಲೆಯ... ಮೊಳೆಯುವ ಐಡಿಯಾವೇ ಸರಿ! ಒಂದು ಮೂಲ... ಪ್ರಕಾರ ಆ ಮಗುವನ್ನು ಅವರು ಎರಡೂವರೆ ... ರೂಪಾಯಿಗೆ ಮಾರಾಟ ಮಾಡಿ ಪುಡಿಗಾಸು ಆರು ಸಾ... ರೂಪಾಯಿಯನ್ನು ಆಶಾಳ ಕೈಗೆ ತುರುಕಿದ್ದಾರೆ... ಅಂದಮೇಲೆ ಇದು ಒಂದು ವ್ಯವಸ್ಥಿತ ಜಾಲವೇ ಇರಬೇಕು...

ಅಂದಹಾಗೆ, ಈ ಪ್ರಕರಣ ಸದ್ದು ಮಾಡಲು ಶು... ಮಾಡಿದ ಆರಂಭದಲ್ಲಿ ಆಶಾಳ ಸಂಬಂಧಿ ತಿಪ್ಪೇಸ್ವಾ... ಎಂಬಾತ ಎಂಟ್ರಿಕೊಟ್ಟು ಆಕೆಯ ಪರವಾಗಿ ನಿಲ್ಲು... ಪೋಜು ಕೊಟ್ಟಿದ್ದ. ಈತ ಹೊಳಲ್ಕೆರೆಯ... ಪೊಲೀಸಾಗಿದ್ದಾನಂತೆ. ಮನೆಮುರುಕ ಸೋದರ ಜೋ... ಎಚ್ಚರಿಕೆ ನೀಡಿ ಹೋಗಿದ್ದ ತಿಪ್ಪೇಸ್ವಾಮಿ ಆನಂತರ ... ತಲೆ ಹಾಕದಿರುವುದು ನೋಡಿದರೆ ಅವನನ್ನೂ ಇ... ಪಳಗಿಸಿ ತೆಪ್ಪಗಾಗಿಸಿರುವ ಸಾಧ್ಯತೆ ಇದೆ. ಇವೆಲ್ಲ ಒ... ಜಾಲದ ವ್ಯವಸ್ಥಿತ ತಂತ್ರಗಾರಿಕೆಯ ಲಕ್ಷಣಗಳ... ಕಂಡುಬರುತ್ತವೆ.

ಅಡ್ನಾಡಿ ಅಣ್ತಮ್ಮ, ಊರುಬಿಟ್ಟ ತಂಗ್ಯವ್ವ

ಏನಿಲ್ಲವೆಂದರೂ ಇವತ್ತು ಹಲವು ಲಕ್ಷಗಳಿಗೆ ತೂಗ... ಸುರೇಶ್ ನಾಯ್ಕ ಮತ್ತು ದಿನೇಶ್ ನಾಯ್ಕ ಕೆಲ ವರ್ಷ... ಹಿಂದೆ ಏನೆಂದರೆ ಏನೂ ಅಲ್ಲ. ಹಾಗೆ ನೋಡಿ...

⏭ 0...

...ಇನ್ನೊಸಿ ದಿನೋಗ್ಲಿ ಮೂರು ಪಾರ್ಟಿ ಒಂದಾಯ್ತವೆ!

ಥೂತ್ತೇರಿ

▸ ಯಾಹೂ



ದಾವಣಗೆರೆ ಭಾಷೆಯಲ್ಲೇ ಹೇಳುವುದಾದರೆ ಹಗಲು ...ದರಕ್ಕೆ ಹುಟ್ಟಿದ್ದ ಕೆಲವು ಹಿಂದೂ ಜಾಗರಣ ವೇದಿಕೆಯ ...ಂಡರು ಹಗಲು ಹೊತ್ತೇ ಯೋಗೀಶ್ ಮಾಸ್ತರರಿಗೆ ...ಸಿ ಬಳಿದವಂತಲ್ಲಾ. ಲಂಕೇಶರ 82ನೇ ಹುಟ್ಟು ಹಬ್ಬದ ...ಂಗವಾಗಿ ಜರುಗಿದ ಸಮಾವೇಶ ಸಾಣೇಹಳ್ಳಿ ...ಂಡಿತಾರಾಧ್ಯರಿಂದ ಉದ್ಘಾಟನೆಗೊಂಡಿತ್ತು. ಸಂಸ್ಕೃತಿ ಚಿಂತಕ ...ಜೇಂದ್ರ ಚೆನ್ನಿಯವರಿಂದ 'ಲಂಕೇಶ್ ಇದ್ದಿದ್ದರೆ' ಎಂಬ ...ಷಯದ ಭಾಷಣವೂ ಜರುಗಿತ್ತು. ಅಲ್ಲಿಗೆ ತಮ್ಮ ಪುಸ್ತಕ ...ಡಾರಲು ಬಂದಿದ್ದ ಯೋಗೀಶ್ ಮೇಲೆ ದಾಳಿ ಮಾಡಲು ...ಾಗರಣೆ ಪುಂಡರಿಗೆ ಧೈರ್ಯ ಬರಲಿಲ್ಲ. ಆದರೆ ಯೋಗೀಶ್ ...ೊರಹೋಗುವುದನ್ನೇ ಕಾದಿದ್ದು ಕೃತ್ಯ ನಡೆಸಿದ್ದಾರೆ. ಯಾರೋ ...ರಹೇಳಿದ್ದಾರೆಂಬಂತೆ ಸ್ಕೂಟರಲ್ಲಿ ಹೋದ ಯೋಗೇಶ್ ...ಾಸ್ತರು ಮಸಿ ಬಳಿಸಿಕೊಂಡು ಅಷ್ಟೇ ವೇಗದಲ್ಲಿ ಬಂದರು. ...ದು ಹೋಳಿಯ ದಿನವಾದ್ದರಿಂದ ಯಾರೂ ಈ ಬಣ್ಣದ ...ಕೃತಿಗೆ ಅಚ್ಚರಿ ಪಡಲಿಲ್ಲ. ಜೊತೆಗೆ ಇಂತಹ ...ಳಿಗಳಿಂದ ವಿಚಲಿತರಾಗದ ಮಾಸ್ತರು ತಾವು ...ವಕಿ ಕೆರೆಯುವ ಮೂಕದೇವತೆಗಳಷ್ಟೇ ...ಸನ್ನತೆಯಿಂದ "ಇಂತಹ ಮಸಿಗೆ ಹೆದರುವುದಿಲ್ಲ. ...ದರೆ ಅದರಲ್ಲಿ ಮೈಕೈ ಉರಿಯುವಂತಹ ...ಸಾಯನ ಬೆರೆಸಬೇಡಿ'' ಎಂಬಂತೆ ...ಾತನಾಡಿದರಲ್ಲಾ, ಥೂತ್ತೇರಿ!!

* * * *

ಯೋಗೇಶ್ ಮಾಸ್ತರರು ಪುರಾಣ ಪಾತ್ರಗಳ ಅಕರಾಳ ...ಕರಾಳ ರೂಪಗಳ ವಿಶ್ಲೇಷಣೆ ನಡೆಸಿದ್ದಾರೆ. ಇದನ್ನು ...ಷ್ಟದ ಜಾಗರಣೆ ಪಿಂಡಗಳು "ಈ ಯೋಗೇಶ್ವರ ನಮ್ಮ ...ತಿ, ನಮ್ಮ ನಂಬಿಕೆ, ಜೊತೆಗೆ ನಮ್ಮ ಪೂಜನೀಯ ...ಾತೆಯರ ಮೇಲೂ ದಾಳಿ ನಡೆಸಿದ್ದಾನೆ" ಎಂದು ...ೊಬ್ಬೆಯಿಡಬೇಕಾದರೆ ಓದಿಗೆ ತಿಲಾಂಜಲಿ ಇತ್ತಿರುವ ...ವು ಮಾಸ್ತರನ್ನು ಓದಿಕೊಂಡಿವೆ ಎಂದು ಅರ್ಥ ಅಥವಾ ...ರಿ ವೀರರ ಕೈಗೆ ತಲೆ ಕೊಟ್ಟು ಕುಳಿತಿರುವ ಇವು ...ವುಗಳು ಭೂಬಿಟ್ಟ ತಲೆಕೆಟ್ಟ ಶ್ವಾನಗಳಿರಬೇಕು. ...ದಕ್ಕಿಂತಲೂ "ನಮ್ಮ ಪುರಾಣ, ಇತಿಹಾಸವನ್ನು ನಮ್ಮವರು ...ಾತ್ರ ವಿಶ್ಲೇಷಿಸಬೇಕು. ನೀನಲ್ಲ" ಎಂಬ ಇವರ ಧೋರಣೆಗೆ ...ದಾಹರಣೆ ಕೊಡುವುದಾದರೆ ಪ್ರೊಫೆಸರ್ ಭಗವಾನರು ...ರಾಮಚಂದ್ರ ಮಾಡಿದ ಪಾಪದ ಯಾತನೆ ತಡೆಯಲಾಗದೆ ...ಯೂ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ" ಎಂದರು. ...ಡಲೇ ಬಿ-ಟಿವಿಯಲ್ಲಿನ ಪುರೋಹಿತ ಪಿಂಡವೊಂದು ...ಗವಾನರನ್ನು ಕರೆಸಿ ಹಿಗ್ಗಾಮುಗ್ಗ ರೇಗಿತು. ಆದರೆ ಇದೇ ...ಗತಿಯನ್ನು ಭೈರಪ್ಪನವರು ತಮ್ಮ 'ಉತ್ತರ ಕಾಂಡ'ದಲ್ಲಿ ...ಖಲಿಸಿದ್ದಾರೆ. ರಾಮ ಸರಯೂ ನದಿಯಲ್ಲಿ ಮುಳುಗಿ ... ಹುಡುಕಿದಾಗ ಬಿದ್ದ ಜಾಗದಿಂದ ಎರಡು ಕೋಸು ...ರದಲ್ಲಿ ಶರೀರವು ಒಂದು ಬಂಡೆಗೆ ಸಿಕ್ಕಿಕೊಂಡಿತ್ತು ...ದು ದಾಖಲಿಸಿದ್ದಾರೆ. ಈವರೆಗೆ ನಾಡಿನ ಯಾವ ...ಡಿಯೂ ಭೈರಪ್ಪನನ್ನು ತೆಗಳಿಲ್ಲ. ಬದಲಿಗೆ 'ಉತ್ತರ ...ಂಡ'ದ ವಿಷಯದಲ್ಲಿ ಬಾಯಿ ಹೊಲಿದುಕೊಂಡು ...ಿತಿವೆಯಂತಲ್ಲಾ, ಥೂತ್ತೇರಿ!!

* * * *

ಈ ದೇಶದ ಶೌರ್ಯದ ಲಾಂಛನದಂತಿರುವ ಸಿಖ್ ...ಮುದಾಯದ ಸಾಮ್ರಾಜ್ಯ ಪಂಜಾಬನ್ನು ಕಳೆದುಕೊಂಡಿರುವ ಬಿಜೆಪಿಗಳು ಆ ಬಗ್ಗೆ ಚಕಾರವೆತ್ತದೆ "ಈಗ ನಡೆದ ಎಲ್ಲ ಚುನಾವಣೆಗಳನ್ನು ಗೆದ್ದಿದ್ದೇವೆ" ಎಂದು ಬೊಬ್ಬೆ ಹೊಡೆಯುತ್ತಿರುವಾಗಲೇ ಕ್ರಿಕೆಟ್ ಕಲಿ ಸಿದ್ದು "ಈ ದೇಶದಲ್ಲಿ ಕಾಂಗ್ರೆಸ್ ಗೆಲುವು ಇಲ್ಲಿಂದಲೇ ಆರಂಭವಾಗಿದೆ" ಎಂದಿದ್ದಾನೆ. ಆದರೆ ಕಾಂಗ್ರೆಸ್ ಹತ್ತು ವರ್ಷ ದೇಶ ಆಳಿ ಸುಸ್ತಾಗಿದೆ. ಕಾಂಗ್ರೆ ಹಡಗಿನ ಚುಕ್ಕಾಣಿ ಹಿಡಿದಿದ್ದ ಸೋನಿಯಾ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಮೋದಿಗೆ ಉತ್ತರ ಕೊಡಬಹುದಾದ ಮನಮೋಹನ್ ಸಿಂಗ್ ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಪುಸ್ತಕ ಹಿಡಿದು ಕುಳಿತುಬಿಟ್ಟಿದ್ದಾರೆ. ಎಂದಿನಂತೆ ರಾಹುಲ್ ಗಾಂಧಿ ತನ್ನ ತಬ್ಬಲಿತನವನ್ನು ಮುಂದುವರಿಸಿದ್ದಾರೆ. ಇಂತಹದೊಂದು ಅಸಹಾಯಕ ಸ್ಥಿತಿಯನ್ನು ಕಾಯುತ್ತಿದ್ದವರಂತೆ ನಮ್ಮ ಟಿ.ವಿಗಳಲ್ಲಿನ ಪುರೋಹಿತ ಪಿಂಡಗಳು, ಚೆಡ್ಡಿಗಳು, ಮುಲ್ಲಾಗಳು ಮತ್ತು ಮುಸ್ಲಿಂ ರಾಜಕಾರಣಿಗಳನ್ನು ಕರೆಸಿ "ಮುಂದೆ ನಮಗೆ ಮೋದಿಯೇ ಮುಲ್ಲ" ಎಂಬ ಮಾತುಗಳನ್ನು ಹೊರಡಿಸುತ್ತಿದ್ದಾರಲ್ಲಾ. ಇನ್ನ ಚಕ್ರವರ್ತಿ ಸೂಳೆಮಕ್ಕಳೆಲ್ಲಾ ನಾಡಿನ ತುಂಬ ತಿರುಗುತ್ತ ನಾಲಿಗೆ ಝಳಪಿಸಿಕೊಂಡು "ಉತ್ತರ ಪ್ರದೇಶದಲ್ಲಿ ಮುಸ್ಲಿಮರಿಗೆ ನಾವು ಒಂದು ಸೀಟು ಕೊಡದಿದ್ದರೂ ಅವರೆಲ್ಲ ಬಿಜೆಪಿಗೇ ಓಟು ಮಾಡಿದ್ದಾರೆ. ಕರ್ನಾಟಕದಲ್ಲೂ ಹಾಗೇ ಮಾಡಿ" ಎನ್ನುತ್ತಿವೆಯಂತಲ್ಲಾ. ಅದೇನಾದರಾಗಲಿ ತಮ್ಮ ಜಾತ್ಯತೀತ ನಿಲುವಿನಿಂದಲೇ ಕೃಶವಾಗಿರುವ ಕಾಂಗ್ರೆಸ್ಸಿನ ಅಂತರಾತ್ಮ ಅರಿಯದ ಕೆಲ ಮುಸ್ಲಿಮರು "ಕಾಂಗ್ರೆ ನಮಗೆ ಏನೂ ಮಾಡಿಲ್ಲ" ಎನ್ನುತ್ತಿದ್ದಾರೆ. ಅಚ್ಚರಿ ಎಂದರೆ ಈ ಮುಸ್ಲಿಮರಿಗಾಗಿಯೇ ಗಾಂಧಿ ಗುಂಡಿಗೆ ಬಲಿಯಾದದ್ದು. ಇದು ಯಾವ ಮುಸ್ಲಿಮನ ಬಾಯಲ್ಲಿ ಇದುವರೆಗೂ ಬಂದಿಲ್ಲವಂತಲ್ಲಾ, ಥೂತ್ತೇರಿ!!

* * * *

ಕರ್ನಾಟಕದ ಜಾತ್ಯತೀತ ಜನತಾದಳ ಮೈಕೊಡವಿ ಎದ್ದು ನಿಲ್ಲಬೇಕಾದ ಈ ಸಮಯದಲ್ಲಿ ಕುಮಾರಣ್ಣ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ದೇವೇಗೌಡರಿಗೆ ಪ್ರತಿದಿನವೂ ಇಳಿವಯಸ್ಸನ್ನು ತೋರುತ್ತಿದೆ. ಆದರೂ ಕುಮಾರಣ್ಣನಿಗಿಂತ ಆರೋಗ್ಯವಾಗಿದ್ದಾರೆ. ಆದ್ದರಿಂದ ಮಂಡ್ಯ ಜಿಲ್ಲೆಯಲ್ಲಿ ತಮಗೆ ಎದುರುಬಿದ್ದ ಚಲುವಣ್ಣನನ್ನು ಮುಗಿಸಲು ಸೂಕ್ತ ವ್ಯಕ್ತಿಗಾಗಿ ಶೋಧ ನಡೆಸಿದ್ದಾರೆ. ಮೊದಲಿನಿಂದಲೂ ಅವರ ಮಾನಸ ಪುತ್ರನೆಂದೇ ಬಿಂಬಿತವಾಗಿರುವ ಶಿವರಾಮೇಗೌಡರನ್ನು ಈ ಸಮಯದಲ್ಲಿ ಮಾತನಾಡಿಸಿದರೆ ಹೇಗೆ ಅನ್ನಿಸಿ, ಫೋನ್ ಮಾಡಿದರೆ ರಿಂಗಾಯ್ತು:

ರಿಂಗ್ ಟೋನ್: "ಅನಾಥ ಮಗುವಾದೆ ನಾನು, ಅನಾಥ ಮಗುವಾದೆ..."

"ಹಲೋ ಯಾರು?"

"ನಾನು ಸಾರ್ ಯಾಹು. ಮರೆತುಬುಟ್ರ?"

"ನಿಮ್ಮ ಮರಿಯಕ್ಕಾಯ್ತದೇನಪ್ಪ? ಏನೇಳು."

"ಈಗ್ಯಾವ ಪಾರ್ಟಿ ಸಾರ್ ನೀವು?"

"ಇದೇನಯ್ಯ ಹಿಂಕೇಳ್ತಿ? ಅದ್ಕೆ ನಿಮ್ಮನ್ನಲ್ಲ ತಿಕ್ಕಲಗಳು ಅನ್ನದು."

"ಅಲ್ಲಾ ನೀವು ಕಾಂಗ್ರೆಸ್‌ನಲ್ಲಿದ್ರಿ. ಅದ್ರೆ ಈಚೆಗೆ ಈ ಸಿದ್ದರಾಮಯ್ಯನಿಂದ ಮಂಡ್ಯದಲ್ಲಿ ಕಾಂಗ್ರೆಸ್ ಹಾಳಾಯ್ತು ಅಂದ್ರಲ್ಲ ಅದ್ಕೆ."

"ಅಂಗಂದ್ರೆ ಸರಿ. ಅದ್ಕೆ ಯಾವ ಪಾರ್ಟಿ ಅಂದುಬುಡದ?"

"ಕಾಂಗ್ರೆಸ್ನಲ್ಲಿದ್ದು ಕಾಂಗ್ರೆಸ್ನೇ ಟೀಕೆ ಮಾಡಿದ್ರಲ್ಲ ಅದಕಂಗಂದೆ ಸಾ."

"ನೋಡಯ್ಯ ಮಂಡ್ಯ ಜಿಲ್ಲೇಲಿ ಕಾಂಗ್ರೆಸ್ ಹಾಳಾಗಿದ್ದಕ್ಕೆ ಮೂರು ಜನ ಕಾರಣ. ಒಬ್ಬ ಅಂಬರೀಶ್, ಇನ್ನೊಬ್ಬ ಎಸ್.ಎಂ. ಕೃಷ್ಣ ಮೂರನೇ ವ್ಯಕ್ತಿ ಯಾರಪ್ಪ ಅಂದ್ರೆ ಸಿದ್ದರಾಮಯ್ಯ."

"ಸಿದ್ದರಾಮಯ್ಯ ಮಂಡ್ಯ ಜಿಲ್ಲೇಲಿ ಪಾಟಿ ಕಟ್ಟಕ್ಕಾಯ್ತದ? ಅವುರು ಪಾರ್ಟಿ ಪ್ರಸಿಡೆಂಟಾ?"

"ನಮ್ಮಂಥೋರಿಗೆ ಲೀಡರ್‌ಶಿಪ್ ಕೊಟ್ರೆ ಪಾರ್ಟಿ ಕಟ್ಟಲವಾ?"

"ಎಮ್ಮೆಲ್ಸಿ ಯಲಕ್ಷನ್ನಲಿ ಸೋತರಲ್ಲವಾ ನೀವು?"

"ಸೋತರೇನಾಯ್ತು? ಸಿದ್ದರಾಮಯ್ಯ ಸೋತಿದ್ದಾಗ್ಲೆ ದೇವೇಗೌಡ್ರು ಅವುರ ಪಾರ್ಟಿ ಪ್ರಸಿಡೆಂಟ್ ಮಾಡಿದ್ರು ಗೊತ್ತಾ."

"ಅದು ದೇವೇಗೌಡ್ರ ದೂರದೃಷ್ಟಿ. ಅಂಥಾ ದೂರದೃಷ್ಟಿ ಸಿದ್ದರಾಮಯ್ಯನಿಗೆಲ್ಲದೆ?"

"ಅದ್ಕೆ ನಾನೇಳಿದ್ದು ಸಿದ್ದರಾಮಯ್ಯನಿಂದ ಕಾಂಗ್ರೆಸ್ ಹಾಳಾಯ್ತು ಅಂತ. ಇವರ ಅಹಿಂದ ಕಟ್ಟಿದಾಗ ನಾನೆಷ್ಟು ದುಡದೆ ಗೊತ್ತಾ?"

"ಹೌದಾ ಸಾರ್?"

"ಇಲ್ಲಿಂದ ಹಾಸನಕ್ಕೆ ಬಸ್ಸಲ್ಲಿ ಜನ ತಗಂಡೋಗಿದ್ದೆ. ಇವತ್ತಿಗೂ ಕುರುಬರಿರೋ ಊರಿಗೋಗಿ ಅವುರೆಸರಿದ್ದು ಕರಿತಿನಿ. ಅವುರ ಕೆಲ್ಸ ಮಾಡಿಕೊಡ್ತಿನಿ. ಸಿದ್ದರಾಮಯ್ಯ ಅದನ್ನಾಲ್ಲ ನೆನಿಸಿಕೊಬೇಕು."

"ನಿಮಗಿನ್ನೊಂದು ವಿಷಯ ಗೊತ್ತ?"

"ಯಲ್ಲ ಗೊತ್ತು ಅದೇನೇಳು."

"ಸಿದ್ದರಾಮಯ್ಯ ಫೋನ್ ಮಾಡಿ ನೀನು ಜನ ತಗಂಬಾ, ದುಡ್ಡು ತಗಂಬಾ ಅಂತ ಹೇಳಿರಲಿಲ್ಲ ಅಲ್ಲವೆ?"

"ಅದ್ರು ನಮ್ಮ ಕರ್ತವ್ಯ ನಾವು ಮಾಡಿದ್ದಿವಿ."

"ಮಾಡಿದ ಕರ್ತವ್ಯಕ್ಕೆ ಏನೇನೂ ನಿರೀಕ್ಷೆ ಮಾಡಬಾರ್ದು."

"ರಾಜಕಾರಣದಲ್ಲಿ ಅಂಗಾಗಲ್ಲ, ನಾವು ಮಾಡಿದ್ಕೆ ಪ್ರತಿಫಲ ಬೇಕೆಬೇಕು."

"ಆ ಸಿದ್ದರಾಮಯ್ಯನಿಂದ ಅಂಥ ನಿರೀಕ್ಷೆ ಮಾಡಿದ್ಕೆ ಅಲ್ಲವ ನೋಡಿ ಅಗ್ನೆ ಇಬ್ರಾಹಿಂ ಬೇಜಾರಾಗಿದ್ದ. ಯಾಕೋ ಸುಮ್ಮನಾದ."

"ನಾನೂ ಸುಮ್ಮನಾದೆ ಅತ್ಲಾಗೆ."

"ದಳದ ಟಿಕೆಟ್ಟಿಗೆ ಟ್ರೈ ಮಾಡ್ತಯಿದ್ದಿರಂತೆ?"

"ಇನ್ನೇನು ಮಾಡನಪ್ಪ. ಕಾಂಗ್ರೆಸ್ ನಚಿಗಂಡು ಕುಂತಗಳಕ್ಕಾದತೆ."

"ಅಂದ್ರೆ ಕಾಂಗ್ರೆಸಲಿದ್ದು ದಳದ ಟಿಕೆಟ್ ಮ್ಯಾಲೆ ಕಣ್ಣಿಟ್ಟಿದ್ದಿರ?"

"ದಳ ಕಾಂಗ್ರೆಸ್ಸು ಅಂತ ಏನೂ, ಇನ್ನೊಸಿ ದಿನೋಗ್ಲಿ ಮೂರು ಪಾರ್ಟಿ ಒಂದಾಯ್ತವೆ. ಅಲ್ಲಿ ಟಿಕೆಟ್ ಸಿಗದೋನು ಇಲ್ಲಿಗೋಡಿ ಬತ್ತನೆ. ಇಲ್ಲಿ ಬಾಗ್ಲಾಕಿದ್ರೆ ಅಲ್ಲಿಗೋಡತನೆ ಅಂಗಾಯ್ತದೆ."

"ನಿಮ್ಮ ನಾಗಮಂಗಲದಲ್ಲಿ ಬಿಜೆಪಿ ಕ್ಯಾಂಡೇಟಿಲ್ಲ, ಯಾಕೆ ಅಲ್ಲೂ ಒಂದು ಕೈ ನೋಡಬಾರ್ದು."

"ಅದೇನು ನನಿಗೆ ಕಷ್ಟ ಇಲ್ಲ ಅಶೋಕನಿಗೇಳಿದ್ದಾಯ್ತು."

"ಮುಂದೆ ಬಿಜೆಪಿ ಬರುತ್ತಂತಲ್ಲ ಟ್ರೈ ಮಾಡಿ."

"ನಮ್ಮ ಕಡೆ ಯಲ್ಲ ದಳ ಸ್ಟ್ರಾಂಗಾಗ್ಯದೆ. ದ್ಯಾವೇಗೌಡ್ರು ಆ ಚೆಲುವರಾಯಸ್ವಾಮಿ ಮುಗುಸಕ್ಕೆ ನೀನೇ ಸರಿ ಅಂದವ್ರೆ. ನಾನು ಕಾಯ್ತಿನಿ."

"ನೀವು ಎಸ್ಸೆಂ ಕೃಷ್ಣನ ಪಾಲೋಯರ್‌ಲ್ಲವೆ?"

"ನಮ್ಮಪ್ಪನ ಕಾಲ್ದಲಿ."

"ಅಂಬರೀಶಗೆ ಆತ್ಮೀಯ ಗೆಳೆಯರಾಗಿದ್ರಿ?"

"ಅದ್ಯಲ್ಲ ಮುಗದೋದ ಕತೆ. ಈಗ ನಮ್ಮ ದಾರಿ ನಾವು ನೋಡಿಕಬೇಕು."

"ಅಂಬರೀಶ್ ದಾರಿ ಏನಾದ್ರು ಗೊತ್ತ?"

"ಸುಮ್ಮನೆ ನೋಡ್ತ ಕುಂತವ್ರನೆ."

"ಥೂತ್ತೇರಿ!!!" ■


4◀◀

...ರೆಲ್ಲ ದತ್ತು ಸಂತಾನಗಳು. ಇವರು ಅಜ್ಜ ಅಂತ ...ಯುವ ಸಕ್ರಾ ನಾಯ್ಕ ಎಂಬಾತನಿಗೆ ಮಕ್ಕಳೇ ಇರಲಿಲ್ಲ. ...ಗಾಗಿ ಒಂದು ಮಗುವನ್ನು ದತ್ತು ಪಡೆದು, ಅದಕ್ಕೆ ...ಳಾನಾಯ್ಕ ಎಂಬ ಹೆಸರಿಟ್ಟು ಸಾಕಿಕೊಂಡಿದ್ದ. ಆ ...ಳಾನಾಯ್ಕನಿಗೆ ಹುಟ್ಟಿದವರೇ ಈ ಸುರೇಶ್ ನಾಯ್ಕ, ...ೇಶ್ ನಾಯ್ಕ ಮತ್ತು ಅರ್ಪಿತಾ.


ಅಜ್ಜ ಸಕ್ರಾನಾಯ್ಕ ತನ್ನ ದತ್ತುಮಗ ಕಾಳಾನಾಯ್ಕನಿಗೆ ...ತ ಬರೆದಿದ್ದ ಮೂರು ಎಕರೆ ಜಮೀನು ಬಿಟ್ಟರೆ ...ನ್ನಾದಿ ಅಣ್ತಮ್ಮಂದಿರಿಗೆ ಮತ್ತೇನೂ ಗತಿ ಇರಲಿಲ್ಲ. ...ಮ್ಮ ಸಂಬಂಧಿ ಉಮೇಶ್ ನಾಯ್ಕ ಬಿಜೆಪಿಯ ಲೋಕಲ್ ...ಡರ್ ಆಗಿ ಗಟ್ಟಿಗೊಳ್ಳುತ್ತಿದ್ದಂತೆಯೇ ಅವನ ನೆರಳಿನಲ್ಲೇ ...ರೂ ನಕಲಿ 'ದೇಶ'ಭಕ್ತರಾಗಿ ರಾಜಕಾರಣದಲ್ಲಿ ...ಚಲು ಶುರು ಮಾಡಿದ್ದರು. ಜೊತೆಗೆ ಇಂಥಾ ಕರಾಳ ...ಧಂಗಳಿಗೂ ಕೈಯಿಟ್ಟಿದ್ದರು. ಮಾಯಕೊಂಡ ವಿಧಾನಸಭಾ ...ತ್ರದ ಮಾಜಿ ಶಾಸಕ ಬಸವರಾಜನಾಯ್ಕ, ಹಾಲಿ ಶಾಸಕ ...ಮೂರ್ತಿನಾಯ್ಕನ ಕುಲಸಂಬಂಧಿಗಳೆಂಬ ಲಾಭ ಪಡೆದು ...ರಲ್ಲಿ ಪುಂಡತನ ಶುರುವಿಟ್ಟುಕೊಂಡಿದ್ದರು.

...ಹಾಗಾಗಿಯೇ ಈ ಜೋಡಿ ಹೆದ್ದೆಯಲ್ಲಿ ...ಂಡಾಗಿರಿಯ ಉತ್ತುಂಗದಲ್ಲಿದ್ದಾರೆ. ಊರಲ್ಲಿ ಇವರಿಬ್ಬರ ...ದ್ಧ ಯಾರೂ ಮಾತನಾಡುವಂತಿಲ್ಲ. 2013-14ರಲ್ಲಿ ...ೇಶ್ ನಾಯ್ಕನ ಹೆಂಡತಿ ಮಮತ ಹೆದ್ನೆ ಗ್ರಾಮ ...ಚಾಯ್ತಿ ಮೆಂಬರು. ಅಲ್ಲದೇ ಒಂಭತ್ತು ತಿಂಗಳ ಅವಧಿಗೆ ...ಟ್ಟನಹಳ್ಳಿ ಗ್ರಾಮ ಪಂಚಾಯ್ತಿಗೆ ಅಧ್ಯಕ್ಷೆಯಾಗಿದ್ದವಳು. ...ಂದಲೇ ಸುರೇಶ್ ನಾಯ್ಕ ಸೂಪರ್ ದುಂಡಗಾದ. ...ಟ್ಟುಂದಿನ ಹಣೋದಿತನವೂ ಮಿತಿಮೀರಿತು. ಜೊತೆಗೆ ಹಾಲಿ ಜಿ.ಪಂ. ಬಿಜೆಪಿ ಮೆಂಬರು ಉಮೇಶ್ ನಾಯ್ಕನ ಬೆಂಬಲವೂ ಇತ್ತಲ್ಲ, ಹದ್ದುಮೀರಿ ವರ್ತಿಸಲು ಶುರುಮಾಡಿದ್ದರು. ಮಾಯಕೊಂಡದಲ್ಲಿ ಮರಳು ದಂಧೆಯ ಪ್ರಮುಖರೂ ಇವರೇ. ಮಾಯಕೊಂಡ ಪೊಲೀಸ್ ಠಾಣೆಯ ಅಧಿಕಾರಿ ವೆಂಕಟೇಶರ ತಲೆ ಸವರುತ್ತಲೇ ತಮ್ಮ ದಂಧೆ ಸುಗಮ ಮಾಡಿಕೊಂಡಿದ್ದಾರೆ.

ಈ ಸಹೋದರರ ಮುದ್ದಿನ ತಂಗಿ ಅರ್ಪಿತ ಎಂಬ ಚಮಕ್ ಲೇಡಿ ಬಾಲ್ಯದಲ್ಲೇ ದಾರಿಬಿಟ್ಟವಳು. ಪ್ರಕಾಶ ನಾಯ್ಕ ಎಂಬಾತನೊಟ್ಟಿಗೆ ಇವಳ ಮದುವೆಯಾಗಿತ್ತು



ದಿನೇಶ್ ನಾಯ್ಕ್





ಸುರೇಶ್ ನಾಯ್ಕ್


ಆದರೆ ಅರ್ಪಿತಾಳ ಚಂಚಲತೆಯಿಂದಾಗಿ ದಾಂಪತ್ಯ ಬಹಳದಿನ ಬಾಳಿಕೆ ಬರಲಿಲ್ಲ. ಗಂಡನಿಗೆ ಗುಡ್‌ಬೈ ಹೇಳಿ ಬೆಂಗಳೂರು ಸೇರಿದಳು. ಅಲ್ಲಿ, ಲಫಡಾ ದಂಧೆಯಲ್ಲಿ ಪಳಗಿದ್ದ ಒಬ್ಬ ಮುಸ್ಲಿಂ ಗಂಡಿನ ತೆಕ್ಕೆಗೆ ಬಿದ್ದ ಅರ್ಪಿತಾಳೇ ಈ ಮಕ್ಕಳ ಮಾರಾಟ ಜಾಲದಲ್ಲಿ ಕಿಂಗ್‌ಪಿನ್ ಎನ್ನಲಾಗುತ್ತಿದೆ.

ಮಗುವನ್ನು ದತ್ತು ನೀಡುವುದಕ್ಕೂ ಒಂದಷ್ಟು ಕಾನೂನಿನ ನೀತಿನಿಯಮಗಳಿವೆ. ದತ್ತು ಪಡೆಯುವ ಮತ್ತು ದತ್ತು ನೀಡುವ ದಂಪತಿಗಳು ದೈಹಿಕ ಮತ್ತು ಮಾನಸಿಕವಾಗಿ ಸ್ಥಿಮಿತವಾಗಿರಬೇಕು. ಅದುಬಿಟ್ಟು ಬಡತನದ ಅಸಹಾಯಕತೆಯನ್ನು ಬಳಸಿಕೊಂಡು ತಾಯಿಗೆ ಸಿಕ್ಕಾಪಟ್ಟೆ ಕುಡಿಸಿ ದತ್ತು ಕರಾರಿಗೆ ಸಹಿ ಹಾಕಿಸಿಕೊಳ್ಳುವುದು ಅಪರಾಧ. ಕರಾರುಪತ್ರದಲ್ಲಿ ಇರುವಂತೆ 06-02-2017ರಂದು ಮಗುವನ್ನು ತೀರ್ಥಹಳ್ಳಿ ಬಳಿಯ ಅಗ್ರಹಾರ ಹೋಬಳಿಯ ಅಕ್ಲಾಪುರ ಅಂಚೆ, ಮಜರೆ ಹುಲ್ಲತ್ತಿಯ ಒಕ್ಕಲಿಗ ಜಾತಿಯ ಹೆಚ್.ವಿ. ಪುರುಷೋತ್ತಮ ಮತ್ತು ಶ್ರೀಮತಿ ಲೀಲಾವತಿ ದಂಪತಿಗಳಿಗೆ ದತ್ತು ನೀಡಲಾಗಿದೆ. ಒಂದೊಮ್ಮೆ ಮಗು ತನಗೆ ವಾಪಾಸ್ ಬೇಕು ಅಂತ ತಾಯಿ ಹಂಬಲಿಸಿದರೆ, ಆ ದಂಪತಿಗಳ ಮನವೊಲಿಸಿ ಮಗುವನ್ನು ವಾಪಾಸ್ ಕೊಡಿಸುವುದು ಸುರೇಶ್ ನಾಯ್ಕ ಮತ್ತು ದಿನೇಶ್ ನಾಯ್ಕನಿಗೆ ಕಷ್ಟದ ಮಾತೇನೂ ಅಲ್ಲ. ಆದರೂ ಅವರು ಅದನ್ನು ಅವಾಯ್ಡ್ ಮಾಡುತ್ತಿದ್ದಾರೆಂದರೆ ಇದು ಸಹಜ ದತ್ತು ಪ್ರಕರಣವಲ್ಲ, ಭಾರೀ ಮಾರಾಟದ ವಂಚನೆಯ ಪ್ರಕರಣ ಎನ್ನುವುದು ಸಾಬೀತಾಗುತ್ತದೆ. ಜೊತೆಗೆ ಇಂಥಾ ಕಸುಬಿನ ಜಾಲವೇ ವ್ಯವಸ್ಥಿತವಾಗಿ ಇಲ್ಲಿ ಕಾರ್ಯಾಚರಣೆಗೊಂಡಿರುವುದೂ ದೃಢವಾಗುತ್ತದೆ.

ಪೊಲೀಸರು ಪ್ರಾಮಾಣಿಕವಾಗಿ ಸ್ವಯಂಪ್ರೇರಣೆಯಿಂದ ಮುನ್ನುಗ್ಗಿದ್ದೇ ಆದಲ್ಲಿ ಬಹುದೊಡ್ಡ ಜಾಲವೊಂದು ತೆರೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಆದರೆ ಸುರೇಶ್ ನಾಯ್ಕ ಮತ್ತು ದಿನೇಶ್ ನಾಯ್ಕರ ಪೊಲಿಟಿಕಲ್ ಪುಢಾರಿತನಕ್ಕೆ ತಮ್ಮನ್ನು ತಾವು ಮಾರಿಕೊಂಡು ಅವರ ಮರಳುದಂಧೆಗೆ ಸಲಾಮು ಹೊಡೆಯುತ್ತಿರುವ ಮಾಯಕೊಂಡ ಎಸ್‌ಐ ವೆಂಕಟೇಶ್‌ರಿಂದ ಇದು ಸಾಧ್ಯವಾ? ■







ಶಾಕ್ ನೀಡಿದ ಪಂಚ ರಾಜ್ಯಗಳ ಫಲಿತಾಂಶ

ಪಂಚ ರಾಜ್ಯ ಫಲಿತಾಂಶಗಳು ವಿಚಾರವಂತರಿಗೆ ಶಾಕ್ ನೀಡಿವೆ. ಮನುಜಪ್ರೇಮಿಗಳ ನಿದ್ದೆಗೆಡಿಸಿವೆ. ಒಂದೆಡೆ ಉತ್ತರ ಪ್ರದೇಶದಲ್ಲಿ 1951ರ ನಂತರ ಯಾವ ಪಕ್ಷವೂ ಗಳಿಸಿಲ್ಲದಷ್ಟು ಅತ್ಯಧಿಕ ಸೀಟುಗಳನ್ನು ಈ ಬಾರಿ ಬಿಜೆಪಿ ಗಳಿಸಿದೆ - 312+13=325. ಅದೂ ಡಿಮಾನಿಟೈಸೇಷನ್ ನಂತರ. ಇನ್ನೊಂದೆಡೆ ಮಣಿಪುರದ ಕಣ್ಮಣಿ, 16 ವರ್ಷ ಉಪವಾಸ ಮಾಡಿದ ಸೀತೆಯ ದೊಡ್ಡಕ್ಕನಿಗೆ ಚುನಾವಣೆಯಲ್ಲಿ ಠೇವಣಿ ಸಿಕ್ಕಿಲ್ಲ. ಈ ಜಗತ್ಪ್ರಸಿದ್ಧ ಐರೋಮ್ ಶರ್ಮಿಳೆಗೆ ಬರಿ 90 ಓಟು. ದಿಗ್ಭ್ರಮೆಗೊಂಡಿರುವ ಆಕೆ ರಾಜಕಾರಣದಿಂದಲೇ ನಿವೃತ್ತರಾಗುವ ತೀರ್ಮಾನ ಘೋಷಿಸಿದ್ದಾರೆ. ಈ ಚುನಾವಣಾ ಫಲಿತಾಂಶಗಳು ಇಡೀ ದೇಶದ ಭವಿಷ್ಯದ ಮೇಲೆ ಬಹುಕೆಟ್ಟ ಪರಿಣಾಮವನ್ನು ಬೀರಲಿವೆ. ಕೇವಲ ಮೋದಿ ಅಲೆಯನ್ನು ಹೆಚ್ಚಿಸಲಿವೆ ಎಂಬ ಕಾರಣಕ್ಕಾಗಿ ಅಲ್ಲ. ಸಂವಿಧಾನಿಕ ತಿದ್ದುಪಡಿಗಳನ್ನೇ ತರಬಲ್ಲ ಶಕ್ತಿಯನ್ನು ಈ ಫಲಿತಾಂಶಗಳು ಬಿಜೆಪಿಗೆ ತಂದುಕೊಟ್ಟಿವೆ. ಲೋಕಸಭೆಯಲ್ಲಿ ಬಹುಮತವಿದ್ದರೂ ರಾಜ್ಯ ಸಭೆಯಲ್ಲಿ ಅದಕ್ಕೆ ಬಹುಮತವಿರಲಿಲ್ಲ, ರಾಜ್ಯ ಸಭೆಯಲ್ಲಿ ಅದಕ್ಕೆ 12 ಮತಗಳ ಕೊರತೆ ಇತ್ತು. ಈ ಬಾರಿಯ ಫಲಿತಾಂಶಗಳಿಂದಾಗಿ ಅಗತ್ಯಕ್ಕಿಂತಲೂ ಹೆಚ್ಚಿನ ಸೀಟುಗಳನ್ನು ರಾಜ್ಯ ಸಭೆಯಲ್ಲಿ ಬಿಜೆಪಿ ಪಡೆದುಕೊಳ್ಳುತ್ತದೆ. ಇನ್ನೊಂದೆಡೆ ಬರುವ ಜುಲೈನಲ್ಲಿ ರಾಷ್ಟ್ರಪತಿ ಚುನಾವಣೆ ಇದ್ದು ಬಿಜೆಪಿ ಪ್ರಾಯೋಜಿತ ರಾಷ್ಟ್ರಪತಿ ಆಯ್ಕೆಯಾಗುತ್ತಾರೆ. ಸುಪ್ರೀಂಕೋರ್ಟಿನ ಉಚ್ಚ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರವೂ ರಾಷ್ಟ್ರಪತಿ ಕೈಯಲ್ಲಿದ್ದು ನ್ಯಾಯಾಂಗದ ಸೂತ್ರ ಬಹುಬೇಗ ಸಂಘಪರಿವಾರದ ಪಾಲಾಗಲಿದೆ. ಇದರ ಪರಿಣಾಮವೆಂದರೆ ಜನವಿರೋಧಿ ನೀತಿಗಳು, ಕಾಯ್ದೆಗಳು ತೀವ್ರವೇಗದಲ್ಲಿ ಅಡೆತಡೆ ಇಲ್ಲದೆ ಜಾರಿಯಾಗುತ್ತವೆ. ಈ ದೇಶದ ಸಂವಿಧಾನವನ್ನೇ ತಿರುಚುವ ಅವಕಾಶ ಅವರಿಗೆ ಲಭಿಸುತ್ತದೆ. ಅಲ್ಪಸ್ವಲ್ಪ ಇದ್ದ ನ್ಯಾಯಾಂಗದ ನೆರವೂ ಜನತೆಗೆ ದುರ್ಲಭವಾಗುತ್ತದೆ. ಫಿರ್‌ಭೀ 'ಅಚ್ಛೇ ದಿನ್' ಬಹುತ್ ಜಲ್ದೀ ಆನೆ ವಾಲೆ ಹೈಂ.

ಕೆಲವು ಸಮಾಧಾನಕರ ಸುದ್ದಿಗಳು

ಈ ಆಘಾತಕಾರಿ ಫಲಿತಾಂಶದ ಜೊತೆಗೇ ಸಮಾಧಾನಪಟ್ಟುಕೊಳ್ಳಬಹುದಾದ ಕೆಲವು ವಿಚಾರಗಳಿವೆ.

1. ಈ ವಿಜಯವನ್ನೆಲ್ಲಾ ಸಂಘ ಪರಿವಾರದ ಹಿಂದೂತ್ವ ಅಜೆಂಡಾಗೆ ಆದ ವಿಜಯ ಎಂದು ಪರಿಗಣಿಸಲು ಬರುವುದಿಲ್ಲ. ವಾಸ್ತವದಲ್ಲಿ ಐದೂ ರಾಜ್ಯಗಳ ಚುನಾವಣಾ ಫಲಿತಾಂಶ ತೋರುವ ಸಾಮಾನ್ಯ ಅಂಶವೆಂದರೆ ಇದು ಆಡಳಿತಾರೂಢ ಪಕ್ಷಗಳ ವಿರೋಧಿ ಅಲೆ. ಐದೂ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದವರನ್ನು ಜನ ತಿರಸ್ಕರಿಸಿ ಸೋಲಿಸಿದ್ದಾರೆ. ಕೆಳಗಿನ ಕೋಷ್ಟಕ ಗಮನಿಸಿ. ಉತ್ತರ ಪ್ರದೇಶ ದಲ್ಲಿ ಎಸ್‌ಪಿಯನ್ನೂ, ಉತ್ತರಾ ಖಂಡದಲ್ಲಿ ಕಾಂಗ್ರೆಸ್ಸನ್ನೂ, ಪಂಜಾಬಿನಲ್ಲಿ ಅಕಾಲಿ-ಬಿಜೆಪಿ ಮೈತ್ರಿಕೂಟವನ್ನು, ಮಣಿಪುರ ಮತ್ತು ಗೋವಾಗಳಲ್ಲಿ ಬಿಜೆಪಿಯನ್ನು ಜನ ಓಟುಗಳ ಮೂಲಕ ಖಂಡಿಸಿದ್ದಾರೆ. ಆಳ್ವಿಕೆಯಲ್ಲಿದ್ದವರು ಜನಹಿತಕ್ಕೆ ಪೂರಕವಾಗಿ ನಡೆದುಕೊಳ್ಳದೇ ಹೋದಾಗ ಅವರನ್ನು ತಿರಸ್ಕರಿಸುವುದು ಸಹಜವಾದದ್ದು ಮತ್ತು ಸರಿಯಾದದ್ದೇ. ಏನೇ ಇದ್ದರೂ ಅವರನ್ನೇ ಗೆಲ್ಲಿಸಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ. ಎಲ್ಲಾ ಕಡೆಯ ಆಳ್ವಿಕೆಗಳೂ ಜನ ವಿರೋಧಿಯಾಗಿವೆ, ಜನ ಎಲ್ಲಾ ಕಡೆ ಆಳುವವರಿಗೆ ಚುರುಕು ಮುಟ್ಟಿಸಿದ್ದಾರೆ. ಪರ್ಯಾಯ ಇಲ್ಲದೇ ಇರುವುದರಿಂದ ಜನ ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ನಾಳೆ ಕರ್ನಾಟಕದಲ್ಲೂ ಇದೇ ಆಗುವ ಸಾಧ್ಯತೆ ಇದೆ.

ರಾಜ್ಯ	ಅಧಿಕಾರದಲ್ಲಿದ್ದದ್ದು	ಬಹುಮತ
ಉತ್ತರ ಪ್ರದೇಶ	ಎಸ್‌ಪಿ	ಬಿಜೆಪಿ 325/403
ಉತ್ತರಾ ಖಂಡ	ಕಾಂಗ್ರೆಸ್	ಬಿಜೆಪಿ 57/70
ಪಂಜಾಬ್	ಅಕಾಲಿ+ಬಿಜೆಪಿ	ಕಾಂಗ್ರೆಸ್, ಆಪ್ (101/117)
ಮಣಿಪುರ	ಬಿಜೆಪಿ 21/60	ಕಾಂಗ್ರೆಸ್, ಇತರೆ 28,11
ಗೋವಾ	ಬಿಜೆಪಿ 13/40	ಕಾಂಗ್ರೆಸ್, ಇತರೆ 17,10

2. ಪಂಜಾಬಿನಲ್ಲಿ ಸಾಕಷ್ಟು ನಿರೀಕ್ಷೆಯನ್ನು ಹುಟ್ಟಿಸಿದ ಆಮ್ ಆದ್ಮಿ ಪಾರ್ಟಿ ಅಧಿಕಾರಕ್ಕೆ ಬರದಿದ್ದರೂ 25 ಸೀಟುಗಳನ್ನು ಪಡೆದು ಬಲವಾದ ವಿರೋಧ ಪಕ್ಷವಾಗಿ ಹೊರಹೊಮ್ಮಿದೆ. ಸಕ್ರಿಯ ವಿರೋಧ ಪಕ್ಷದ ಪಾತ್ರ ವಹಿಸುವ ಅವಕಾಶ ಅದಕ್ಕೆ ಲಭಿಸಿದೆ. ಇದೂ ಸಹ ಸದ್ಯದ ಪರಿಸ್ಥಿತಿಯಲ್ಲಿ ಒಳ್ಳೆಯ ಬೆಳವಣಿಗೆಯಾಗಿದೆ.

3. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಕೇವಲ 19 ಸೀಟುಗಳನ್ನು ಪಡೆದು ತೀವ್ರ ಹಿನ್ನಡೆ ಅನುಭವಿಸಿರುವುದು ನಿಜವಾದರೂ ಅದರ ಓಟ್ ಬೇಸನ್ನು ದೊಡ್ಡಮಟ್ಟದಲ್ಲೇನು ಕಳೆದುಕೊಂಡಿಲ್ಲ. ಬಿಎಸ್‌ಪಿ ತನ್ನ ಕೋರ್ ಮತಗಳನ್ನು ಕಳೆದುಕೊಂಡಿಲ್ಲ. 22% ಉಳಿದುಕೊಂಡಿದೆ. ಹಾಗೆ ನೋಡಬೇಕೆಂದರೆ ಬಿಜೆಪಿ ಶೇ. 39.7 ಮತಗಳನ್ನು ಗಳಿಸಿರುವುದು ನಿಜವಾದರೂ ಬಿಎಸ್‌ಪಿ, ಎಸ್‌ಪಿ ಮತ್ತು ಕಾಂಗ್ರೆಸ್ ಸೇರಿ 51% ಮತಗಳನ್ನು ಉಳಿಸಿಕೊಂಡಿವೆ. 10% ಮತಗಳು ಇತರರಿಗೆ ಲಭಿಸಿವೆ, ಅವೆಲ್ಲಾ ಬಹುತೇಕ ಸಂಘಪರಿವಾರ ವಿರೋಧಿ ಶಕ್ತಿಗಳೇ ಆಗಿವೆ. ಅಂದರೆ ಶೇ. 60ರಷ್ಟು ಓಟುಗಳು ಕೋಮುವಾದಿಗಳ ಕೈಗಿನ್ನು ಸಿಕ್ಕಿಲ್ಲ ಎಂಬುದೂ ಸಹ ಗಮನಿಸಬೇಕಾದ ವಿಚಾರವಾಗಿದೆ.

ಮೇಲ್ಕಂಡ ಮೂರು ವಿಚಾರಗಳು ಕೊಂಚ ಸಮಾಧಾನಪಟ್ಟುಕೊಳ್ಳುವ ವಿಚಾರಗಳೇ ಆಗಿದ್ದರೂ ಮೈಮರೆಯುವ ವಿಚಾರಗಳಲ್ಲ. ಈ ಬಾರಿ ಬಿಜೆಪಿ ಸಾಧಿಸಿರುವ ಗೆಲುವು ಸಣ್ಣ ಗೆಲುವಲ್ಲ. ಈ ಗೆಲುವು ತೋರುವ ಕಠೋರ ಸತ್ಯಗಳನ್ನು ನಾವು ಎದೆಗುಂದದೆ ಮುಖಾಮುಖಿಯಾಗಲೇಬೇಕು.

ಪಂಚರಾಜ್ಯ ಫಲಿತಾಂಶಗಳು ತೋರುವ ಕಟುಸತ್ಯವೇನು?

ಬಿಎಸ್‌ಪಿಯ ಮಾಯಾವತಿಯವರು ಈ ಫಲಿತಾಂಶವನ್ನು "ಎಲೆಕ್ಟ್ರಾನಿಕ್ ಓಟಿಂಗ ಮೆಷಿನ್ನುಗಳನ್ನು ಟ್ಯಾಂಪರಿಂಗ್ ಮಾಡಿಕೊಂಡಿರುವುದರ ಪರಿಣಾಮ" ಎಂದು ಆರೋಪಿಸಿ ತಳ್ಳಿ ಹಾಕಿದ್ದರೆ, ಕೆಲವು ಎಡಪಕ್ಷಗಳು "ಮೋದಿ ಅಲೆ ಎಂಬುದೆಲ್ಲಾ ಮಣ್ಣಾಂಗಟ್ಟಿ, ಇದು ಆಡಳಿತಾರೂಢ ಪಕ್ಷಗಳ ವಿರೋಧಿ ಅಲೆ ಮಾತ್ರ" ಎಂದು ಹೇಳಿಕೆ ನೀಡಿವೆ. ಇವಿಎಂಗಳ ದುರ್ಬಳಕೆ ಆರೋಪವನ್ನು ಸಾರಾಸಗಟು ತಿರಸ್ಕರಿಸಲು ಬರುವುದಿಲ್ಲ, ಆ ನಿಟ್ಟಿನಲ್ಲೂ ತನಿಖೆಯಾಗಬೇಕು ಎಂಬುದು ನಿಜವಾದರೂ, ಆಡಳಿತಾರೂಢ ಪಕ್ಷಗಳ ವಿರುದ್ಧದ ಅಸಮಾಧಾನ ಫಲಿತಾಂಶದಲ್ಲಿ ಪ್ರಕಟಗೊಂಡಿದ್ದರೂ ಇವೇ ಅದಕ್ಕೆ ಕಾರಣ ಎಂದು ಕಣ್ಣುಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಇದು ನಮ್ಮ ಆತ್ಮವಂಚನೆಯಾಗುತ್ತದೆ. ಸೋಲಿನ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ ಅಥವ ಶಕ್ತಿಗೆ ನಿರ್ದಯಿ ಆತ್ಮಾವಲೋಕನ ಅತಿ ಅನಿವಾರ್ಯ ವಿಚಾರವಾಗಿದೆ. ಈ ಆತ್ಮ ವಿಮರ್ಶೆಗೆ ನಾವು ಒಳಗಾಗದಿದ್ದರೆ ಸೋಲಿನಿಂದ ಯಾವುದೇ ಪಾಠವನ್ನು ಕಲಿಯುವುದರಲ್ಲಿ ನಾವು ವಿಫಲಗೊಳ್ಳುತ್ತೇವೆ.

ಮೊದಲಿಗೆ "ಮೋದಿ ಅಲೆ ಏನೂ ಇಲ್ಲ" ಎಂದು ತಳ್ಳಿಹಾಕಲು ಬರುವುದಿಲ್ಲ. ವಾಸ್ತವದಲ್ಲಿ 2014ರಲ್ಲಿ ಮೋದಿ ಪ್ರಧಾನಿ ಆದಾಗ ಎದ್ದ ಮೋದಿಪರ ಸಮೂಹ ಸನ್ನಿ ಹೆಚ್ಚೇನೂ ಕಡಿಮೆಯಾಗಿಲ್ಲ ಎಂಬುದನ್ನೇ ಈ ಬಾರಿಯ ಫಲಿತಾಂಶಗಳು ಸೂಚಿಸುತ್ತಿವೆ. ಉತ್ತರ ಪ್ರದೇಶದಲ್ಲಿ 2012ರಲ್ಲಿ ಶೇ.15 ರಷ್ಟು ಮತಗಳನ್ನು ಹೊಂದಿದ್ದ ಬಿಜೆಪಿ, 2014ರ ಲೋಕಸಭಾ ಚುನಾವಣೆಗಳಲ್ಲಿ 42%ಗೆ ನೆಗೆದಿತ್ತು. ಈ ಬಾರಿ ಅದು ಕೊಂಚ ಕಡಿಮೆಯಾಗಿದ್ದರೂ ಶೇ. 39.7 ಮತಗಳನ್ನು ಬಾಚಿಕೊಂಡಿದೆ. ಇದು ಸಣ್ಣ ವಿಚಾರವಲ್ಲ. ಉತ್ತರಾಖಂಡ್‌ನದೂ ಹೆಚ್ಚು ಕಡಿಮೆ ಇದೇ ಚಿತ್ರಣ. ಮಣಿಪುರದಲ್ಲಿ 2012ರಲ್ಲಿ ಇದ್ದ ಅದರ 2.12 ಓಟ್ ಶೇರ್ ಈಗ 36.3ಕ್ಕೆ ನೆಗೆದಿದೆ. ಗೋವಾದಲ್ಲಿ ಅದು ಅಧಿಕಾರದಲ್ಲಿದ್ದು ಹಿನ್ನಡೆ ಅನುಭವಿಸಿದ್ದರೂ ಕಡಿಮೆಯಾಗಿರುವುದು ಶೇ. 2 ರಷ್ಟು ಮತಗಳು ಮಾತ್ರ. 2012ರಲ್ಲಿ 34.68 ಇದ್ದ ಅದರ ಓಟ್ ಶೇರ್ ಈ 32.5 ಆಗಿದೆ ಅಷ್ಟೆ. ಪಂಜಾಬಿನಲ್ಲೂ ಬಿಜೆಪಿಗೆ ಹಿನ್ನಡೆಯಾಗಿದ್ದರೂ ಈ ಸೋಲನ್ನು ಮುಖ್ಯವಾಗಿ ಅಲ್ಲಿನ ಅಕಾಲಿದಳದ ಸೋಲೆಂದು ಪರಿಗಣಿಸಬೇಕು. ಏಕೆಂದರೆ ಅಲ್ಲಿನ ಐಕ್ಯ ರಂಗದಲ್ಲಿ ಅದೇ ದೊಡ್ಡ ಪಾರ್ಟ್‌ನರ್ ಮತ್ತು ಜನರ ಆಕ್ರೋಶವಿದ್ದದ್ದು ಈ ಅಕಾಲಿ ದಳದ ಬಾದಲ್ ಕುಟುಂಬದ ವಿರುದ್ಧ ಎಂಬುದನ್ನು ನಾವು ಗಮನಿಸಬೇಕು. ಸಾರಾಂಶದಲ್ಲಿ ಬಿಜೆಪಿ ಕೆಲವು ರಾಜ್ಯಗಳಲ್ಲಿ ತನ್ನ ಓಟ್ ಶೇರುಗಳನ್ನು ಹೆಚ್ಚಿಸಿಕೊಂಡಿದೆ. ಇನ್ನು ಕೆಲವು ರಾಜ್ಯಗಳಲ್ಲಿ 2014ರ ಅಲೆಯನ್ನು ತಕ್ಕಮಟ್ಟಿಗೆ ಕಾಯ್ದುಕೊಂಡಿದೆ. ನೋಟು ರದ್ದತಿಯಂತಹ ನಿರ್ಲಜ್ಜ ಜನಕಂಟಕ ನೀತಿಯನ್ನು ತಂದು, ಜನ ಪರದಾಡುವಂತೆ ಮಾಡಿದ ಮೇಲೂ ಮೋದಿಪರ ಸಮೂಹ ಸನ್ನಿ ಕಡಿಮೆಯಾಗದಂತೆ ಉಳಿಸಿಕೊಳ್ಳಲಾಗಿದೆ ಎಂದರೆ ಅವರ ನಿಭಾಯಿಸುವ ಸಾಮರ್ಥ್ಯ ಎಂತಹುದು ಎಂಬುದನ್ನು ಗಮನಿಸಲೇಬೇಕು.

ಮೋದಿ ಪಟಾಲಂನ ಯಶಸ್ಸಿಗೆ ಕಾರಣವಾದ ಅಂಶಗಳೇನು?

1. ಜಾತ್ಯತೀತ ಎಂದು ಹೇಳಿಕೊಂಡು ಜನ ವಿರೋಧಿ ಆಳ್ವಿಕೆ ಮಾಡುತ್ತಾ ಬಂದಿರುವ ಪಕ್ಷಗಳೇ ಬಿಜೆಪಿ ಗೆಲುವಿಗೆ ಮೊದಲ ಕಾರಣ ಎಂಬುದನ್ನು ಈ ಫಲಿತಾಂಶ ಗಳೂ ಮತ್ತೊಮ್ಮೆ ರುಜುವಾತುಪಡಿಸಿವೆ. ಯುಪಿಯಲ್ಲಿ ಎಸ್‌ಪಿಯಾಗಲೀ, ಉತ್ತರಾಖಂಡದಲ್ಲಿ ಕಾಂಗ್ರೆಸ್ ಆಗಲೀ ಜನಪರ ಆಳ್ವಿಕೆಯನ್ನು ನೀಡುವುದರಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ಇವರ ಜನದ್ರೋಹದ ಲಾಭ ಬಿಜೆಪಿಗೆ ಆಗಿದೆ.


2. ನೋಟುರದ್ದತಿ ಎಂಬುದು ನಿಚ್ಚಳ ಕಾರ್ಪೊರೇಟ್ ಅಜೆಂಡಾ ಎಂಬುದು ತಿಳಿದವರಿಗೆ ಗೊತ್ತಿದ್ದರೂ ಇದನ್ನು ತಿಳಿದಿಕೊಳ್ಳಲು ಸಾಧ್ಯವಿಲ್ಲದವರಿಗೆ ಇದೊಂದು ಬಡವರ ಪರವಾಗಿ ಬಲಾಢ್ಯರ ವಿರುದ್ಧ ಮೋದಿ ಬೀಸಿರುವ ಕತ್ತಿ ಎಂಬಂತೆ ಕಂಡಿದೆ. ಕಂಡಿದೆ ಎಂಬುದಕ್ಕಿಂತ ಕಾಣುವಂತೆ ಮಾಡಲಾಗಿದೆ. ಬಲಾಢ್ಯರು ಬಚ್ಚಿಟ್ಟಿರುವ ಕಪ್ಪು ಹಣವನ್ನು ಹೊರತೆಗೆದು ಬಡವರಿಗೆ ಹಂಚಲು ಮೋದಿ ಈ ಕ್ರಮ ತೆಗೆದುಕೊಂಡಿರುವುದಾಗಿ ಜನರನ್ನು ದೊಡ್ಡ ಮಟ್ಟದಲ್ಲಿ ನಂಬಿಸಲಾಗಿದೆ. ಜರ್ಮನಿಯಲ್ಲಿ ಸರ್ವಾಧಿಕಾರವನ್ನು ತರುವಾಗಲೂ ಹಿಟ್ಲರ್ ಮಾಡಿದ್ದು ಇದನ್ನೇ. ಆತ ತನ್ನ ಪಕ್ಷಕ್ಕೆ ನ್ಯಾಷನಲ್ ಸೋಷಿಯಲಿಸ್ಟ್ ಪಾರ್ಟಿ ಎಂದು ಹೆಸರಿಟ್ಟ. ಸಮಾಜವಾದ ತರುವುದೇ ತನ್ನ ಗುರಿ, ಆದರೆ ಕಮ್ಯುನಿಸ್ಟರಂತೆ ರಾಷ್ಟ್ರ ವಿರೋಧಿ ಸಮಾಜವಾದ ಅಲ್ಲ, ರಾಷ್ಟ್ರೀಯ ಭಾವನೆ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿಯುವ ಸಮಾಜವಾದ ಎಂದು ಬಿಂಬಿಸಿಕೊಂಡ. ಮೋದಿಯೂ ಅದನ್ನೇ ಮಾಡಿದ್ದಾನೆ. ಯಶಸ್ವಿಯೂ ಆಗಿದ್ದಾನೆ.

3. ಮೋದಿಯ ಈ ಮಂಕುಬೂದಿ ಅಭಿಯಾನ ಯಶಸ್ವಿಗೊಳ್ಳುವುದರಲ್ಲಿ ಮೀಡಿಯಾದ ದೊಡ್ಡ ಪಾತ್ರವಿದೆ. ಅಧ್ಯಯನ ಒಂದರ ಪ್ರಕಾರ ಈ ಬಾರಿಯ ಉತ್ತರ ಪ್ರದೇಶದ ಚುನಾವಣಾ ಸಂದರ್ಭದಲ್ಲಿ ಮೀಡಿಯಾದಲ್ಲಿ ಪಕ್ಷಗಳಿಗೆ ಸಿಕ್ಕ ಸಮಯಾವಕಾಶದಲ್ಲಿ ಶೆ. 70ರಷ್ಟನ್ನು ಬಿಜೆಪಿ ಪಕ್ಷವೊಂದೇ ಕಬಳಿಸಿದೆ. ಬಹುತೇಕ ಛಾನೆಲ್‌ಗಳು ಬಿಜೆಪಿಯನ್ನು ಪ್ರೊಜೆಕ್ಟ್ ಮಾಡಲು ಹಗಲಿರುಳು ಶ್ರಮಿಸಿವೆ. ಇದಕ್ಕೆ ಮತ್ತೊಂದು ಉದಾಹರಣೆಯೆಂದರೆ ಎಲ್ಲಾ ಸುತ್ತಿನ ಮತದಾನ ಮುಗಿಯುವವರೆಗೂ ಎಕ್ಸಿಟ್ ಪೋಲ್ ನಡೆಸಬಾರದು ಮತ್ತು ಪ್ರಕಟಿಸಬಾರದು ಎಂಬ ಸುಪ್ರೀಂಕೋರ್ಟ್ ತೀರ್ಮಾನವಿದ್ದರೂ ಯುಪಿಯ ಮೊದಲ ಸುತ್ತು ಮುಗಿದ ಕೂಡಲೇ ಆ ರಾಜ್ಯದ ಅತಿದೊಡ್ಡ ದಿನಪತ್ರಿಕೆಯಾದ 'ದೈನಿಕ್ ಜಾಗರಣ್' 'ಬಿಜೆಪಿ ಪರ ನಿಚ್ಚಳ ಅಲೆ' ಎಂಬ ತನ್ನ ಸಮೀಕ್ಷೆಯನ್ನು ಪ್ರಕಟಿಸಿತು. ಒಟ್ಟಿನಲ್ಲಿ ಮೀಡಿಯಾ ನಿಚ್ಚಳವಾಗಿ ಮೋದಿ ಪರ ನಿಂತುಬಿಟ್ಟಿತು. ಸುಳ್ಳನ್ನೇ ಸತ್ಯ ಮಾಡಿ ಸಾಮಾನ್ಯ ಜನರನ್ನು ಮರುಳುಮಾಡಿತು.

4. ಬಿಎಸ್‌ಪಿ, ಎಸ್‌ಪಿ ಮತ್ತು ಕಾಂಗ್ರೆಸ್ ಮೂರು ಪಕ್ಷಗಳೂ ಮುಂದಿಟ್ಟ ಜಾತ್ಯತೀತ ಅಜೆಂಡಾವನ್ನು ಅದು 'ಮುಸ್ಲಿಮರ ಓಲೈಕೆ' ಎಂದು ತಿರುಪ್ರಚಾರ ನಡೆಸಿತು. ಈ ಬಾರಿಯ ಚುನಾವಣೆಯಲ್ಲಿ ಒಬ್ಬ ಮುಸ್ಲಿಂ ಅಭ್ಯರ್ಥಿಗೂ ಸೀಟು ನೀಡದೆ ಬಿಜೆಪಿ 'ತಾನು ಹಿಂದೂಗಳ ಪರ' ಎಂದು ಬಿಂಬಿಸಿಕೊಳ್ಳುವುದರ ಮೂಲಕ, ಸಮಾಜದಲ್ಲೀಗಾಗಲೇ ಇರುವ ಮುಸ್ಲಿಂ ವಿರೋಧಿ ಪೂರ್ವಗ್ರಹಗಳನ್ನು ಸಮರ್ಥವಾಗಿ ಬಳಸಿಕೊಂಡಿತು.

5. ಬಿಎಸ್‌ಪಿ ಮತ್ತು ಎಸ್‌ಪಿ ಇದುವರೆಗೆ ವರ್ಕ್‌ಔಟ್ ಮಾಡುತ್ತಾ ಬಂದ ಜಾತಿ ಸಮೀಕರಣ ರಾಜಕಾರಣವನ್ನು ಈ ಬಾರಿ ಅವುಗಳಿಗೆ ಮುಳುವಾಗುವಂತೆ ಬಿಜೆಪಿ ಬಳಸಿಕೊಂಡಿತು. ಜಾತಿ ಚದುರಂಗದಾಟವನ್ನು ಅವುಗಳಿಗಿಂತಲೂ ಸಮರ್ಥವಾಗಿ ಆಡಿತು. ಉತ್ತರ ಪ್ರದೇಶದ ಜಾತಿವಾರು ಅಂಕಿಅಂಶಗಳು ಹೀಗಿವೆ: ಮೇಲ್ಜಾತಿಗಳು - 20%, ದಲಿತರು - 20% (ಅದರಲ್ಲಿ ಜಾತವ್ 10%, ಜಾತವೇತರ 10%), ಯಾದವ 10%, ಯಾದವೇತರ ಓಬಿಸಿ - 20%, ಮುಸ್ಲಿಮರು - 20%. ಎಸ್‌ಪಿ ಯಾದವರನ್ನು, ಬಿಎಸ್‌ಪಿ ಜಾತವ್ ಜಾತಿಯನ್ನು ಹೆಚ್ಚಾಗಿ ಅವಲಂಬಿಸಿದರೆ ಬಿಜೆಪಿ ಯಾದವೇತರ ಓಬಿಸಿಗಳನ್ನು ಹಾಗೂ ಜಾತವೇತರ ದಲಿತರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ವಿಶೇಷ ಷಡ್ಯಂತ್ರಗಳನ್ನು ರೂಪಿಸಿ ಅದರಲ್ಲಿ ಯಶಸ್ವಿಯೂ ಆಯಿತು. ಮೇಲ್ಜಾತಿ+ ಯಾದವೇತರ ಓಬಿಸಿ+ ಜಾತವೇತರ ದಲಿತರನ್ನು (ಇಲ್ಲಿ ಮಾದಿಗರನ್ನು ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಿರುವಂತೆ) ಅದ





ಜಾತಿ ಸಮೀಕರಣವನ್ನೂ ತನಗೆ ಪೂರಕವಾಗಿ ಮಾಡಿಕೊಂಡಿತು.

6. ಮುಸ್ಲಿಮರ ಓಟುಗಳನ್ನು ಜಾತ್ಯತೀತ ಪಕ್ಷಗಳೇ ಯಶಸ್ವಿಯಾಗಿ ಒಡೆದು ಹಾಕಿದವು. ಹಾಗೆ ಮಾಡುವ ಮೂಲಕ ಬಿಜೆಪಿಯ ಗೆಲುವಿಗೆ ಕಾರಣವಾದವು. ಉದಾ: ಫರಿದಾಬಾದ್ ಜಿಲ್ಲೆ 51% ಮುಸ್ಲಿಮರಿಂದ ಕೂಡಿದೆ. ಆದರೆ ಇದುವರೆಗೂ ಅಲ್ಲಿ ಒಬ್ಬ ಮುಸ್ಲಿಂ ಅಭ್ಯರ್ಥಿಯೂ ಗೆದ್ದಿಲ್ಲ. ಏಕೆಂದರೆ ಎಲ್ಲಾ ಪಕ್ಷಗಳೂ ಅಲ್ಲಿ ಮುಸ್ಲಿಂ ಪ್ರತಿನಿಧಿಯನ್ನು ಹಾಕುತ್ತವೆ. ಮುಸ್ಲಿಂ ಓಟುಗಳು ಹಂಚಿಹೋಗುತ್ತವೆ. ಬಿಜೆಪಿ ಮಾತ್ರ ಹಿಂದೂ ಅಭ್ಯರ್ಥಿಯನ್ನು ಹಾಕುತ್ತದೆ ಮತ್ತು ಬಹುತೇಕ ಹಿಂದೂಗಳ ಮತಗಳನ್ನು ಪಡೆದು ಗೆಲ್ಲುತ್ತದೆ.

7. ಜಾತ್ಯತೀತ ಪಕ್ಷಗಳು ಬಿಹಾರದ ರೀತಿಯಲ್ಲಿ ಒಗ್ಗೂಡಿ ಚುನಾವಣೆಯನ್ನು ಎದುರಿಸದೇ ಹೋದದ್ದು. ಹಾಗೆ ಮಾಡಿದ್ದಲ್ಲಿ ಬಿಹಾರದಂತೆ ಇಲ್ಲಿಯೂ ಬಿಜೆಪಿಯನ್ನು ಮಣಿಸುವ ಸಾಧ್ಯತೆಗಳು ಇದ್ದವು.

8. ನೋಟುರದ್ದತಿಯಿಂದಾಗಿ ವಿರೋಧ ಪಕ್ಷಗಳು ಒಂದು ಮಟ್ಟಿಗೆ 'ಬಡ' ಪಕ್ಷಗಳಾಗಿದ್ದದ್ದೂ ವಾಸ್ತವ. ಚುನಾವಣೆಗಾಗಿ ಎಲ್ಲಾ ಪಕ್ಷಗಳೂ ಅನಧಿಕೃತವಾಗಿ ಹಣ ಕೂಡಿಡುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಬಾರಿ ದಿಢೀರ್ ನೋಟ್ ರದ್ದತಿ ಮಾಡುವ ಮೂಲಕ ಹಾಗೂ ವಿರೋಧಿ ಪಕ್ಷಗಳು ಕೂಡಿಟ್ಟಿದ್ದ ಹಣವನ್ನು ವಶಪಡಿಸಿಕೊಳ್ಳುವ ಮೂಲಕ (ಮಾಯಾವತಿ ಸೋದರನ ಬಳಿ ಇದ್ದ 116 ಕೋಟಿ ರೈಡ್ ಆಗಿತ್ತು) ಅವಕ್ಕೆ ಶಾಕ್ ನೀಡಲಾಯಿತು. ಇನ್ನೊಂದೆಡೆ ಬಿಜೆಪಿ ವರಿಷ್ಠರಿಗೆ ಮೊದಲೇ ತಿಳಿಸಿ ತನ್ನ ಬಳಿ ಇದ್ದ ಹಣವನ್ನು ಸುರಕ್ಷಿತಗೊಳಿಸಿಕೊಳ್ಳಲಾಗಿತ್ತು, ಅಷ್ಟೇ ಅಲ್ಲ, ಹೊಸ ನೋಟು ಚಲಾವಣೆಗೆ ಬರುವ ಮುನ್ನವೇ ಅವನ್ನು ಪರಿವರ್ತಿಸಿ ನೀಡಲಾಗಿತ್ತು, (ಉತ್ತರ ಪ್ರದೇಶದ ಬಿಜೆಪಿ ಅಧ್ಯಕ್ಷನ ಮಗಳು ನೋಟು ರದ್ದತಿ ಘೋಷಣೆಯಾಗುವ ಮೊದಲೇ 2 ಸಾವಿರ ನೋಟುಗಳ ಕಂತೆಯನ್ನು ಹಿಡಿದುಕೊಂಡು ನಿಂತಿರುವ ಫೋಟೋ ಹರಿದಾಡಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ). ಈ ರೀತಿ ನೋಟು ರದ್ದತಿಯನ್ನು ಸಹ ಬಿಜೆಪಿ ವಿರೋಧಿ ಪಕ್ಷಗಳನ್ನು ದುರ್ಬಲಗೊಳಿಸಲು ಬಳಸಿಕೊಂಡಿತು.

9. ಈ ರೀತಿ ಉತ್ತರ ಪ್ರದೇಶದಲ್ಲಿ ಹಣ ಮತ್ತು ಮಾಧ್ಯಮದ ಬಲವನ್ನು ಬಳಸಿಕೊಂಡು, ಬಡವರ ಪರ ಎಂಬ ಡ್ರಾಮ ಆಡಿ, ಇತರರು ಸಾಬರ ಪರ - ತಾನು ಮಾತ್ರ ಹಿಂದೂಗಳ ಪರ ಎಂಬ ಭಾವನೆ ಬೆಳೆಸಿ, ಓಬಿಸಿ ಮತ್ತು ದಲಿತ ಓಟುಗಳನ್ನು ಒಡೆದು ಬಿಜೆಪಿ ಗೆದ್ದಿದೆ. 'ಜಾತ್ಯತೀತ' ವಿರೋಧ ಪಕ್ಷಗಳು ದುರಾಡಳಿತದ ಮೂಲಕ, ಮುಸ್ಲಿಮರ ಓಟುಗಳನ್ನು ಒಡೆಯುವ ಮೂಲಕ ಹಾಗೂ ಒಗ್ಗೂಡಲು ನಿರಾಕರಿಸುವ ಮೂಲಕ ಅದಕ್ಕೆ ಸಂಪೂರ್ಣ ಸಾತ್ ನೀಡಿವೆ.

10. ಪಂಜಾಬಿನಲ್ಲಿ ಅಕಾಲಿಯ ನಾಯಕನಾದ ಬಾದಲ್ ಕುಟುಂಬದ ದರ್ಪ, ದೌರ್ಜನ್ಯ ಹಾಗೂ ಲೂಟಿಯಿಂದ ರೋಸತ್ತಿದ್ದ ಜನ ಈ ಬಾರಿ ಅದಕ್ಕೆ ಮತ್ತು ಅದರ ಜೊತೆಗಿರುವ ಬಿಜೆಪಿಗೆ ಪಾಠ ಕಲಿಸಲು ತೀರ್ಮಾನಿಸಿದ್ದರು. ಆರಂಭದಲ್ಲಿ ಎಲ್ಲರಿಗೂ ಆಪ್ ಪರ್ಯಾಯವಾಗಿಯೂ ಕಂಡಿತ್ತು. ಆದರೆ ಪ್ರಚಾರ-ಅಪಪ್ರಚಾರದ ರೇಸಿನಲ್ಲಿ ಆಪ್ ಪರ್ಯಾಯವಾಗಬಲ್ಲದು ಎಂಬ ಸಂಪೂರ್ಣ ವಿಶ್ವಾಸ ಜನರಲ್ಲಿ ಮೂಡಲಿಲ್ಲ. ಅಲ್ಲದೆ ಆಪ್ ಸಿಖ್ ಅಭ್ಯರ್ಥಿಯನ್ನು ಮುಖ್ಯಮಂತ್ರಿಯಾಗಿ ಬಿಂಬಿಸಲಿಲ್ಲ. ಅಲ್ಲದೆ ಅದರ ಪ್ರಣಾಳಿಕೆಯ ಮುಖಪುಟದ ಡಿಸೈನಿನಲ್ಲಿ ಸ್ವರ್ಣಮಂದಿರದ ಚಿತ್ರ ಇದ್ದು, ಅದರ ಒಂದು ಭಾಗದಲ್ಲಿ ಪಕ್ಷದ ಗುರುತಾದ ಪೊರಕೆಯ ಚಿತ್ರವಿರುವುದನ್ನೇ ವಿವಾದ ಮಾಡಿ, 'ಸ್ವರ್ಣ ಮಂದಿರದ ಮೇಲೆ ಪೊರಕೆ ಹಾಕಿದ್ದಾರೆ' ಎಂದು ಭಾವನೆಗಳನ್ನು ಕೆರಳಿಸಿ ಬಳಸಿಕೊಳ್ಳಲಾಯಿತು. ಪರಿಣಾಮ ವಾಗಿ ಅದರ ಬಗ್ಗೆ ಅಭಿಮಾನ ಇತ್ತಾದರೂ ಓಟುಗಳು ಚದುರಿದವು. ವಿರೋಧಿ ಅಲೆಯ ಲಾಭ ಆಪ್‌ಗಿಂತ ಕಾಂಗ್ರೆಸ್ಸಿಗೆ ಹೆಚ್ಚಾಯಿತು.

11. ಗೋವಾದಲ್ಲಿ: ಆಪ್ ನಿರೀಕ್ಷೆಗಿಂತ ಕಡಿಮೆ ಓಟು ಪಡೆಯಿತು. ತಾನು ಗೆದ್ದರೆ ಜೂಜಾಟದ ಅಡ್ಡೆಗಳಾಗಿರುವ ಕ್ಯಾಸಿನೋಗಳನ್ನು ಬಂದ್ ಮಾಡುತ್ತೇವೆ ಎಂಬ ಅದರ ಹೇಳಿಕೆಯನ್ನು ಅದರ ವಿರುದ್ಧ ತಿರುಗಿಸಲಾಯಿತು. ಕ್ಯಾಸಿನೋ ನಿಂತರೆ, ಟೂರಿಸಂ ನಿಲ್ಲುತ್ತದೆ, ಟೂರಿಸಂ ನಿಂತರೆ ಗೋವಾ ಸಾಯುತ್ತದೆ. ಆಪ್ ಗೋವಾವನ್ನು ನಾಶ ಮಾಡಲು ಹೊರಟಿದೆ ಎಂಬ ಅಪಪ್ರಚಾರ ನಡೆಸಲಾಯಿತು. ಇದಕ್ಕೆಲ್ಲಾ ತಿರುಗೇಟುಕೊಡುವ ಸಂಘಟನಾ ಸಾಮರ್ಥ್ಯವಿನ್ನು ಆಪ್‌ಗೆ ಇಲ್ಲದಿದ್ದುರಿಂದ ನಿರೀಕ್ಷಿತ ಗೆಲುವನ್ನು ಅದು ಪಡೆಯಲು ಆಗಲಿಲ್ಲ.

12. ಉತ್ತರಾಖಂಡ್‌ನಲ್ಲಿ ಮೇಲ್ಜಾತಿಯೇ ಬಹುಸಂಖ್ಯೆಯಾಗಿರುವುದರಿಂದ ಬಿಜೆಪಿಗಿಲ್ಲಿ ಬೇಸೂ ಇತ್ತು, ಸಾಲದೆಂಬಂತೆ ಅದು ಆಪರೇಷನ್ ಕಮಲ ನಡೆಸಿ, ಕಾಂಗ್ರೆಸ್‌ನ ಒಂದಷ್ಟು ಮುಖಂಡರನ್ನು ಕೊಂಡು ಅದು ಚುನಾವಣೆಗಳನ್ನು ಗೆದ್ದುಕೊಂಡಿತು.

13. ಮಣಿಪುರದಲ್ಲಿ ಬಿಜೆಪಿಗೆ ಯಾವುದೇ ಸೋಷಿಯಲ್ ಬೇಸ್ ಇಲ್ಲ. ಅಲ್ಲಿ ಅದು ಕಾಂಗ್ರೆಸ್ಸನ್ನೇ ಒಡೆದು ತನ್ನ ಪಕ್ಷವಾಗಿ ಮಾಡಿಕೊಂಡಿತು.

ಸಾರಾಂಶದಲ್ಲಿ ಬಿಜೆಪಿ ಯಶಸ್ವಿಯಾಗಿ ಹಣ ಬಲವನ್ನು, ಮೀಡಿಯಾ ಬಲವನ್ನು, ಧರ್ಮದ ಬಲವನ್ನು ಬಳಸಿಕೊಂಡು, ಜಾತಿಗಳನ್ನು, ಪಕ್ಷಗಳನ್ನು ಒಡೆದು, ಅಬ್ಬರದ ಅಪಪ್ರಚಾರ ನಡೆಸಿ ತನ್ನ ಬೇಳೆ ಬೇಯಿಸಿಕೊಂಡಿತು.

ಕೇಳಿಕೊಳ್ಳಲೇಬೇಕಾದ ಕೆಲವು ಪ್ರಶ್ನೆಗಳು

➤ ದಮನಿತ ಸಮುದಾಯಗಳ ಕ್ಯಾಸ್ಟ್ ಇಂಜಿನಿಯರಿಂಗ್ ಶುರುಮಾಡಿದ ಬಿಎಸ್‌ಪಿ ಇಡೀ ದೇಶದಲ್ಲಿ ಅದನ್ನು ಅನ್ವಯಿಸಲು ವಿಫಲಗೊಂಡಿದ್ದೇಕೆ? ವಿಶೇಷವಾಗಿ ಪಂಜಾಬಿನಲ್ಲಿ 32% ದಲಿತರಿದ್ದರೂ ಅದೇಕೆ ಯಶಸ್ಸನ್ನು ಕಾಣಲು ಆಗಲಿಲ್ಲ? ಇವತ್ತು ಅಲ್ಲಿ ಅದರ ಓಟ್ ಶೇರ್ 1.25%ಗೆ ಕುಸಿಯಲು ಕಾರಣವೇನು? 2007 ರ ತನಕ ಏರುಗತಿಯಲ್ಲಿದ್ದ ಬಿಎಸ್‌ಪಿ ನಂತರ ಇಳಿಯುತ್ತಾ ಬಂದದ್ದೇಕೆ?

➤ ದಿಲ್ಲಿಯಲ್ಲಿ ಜಯಭೇರಿ ಬಾರಿಸಿದ ಆಪ್ ಇಡೀ ದೇಶದಲ್ಲಿ ವ್ಯಾಪಿಸಲು ವಿಫಲಗೊಂಡಿದ್ದೇಕೆ? ಇಡೀ ದೇಶ ನರಕಸದೃಶವಾಗಿರುವಾಗ ಅದರೊಳಗಿದ್ದುಕೊಂಡೇ ದಿಲ್ಲಿಯನ್ನು 'ಸ್ವರ್ಗ'ವಾಗಿ ಪರಿವರ್ತಿಸಬಲ್ಲಂತಹ ದಿಟ್ಟ ಹೆಜ್ಜೆಗಳನ್ನು ಇಡಲು ಅದರಿಂದ ಸಾಧ್ಯವೆ? ಹಾಗೆ ಆಗಬಿದ್ದಲ್ಲಿ ಆಡಳಿತಾರೂಢ ಪಕ್ಷಗಳು ಎದುರಿಸಲೇಬೇಕಾದ ಅಸಮಾಧಾನದ ಅಲೆಗೆ ಅದೂ ಸಹ ಬಲಿಯಾಗಬೇಕಾಗಿ ಬರುವುದಿಲ್ಲವೆ?

➤ ಎಡಪಕ್ಷಗಳು ಉತ್ತರ ಪ್ರದೇಶದಲ್ಲಿ 1962ರಲ್ಲಿ 14 ಸೀಟುಗಳನ್ನೂ 5% ಓಟುಗಳನ್ನೂ ಹೊಂದಿದ್ದವು. ಆದರೆ ಈಗ 0 ಸೀಟು ಮತ್ತು 0.2 ಓಟ್‌ಗಳಿಗೆ ಇಳಿದಿವೆ. ಈ ನಿರಂತರ ಕುಸಿತಕ್ಕೆ ಕಾರಣವೇನು? ಕೇರಳ ಮತ್ತು ಬಂಗಾಲ ಬಿಟ್ಟರೆ ಎಡರಾಜಕಾರಣ ಮಿಕ್ಕ ರಾಜ್ಯಗಳಲ್ಲಿ ಯಶಸ್ವಿಯಾಗದಿರಲು ಕಾರಣವೇನು? ಅಲ್ಲೂ ಸಹ ಕ್ರಮೇಣ ದುರ್ಬಲಗೊಳ್ಳುವ ಮತ್ತು ಪತನದ ಹಾದಿ ಹಿಡಿಯಲು ಕಾರಣವೇನು?

➤ '55 ಚುನಾವಣಾ ಹಾದಿ ಕಳ್ಳರ ಹಾದಿ' ಎಂದು ಕರೆಯುತ್ತಾ ಚುನಾವಣೆಗಳನ್ನು ಬಹಿಷ್ಕರಿಸಲು ಮಾತ್ರ ಕರೆಕೊಟ್ಟ ನಕ್ಸಲ್ ಸಂಘಟನೆಗಳು ಸಾಧಿಸಿದ್ದೇನು? ದುಷ್ಟ ಪಕ್ಷಗಳು ಬಲಗೊಳ್ಳುತ್ತಾ ಸಾಗುವುದರಲ್ಲಿ ಅದರ ಕೊಡುಗೆಯೂ ಇಲ್ಲವೇನು? ಇದಲ್ಲದೆ ನಾವೆಲ್ಲರೂ ಸೇರಿ ಒಂದು ತುರ್ತಿನ ಮತ್ತು ಒಂದು ದೂರಗಾಮಿಯಾದ ಪ್ರಶ್ನೆಯನ್ನು ಕೇಳಿಕೊಳ್ಳಲೇಬೇಕಿದೆ.

➤ ತುರ್ತು ಪ್ರಶ್ನೆ: 2018ರಲ್ಲಿ ಬರಲಿರುವ ಕರ್ನಾಟಕದ ವಿಧಾನಸಭಾ ಚುನಾವಣೆಗಳ ಮೇಲೆ ಪಂಚ ರಾಜ್ಯಗಳ ಚುನಾವಣೆಗಳ ಫಲಿತಾಂಶ ಬೀರುವ ಪರಿಣಾಮವೇನು? ಈ ಟ್ರೆಂಡ್ ಗಮನಿಸಿದರೆ ಕರ್ನಾಟಕ ತುಳಿಯಬಹುದಾದ ಭವಿಷ್ಯದ ದಿಕ್ಕೇನು? ಜನಪರ ಚಳವಳಿಗಳು ಹಾಗೂ ಜನಹಿತ ಬಯಸುವ ಪಕ್ಷಗಳು ಈಗಲಾದರೂ ಕಲಿತು ಅಳವಡಿಸಿಕೊಳ್ಳಲೇಬೇಕಾದ ಇದುವರೆಗಿನ ಅನುಭವದ ಪಾಠಗಳೇನು? ಮುಖ್ಯವಾಗಿ ಮುಂದಿನ ಚುನಾವಣೆಯಲ್ಲಿ ನಾವು ಮಾಡಬೇಕಾದುದೇನು?

➤ ಮಹತ್ವದ ದೂರಗಾಮಿ ಪ್ರಶ್ನೆ: ಪ್ರಜಾಪ್ರಭುತ್ವವೆಂದರೆ ಇದೇ ಏನು? ಈಗಿರುವ ಚುನಾವಣಾ ಮಾದರಿಯೇ ಪ್ರಜಾಪ್ರಭುತ್ವದ ಏಕೈಕ ಮತ್ತು ಅಂತಿಮ ಮಾದರಿ ಏನು? ಈ ಮಾದರಿಯ ಮೂಲಕ ನಿಜವಾದ ಶೋಷಿತರು ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಹೇಳಿದ ಮಾತಿಗೆ ಏನೂ ಅರ್ಥವಿಲ್ಲವೇನು? ಈ ದೇಶದ ಬಹುಸಂಖ್ಯಾತರಾದ ತುಳಿತಕ್ಕೊಳಗಾದ ಜನಜಾತಿಗಳು, ಕಾರ್ಮಿಕರು, ರೈತರು, ಮಹಿಳೆಯರು, ಅಲ್ಪಸಂಖ್ಯಾತರು, ಇತ್ಯಾದಿ ಶೋಷಿತರಿಗೂ ಅವರ ಸಂಖ್ಯೆಗನುಸಾರ ಅಧಿಕಾರದಲ್ಲಿ ಪಾಲು ಸಿಗಬಾರದೇನು? ಅದು ಸಿಗುವಂತಹ ಮಾದರಿಯೇ ಜಗತ್ತಿನಲ್ಲಿ ಇಲ್ಲವೇನು?

ಈ ಮೇಲಿನ ಎಲ್ಲಾ ಪ್ರಶ್ನೆಗಳಿಗೂ ನೇರವಾದ ಮತ್ತು ನಿರ್ದಯಿಯಾದ ಉತ್ತರ ಕಂಡುಕೊಳ್ಳಲೇಬೇಕಿರುವುದು ಇಂದಿನ ಕಾಲದ ಕರೆಯಾಗಿದೆ. ಪರ್ಯಾಯ ರಾಜಕಾರಣದ ನಿಜವಾದ ಅರ್ಥ ಇದೇ ಆಗಿದೆ. ಮೇಲಿನ ಪ್ರಶ್ನೆಗಳಿಗೆ ಉತ್ತರ ಸಿಕ್ಕರೆ ಪರ್ಯಾಯ ರಾಜಕಾರಣಕ್ಕೆ ಉತ್ತರ ಸಿಕ್ಕಂತಾಗುತ್ತದೆ. ಇದಕ್ಕೆ ಉತ್ತರ ಒಂದು ಗಂಭೀರ ಹಾಗೂ ಸಾಮೂಹಿಕ ಮಂಥನದಿಂದ ಮಾತ್ರ ದೊರಕುತ್ತದೆ. ಅಂಥದ್ದೊಂದು ಚರ್ಚೆ ಲಂಕೇಶ್ ಪತ್ರಿಕೆಯಲ್ಲಿ ನಡೆಯಲಿ ಎಂಬ ಬಯಕೆ ನನ್ನದು. ಪ್ರಶ್ನೆ ಎತ್ತುವುದಷ್ಟೇ ಅಲ್ಲ, ಅದಕ್ಕೆ ಉತ್ತರ ಹುಡುಕುವ ಜವಾಬ್ದಾರಿ ನನ್ನದೂ ಆಗಿದೆ. ಮುಂದಿನ ಸಂಚಿಕೆಯಲ್ಲಿ ನನ್ನ ಕೆಲವು ದೃಢ ಅಭಿಪ್ರಾಯಗಳ ಜೊತೆ ಭೇಟಿಯಾಗುತ್ತೇನೆ.


ಹತಾಶೆಗೂ ಗುರಿಯಾಗದೆ, ಅಲ್ಪತೃಪ್ತಿಗೂ ಒಳಗಾಗದೆ ಎದುರಿಗಿರುವ ಸವಾಲನ್ನು ದೃಢಚಿತ್ತದೊಂದಿಗೆ ಎದುರಿಸೋಣ. ಕಾಲ ಕೇಳುವ ಯಕ್ಷಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸುವ ಧೈರ್ಯ ಮಾಡೋಣ.

■ ನೂರ್ ಶ್ರೀಧರ್

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

1. ನೀಲು ಕಾವ್ಯ -ಸಂಗ್ರಹ 1	150.00	46. ಕಂಡಹಾಗೆ ಭಾಗ-3	150.00
2. ನೀಲು ಕಾವ್ಯ -ಸಂಗ್ರಹ 2	150.00	47. ದರವೇಶಿ ಕತೆಗಳು	90.00
3. ನೀಲು ಕಾವ್ಯ -ಸಂಗ್ರಹ 3	200.00	48. ಬಸವರಾಜಮಾರ್ಗ	40.00
4. ಚಿತ್ರ ಸಮೂಹ	90.00	49. ಬೆನಜೀರ್	25.00
5. ಅಕ್ಷರ ಹೊಸ ಕಾವ್ಯ	300.00	50. ಆವರಣ ಎಂಬ ವಿ-ಕೃತಿ	100.00
6. ಮರೆಯುವ ಮುನ್ನ-1	150.00	51. ಜೈಲೆಂಬ ಲೋಕದಲ್ಲಿ	75.00
7. ಮರೆಯುವ ಮುನ್ನ-2	150.00	52. ವೇದಾಂತ ರೆಜಿಮೆಂಟ್	60.00
8. ಮರೆಯುವ ಮುನ್ನ-3	150.00	53. ಕಳೆದುಕೊಂಡವಳು	45.00
9. ಮರೆಯುವ ಮುನ್ನ-4	150.00	54. ಟ್ರೇನ್ ಟು ಪಾಕಿಸ್ತಾನ್	125.00
10. ಮರೆಯುವ ಮುನ್ನ-5	150.00	55. ಮಿಡತೆಗಳ ಬರವಿಗೆ....	100.00
11. ಪಾಂಚಾಲಿ	150.00	56. ಡಿಸೆಂಬರ್ 13	150.00
12. ಮನಕೆ ಕಾರಂಜಿಯ ಸ್ಪರ್ಶ	200.00	57. ಮನುಸ್ಮೃತಿ	20.00
13. ಸಾಹಿತಿ, ಸಾಹಿತ್ಯ ವಿಮರ್ಶೆ	300.00	58. ಆರೋಗ್ಯ ಮತ್ತು ಜೀವನ	125.00
14. ಈ ನರಕ ಈ ಪುಲಕ	125.00	59. ಜಬೀವುಲ್ಲಾ ಕೊಟ್ಟ ಕೋಳಿ	100.00
15. ಆಟ-ಜೂಜು-ಮೋಜು!	175.00	60. ವಿಷ್ಣು ನೂರೊಂದು ನೆನಪು	150.00
16. ಟೀಕೆ-ಟಿಪ್ಪಣಿ 1	200.00	61. ಓ ಈಳಂ	250.00
17. ಟೀಕೆ-ಟಿಪ್ಪಣಿ 2	200.00	62. ಖೈರ್ಲಾಂಜಿ	200.00
18. ಟೀಕೆ-ಟಿಪ್ಪಣಿ 3	200.00	63. ಕಮಲಾ ದಾಸ್ ಕಥೆಗಳು	60.00
19. ರೂಪಕ ಲೇಖಕರು	70.00	64. ಮಾಂಟೊ ಕಥೆಗಳು	80.00
20. ಕಂಡದ್ದು ಕಂಡಹಾಗೆ	100.00	65. ಕೋಮುವಾದ	60.00
21. ಪ್ರಸ್ತುತ	80.00	66. ಜಾತಿ ಪದ್ಧತಿ	150.00
22. ಹುಳಿಮಾವಿನ ಮರ	275.00	67. ರಾಮಾಯಣ ವಿಷವೃಕ್ಷ	75.00
23. ಮುಸ್ಸಂಜೆಯ ಕಥಾ ಪ್ರಸಂಗ	250.00	68. ಅರೇಬಿಯನ್ ನೈಟ್ಸ್	150.00
24. ಬಿರುಕು	60.00	69. ಜಿಮ್ ಕಾರ್ಬೆಟ್	80.00
25. ಅಕ್ಕ	80.00	70. ಗೋವು ಪವಿತ್ರ ಎಂಬ ಮಿಥ್ಯೆ	80.00
26. ಮಂಜು ಕವಿದ ಸಂಜೆ	70.00	71. ಅಸ್ಪೃಶ್ಯ ವಸಂತ	200.00
27. ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00	72. ಬಾಲಗೋಪಾಲ್ ಬರಹಗಳು	150.00
28. ಕಲ್ಲು ಕರಗುವ ಸಮಯ	125.00	73. ಬದುಕು-ಬಯಲು	200.00
29. ನಾನಲ್ಲ	60.00	74. ಚಾರ್ವಾಕ	250.00
30. ಕೆರೆಯ ನೀರನು ಕೆರೆಗೆ ಚೆಲ್ಲಿ	50.00	75. ತಾಜುಮಾ ಕವಿತೆಗಳು	75.00
31. ಉಲ್ಲಂಘನೆ	80.00	76. ಪ್ರೀತಿ ಮತ್ತು ಕ್ರಾಂತಿ	125.00
32. ಪಾಪದ ಹೂಗಳು	60.00	77. ಲೋಕಾಯುಕ್ತ ತನಿಖಾ ವರದಿ	100.00
33. ಬಿರುಕು	40.00	78. ಕೇಸರಿ ಭಯೋತ್ಪಾದನೆ	150.00
34. ಸಂಕ್ರಾಂತಿ	50.00	79. ಹೇಳುತ್ತೇನೆ ಕೇಳು	175.00
35. ತೆರೆಗಳು	50.00	80. ಮಂಗನ ಬ್ಯಾಟೆ	250.00
36. ಈಡಿಪಸ್ ಮತ್ತು ಅಂತಿಗೊನೆ	80.00	81. ಹುಳಿಮಾವು ಮತ್ತು ನಾನು	150.00
37. ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00	82. ಮೋದಿ ಮಂಕುಬೂದಿ	80.00
38. ಗುಣಮುಖ	30.00	83. ಆರ್‌ಸ್ಸೆಸ್ ಅಂತರಂಗ	80.00
39. ಕ್ರಾಂತಿ ಬಂತು ಕ್ರಾಂತಿ	40.00	84. ಆರ್‌ಸ್ಸೆಸ್ ಅಂತರಂಗ(ಇಂಗ್ಲಿಷ್)	80.00
40. ಬಿಚ್ಚಿಹೋದ ಪುಟಗಳು-1	250.00	85. ಚೇಡರ ಕಣಿವೆ ಮತ್ತು ಇತರ ಕತೆಗಳು	50.00
41. ಬಿಚ್ಚಿಹೋದ ಪುಟಗಳು-2	250.00	86. ಕಾಡಿನ ಕತೆಗಳು	40.00
42. ಬಿಚ್ಚಿಹೋದ ಪುಟಗಳು-3	250.00	87. ಮನೆ ಇಲ್ಲದ ಬಾಗಿಲು	80.00
43. ಕಪ್ಪು ಮಲ್ಲಿಗೆ	75.00	88. ಸೇತು ಬಿದ್ದ ನವಿಲು	225.00
44. ಕಂಡಹಾಗೆ ಭಾಗ-1	125.00	89. SSLC ನಂತರ ಮುಂದೇನು?	100.00
45. ಕಂಡಹಾಗೆ ಭಾಗ-2	150.00	90. ಟರ್ನಿಂಗ್ ಪಾಯಿಂಟ್	100.00




ಕೊಡಗು: ಬಿಜೆಪಿ-ಸಂಘ ಪರಿವಾರ ನಡುವೆ ವಿಲಕ್ಷಣ ಯುದ್ಧ

ಗೋಕುಲಾಷ್ಟಮಿಗೂ ಇಮಾಮ್ ಸಾಬಿಗೂ ಏನು ಸಂಬಂಧ ಎನ್ನುವಂತಾಗಿದೆ ಕೊಡಗು ಬಿಜೆಪಿಯ ಕತೆ. ಯಾಕೆಂದ್ರೆ ಯಡಿಯೂರಪ್ಪ ರಾಜ್ಯಾಧ್ಯಕ್ಷನಾಗಿ ಜಿಲ್ಲಾ ಪದಾಧಿಕಾರಿಗಳನ್ನು ನೇಮಕ ಮಾಡಿದಾಗ ಈಶ್ವರಪ್ಪನಂತಹ 'ಸಂತ್ರಸ್ತ' ಬಣ ಅದರ ವಿರುದ್ಧ ಕ್ಯಾತೆ ತೆಗೆದು ತಣ್ಣಗೆ ಮಲಗಿದ್ದ ಸಂಗೊಳ್ಳಿ ರಾಯಣ್ಣನನ್ನು ಎಳೆದಾಡಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಈಶ್ವರಪ್ಪನಿಂದ ಘನಂದಾರಿ ಉಪಯೋಗ ಇಲ್ಲದಿದ್ದರೂ ಯಡ್ಡಿಯನ್ನು ಹದ್ದುಬಸ್ತಿನ ಲ್ಲಿಡಲು ಬೆದರುಬೊಂಬೆಯಂತೆ ಈ ಬಾಯಾಸುರನನ್ನು ಬಳಸಿಕೊಳ್ಳಬಹುದೆನ್ನುವ ಸಂಘಪರಿವಾರದ ತಂತ್ರದಂತೆ ಡಿಕ್ಟೇಟರ್ ಅಮಿತ್ ಶಾ, ಪದಾಧಿಕಾರಿಗಳಲ್ಲಿ ಕೊಂಚ ಬದಲಾವಣೆ ಮಾಡುವಂತೆ ಯಡ್ಡಿಯ ಮನವೊಲಿಸಿ ಕಳಿಸಿದ್ದ. ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು ಮೊದಲಾದ ಜಿಲ್ಲೆಗಳಲ್ಲಿ ಪದಾಧಿಕಾರಿ ಆಯ್ಕೆಯಲ್ಲಿ ಭಿನ್ನಾಭಿಪ್ರಾಯ ಇದ್ದುದೇನೊ ನಿಜ. ಅಲ್ಲಿ ಬದಲಾವಣೆ ಆಗಬಹುದೆನ್ನುವ ನಿರೀಕ್ಷೆಯೂ ಇತ್ತು. ಆದರೆ ಈ ಯಡ್ಡಿ-ಈಶ್ವರಿ ಹಗ್ಗಜಗ್ಗಾಟದ ಆಟದಲ್ಲೇ ಇರದಿದ್ದ ಕೊಡಗಿನ ಜಿಲ್ಲಾಧ್ಯಕ್ಷರನ್ನು ಬದಲಾವಣೆ ಮಾಡಿರೋದನ್ನು ಕಂಡು ಕೊಡಗು ಬಿಜೆಪಿಗರು ಶಾಕ್‌ಗೆ ಒಳಗಾಗಿದ್ದಾರೆ. ಅವರಿಬ್ಬರ ಕಿತ್ತಾಟಕ್ಕೂ, ಕೊಡಗು ಪದಾಧಿಕಾರಿ ಬದಲಾವಣೆಗೂ ಏನು ಸಂಬಂಧ ಅಂತ ಇನ್ನೂ ಕನ್‌ಫ್ಯೂಶನ್‌ನಲ್ಲೇ ಇದ್ದಾರೆ. ಆದರೆ ಇಲ್ಲಿ ಬ್ರಿಗೇಡ್ ರಾಜಕಾರಣಕ್ಕಿಂತ ಸಂಘ ಪರಿವಾರದ ಗೋಸುಂಬಿ ರಾಜಕಾರಣವೇ ಕೈಯಾಡಿಸಿರೋದು ಬಹಳ ಜನರಿಗೆ ಗೊತ್ತಿಲ್ಲ.

ಬಿಜೆಪಿಯ ಕೊಡಗು ಜಿಲ್ಲಾಧ್ಯಕ್ಷನಾಗಿ ಆರು ತಿಂಗಳ ಹಿಂದಷ್ಟೇ ನೇಮಕಗೊಂಡಿದ್ದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪನನ್ನು ಪದಚ್ಯುತಗೊಳಿಸಿ, ಆ ಸ್ಥಾನಕ್ಕೆ ಸಂಘ ಪರಿವಾರದ ಹಿಡಿತದಲ್ಲಿರುವ ಬಿ.ಬಿ. ಭಾರತೀಶ್‌ನನ್ನು ನೇಮಿಸಿರುವುದರ ಹಿಂದೆ ಸಂಘ ಪರಿವಾರದ ಆತಂಕ ಎದ್ದು ಕಾಣುತ್ತದೆ. ಕೊಡಗು ಜಿಲ್ಲೆಯ ಹಿಡಿತ ತನ್ನ ಕೈತಪ್ಪಿ ಹೋಗಬಾರದೆನ್ನುವ ಹಪಾಹಪಿ ಸಂಘ ಪರಿವಾರಕ್ಕೆ ಇರೋದು ಇದರಿಂದ ಸಾಬೀತಾಗಿದೆ. ಮನುಮುತ್ತಪ್ಪ ಅಷ್ಟೊಂದು ಪ್ರಭಾವಿ ವ್ಯಕ್ತಿ ಅಲ್ಲ ಅನ್ನೋದು ಎಷ್ಟು ಸತ್ಯವೋ ಆತ ಸಂಘ ಪರಿವಾರದ ಖಾಸಾ ವ್ಯಕ್ತಿಯಲ್ಲ ಅನ್ನೋದೂ ಅಷ್ಟೇ ಸತ್ಯ. ಆದರೆ ಹೊಸದಾಗಿ ನೇಮಕವಾಗಿರೋ ಭಾರತೀಶ್ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಬರುವಷ್ಟು ಪ್ರಭಾವಿಯಲ್ಲದೇ ಹೋದರೂ ಯುವ ಮೋರ್ಚಾದ ಮೂಲಕ ಸಂಘ ಪರಿವಾರದ ಸಂಗದಲ್ಲಿರೋನು.

ದೇವಟ್ ಪರಂಬು ವಿವಾದ

ಕೊಡಗಿನಲ್ಲಿ ಬಿಜೆಪಿ ಭದ್ರ ನೆಲೆ ಕಂಡುಕೊಂಡಿದ್ದರೂ ಅಲ್ಲಿ ಸಂಘ ಪರಿವಾರಕ್ಕೆ ಹೇಳಿಕೊಳ್ಳುವಂತ ಹಿಡಿತವಿಲ್ಲ. ಜಿಲ್ಲೆಯಲ್ಲಿ ಕೊಡವ ಮತ್ತು ಅರೆಭಾಷೆ ಗೌಡರ ಸಮುದಾಯಗಳು ಪ್ರಭಾವಿ ಪಂಗಡಗಳು. ಇವುಗಳ ನಡುವೆ ಸಮನ್ವಯತೆ ಸಾಧಿಸುವಲ್ಲಿ ಸೋತುಹೋದ ಸಂಘ ಪರಿವಾರದ ಆಟ ಇಲ್ಲಿ ಅಷ್ಟಾಗಿ ನಡೆಯದು. ಇವೆರಡೂ ಸಮುದಾಯಗಳು ತಮ್ಮ ಭೂ-ಒಡೆತನದ ಪಾಳೇಗಾರಿಕೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಬಿಜೆಪಿ ಪರ ನಿಲ್ಲುತ್ತವೆಯೇ ಹೊರತು ಸಂಘ



ಅಪ್ಪಚ್ಚು ರಂಜನ್ · ಕೆ.ಜಿ. ಬೋಪಯ್ಯ · ಕಲ್ಲಡ್ಕ ಪ್ರಭಾಕರ ಭಟ್ಟ · ಬಿ.ಬಿ. ಭರತೇಶ್ · ರವಿ ಕುಶಾಲಪ್ಪ · ಮನು ಮುತ್ತಪ್ಪ

ಪರಿವಾರದ ಹಿಂದೂತ್ವ ಅಜೆಂಡಾಕ್ಕೆ ಮರುಳಾಗಿ ಅಲ್ಲ. ಅರೆಭಾಷೆ ಗೌಡ ಸಮುದಾಯ ಅಲ್ಪಸ್ವಲ್ಪ ಸಂಘ ಪರಿವಾರದೊಂದಿಗೆ ಗುರುತಿಸಿಕೊಂಡರೂ ಕೊಡವರು ಮಾತ್ರ ಅದಕ್ಕೆ ಕ್ಯಾರೇ ಅನ್ನುವುದಿಲ್ಲ. ಆ ಹಿಡಿತವನ್ನು ಸಾಧಿಸಿಕೊಳ್ಳಲು ಸಂಘ, ಟಿಪ್ಪು ಗಲಾಟೆಯಂತಹ ಕಸರತ್ತುಗಳನ್ನು ನಡೆಸುತ್ತಾ ಬಂದಿದೆ. ಈ ಜಿಲ್ಲಾಧ್ಯಕ್ಷ ಬದಲಾವಣೆಯೂ ಅಂತದ್ದರಲ್ಲಿ ಒಂದು ಎನ್ನಲಾಗುತ್ತಿದೆ.

ಅಸಲಿಗೆ ಕೊಡಗಿನಲ್ಲಿ ಸಂಘದ ಹಿಡಿತ ಸಂಪೂರ್ಣ ಕೈತಪ್ಪಿ ಹೋಗುವುದಕ್ಕೆ ದೇವಟ್ ಪರಂಬು ವಿವಾದವೇ ಪ್ರಮುಖ ಕಾರಣ. ಸಿ.ಎನ್.ಸಿ. ಸಂಘಟನೆಯ ಎನ್.ಯು. ನಾಚಪ್ಪ ಕೊಡಗಿನ ಭಾಗಮಂಡಲದ ಅಯ್ಯಂಗೇರಿ ಎಂಬಲ್ಲಿರುವ ಮೀಸಲು ಅರಣ್ಯದಲ್ಲಿ ಒಂದು ಸಮತಟ್ಟಾದ ಪ್ರದೇಶವನ್ನು ಗುರುತಿಸಿ, ಅಲ್ಲಿಯೇ ಟಿಪ್ಪು ಸುಮಾರು 85 ಸಾವಿರ ಕೊಡವರನ್ನು ಕೊಂದಿದ್ದ ಎಂದು ಪುಕಾರು ಎಬ್ಬಿಸಿದ್ದಲ್ಲದೆ ಕೊಡವರ ನೆನಪಿಗೆ ಅಲ್ಲೊಂದು ಸ್ಮಾರಕ ನಿರ್ಮಿಸಲು ಮುಂದಾಗಿದ್ದ. ಅದು ದೇವಟ್ ಪರಂಬು ಹೆಸರಿನಲ್ಲಿ ದೊಡ್ಡ ವಿವಾದವಾಗಿ ರೂಪುಗೊಂಡಿತ್ತು. ಈ ಹಿಂದೆ ಇದೇ ಎನ್.ಯು. ನಾಚಪ್ಪ, ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂಬ ಕೂಗು ಎಬ್ಬಿಸಿದ್ದು ಬಹುಶಃ ಓದುಗರಿಗೆ ನೆನಪಿರಬಹುದು.

ಕೊಡವರನ್ನು ಮಾತ್ರ ವಿಜೃಂಭಿಸಬಹುದೆನ್ನುವ ಕಾರಣಕ್ಕೆ ಈ ಪ್ರಸ್ತಾಪಕ್ಕೆ ಕೊಡಗಿನ ಅರೆಭಾಷೆ ಗೌಡರು ಮತ್ತು ಇತರೇ ಮೂಲನಿವಾಸಿಗಳು ವಿರೋಧವನ್ನು ವ್ಯಕ್ತಪಡಿಸಿದ್ದರು. ಪ್ರಭಾವಿ ಅರೆಭಾಷೆ ಗೌಡರ ವಿರೋಧ ಎದುರಿಸಲಾಗದೆ ಅದು ಬಿದ್ದು ಹೋಯಿತು. ಆದರೆ ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಬಯಸಿದ ಸಂಘ ಪರಿವಾರ ವಿಶ್ವ ಹಿಂದೂ ಪರಿಷತ್ತಿನ ಚಕ್ಕೇರ ಮನು ಹಾಗೂ ಮಾಚಿಮಾಡ ರವೀಂದ್ರರ ಮೂಲಕ ದೇವಟ್ ಪರಂಬಿನಲ್ಲಿ ಕೊಡವ ಸ್ಮಾರಕ ನಿರ್ಮಿಸುವುದು ಬೇಡ, ಅಲ್ಲಿ ಹಿಂದೂ ಸ್ಮಾರಕವೊಂದನ್ನು ನಿರ್ಮಿಸೋಣ ಅನ್ನೋ ಹೊಸ ವಿಚಾರ ಮುಂದಿರಿಸಿತ್ತು. ಕೊಡವರು ಸಂಘ ಪರಿವಾರದ ಮೇಲೆ ಸಿಟ್ಟಾಗಲು ಇದೇ ಕಾರಣ. ದಕ್ಷಿಣಕನ್ನಡದಲ್ಲಿ ಸಾಕಷ್ಟು ಕೋಮು-ಪ್ರಯೋಗಗಳಿಗೆ ಕುಖ್ಯಾತನಾದ ಕಲ್ಲಡ್ಕ ಪ್ರಭಾಕರ ಭಟ್ಟ ಹಾಗೂ ಜಗದೀಶ್ ಕಾರಂತ್ ಕೂಡಾ ಕೊಡಗಿಗೆ ಆಗಮಿಸಿ ಎರಡೂ ಕಡೆಯವರ ಸಭೆ ನಡೆಸಲು ಯತ್ನಿಸಿದ್ದುಂಟು. ಆದರೆ ಅದು ಯಶಸ್ವಿಯಾಗಲಿಲ್ಲ. ಆಗಿನಿಂದಲೂ ಕೊಡಗಿನ ಮೇಲೆ ತಮ್ಮ ಹಿಡಿತ ಸಡಿಲವಾಗುತ್ತಿದೆ ಎಂಬ ಚಡಪಡಿಕೆ ಸಂಘ ಪರಿವಾರಕ್ಕೆ ಶುರುವಾಗಿತ್ತು. ಜೊತೆಗೆ ಕೊಡಗಿನ ಬಿಜೆಪಿ ಶಾಸಕದ್ವಯರಾದ ಕೆ.ಜಿ.ಬೋಪಯ್ಯ ಮತ್ತು ಅಪ್ಪಚ್ಚುರಂಜನ್ ತಮ್ಮ ಹದ್ದುಬಸ್ತಿನಲ್ಲಿಲ್ಲ ಅನ್ನೋ ಕೊರಗು ಸಂಘ ಪರಿವಾರವನ್ನು ಕಾಡುತ್ತಲೇ ಇತ್ತು.

ಒಂದು ಕಲ್ಲು ಎರಡು ಹಕ್ಕಿ

ಬಿಜೆಪಿ ಜಿಲ್ಲಾಧ್ಯಕ್ಷನಾಗಿದ್ದ ಮನು ಮುತ್ತಪ್ಪ ಕೆ.ಜಿ.ಬೋಪಯ್ಯನ ಬಂಟ. ಜೊತೆಗೆ ಕೊಡವ ಸಮುದಾಯಕ್ಕೆ ಸೇರಿದವನು. ಬೋಪಯ್ಯ ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿರುವುದರಿಂದ ಆತನಿಗೆ ಮತ್ತೊಂದು ಬಾರಿಗೆ ವಿರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡಬಾರದು ಎನ್ನುವ ವಿಚಾರ ಕೊಡವ ಜನಾಂಗದಲ್ಲಿದೆ. ಇತ್ತೀಚೆಗೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮುಂದಿನ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಸಮಿತಿಯೇ ಅಂತಿಮಗೊಳಿಸಿ ಕಳುಹಿಸಬೇಕು ಎಂದು ಸೂಚಿಸಿದ್ದರಿಂದ ಮನುಮುತ್ತಪ್ಪ ಅಧ್ಯಕ್ಷರಾಗಿದ್ದರೆ ಖಂಡಿತವಾಗಿಯೂ ಬೋಪಯ್ಯನವರ ಹೆಸರೇ ಶಿಫಾರಸ್ಸುಗೊಳ್ಳುತ್ತದೆ ಎನ್ನುವ ಲೆಕ್ಕಾಚಾರ ಕೊಡವರದ್ದಾಗಿತ್ತು.

ಕೊಡವರ ಈ ಲೆಕ್ಕಾಚಾರ ಅರಿತ ಸಂಘ ಪರಿವಾರ ಇಲ್ಲೊಂದು ಗೇಮ್ ಪ್ಲೇ ಮಾಡಲು ಆಲೋಚಿಸಿತ್ತು. ಮನು ಮುತ್ತಪ್ಪನನ್ನು ಜಿಲ್ಲಾಧ್ಯಕ್ಷ ಗಾದಿಯಿಂದ ಕೆಳಗಿಳಿಸಿದರೆ ಮುಂದಿನ ಎಲೆಕ್ಷನ್ ವೇಳೆಗೆ ಬೋಪಯ್ಯನಿಗೆ ಟಿಕೆಟ್ ತಪ್ಪಿಸಲು ಒಂದು ಅವಕಾಶ ಮಾಡಿಕೊಂಡಂತಾಗುತ್ತದೆ. ಅಲ್ಲದೇ ತನ್ನ ಅನುಯಾಯಿಯಾಗಿದ್ದರೂ ಕೊಡವ ಸಮುದಾಯದವನೆಂಬ ಕಾರಣಕ್ಕೆ ಮನು ಮುತ್ತಪ್ಪನನ್ನು ಕೆಳಗಿಳಿಸಲು ಅರೆಭಾಷೆ ಗೌಡ ಬೋಪಯ್ಯನೇ ಪಿತೂರಿ ನಡೆಸಿದ್ದಾನೆ ಎಂಬುದಾಗಿ ಗುಲ್ಲೆಬ್ಬಿಸಿದರೆ ಜಿಲ್ಲೆಯಲ್ಲಿ ಬೋಪಯ್ಯನ ಪ್ರಭಾವವೂ ತಗ್ಗುತ್ತದೆ ಅನ್ನೋದು ಸಂಘದ ಗುಣಾಕಾರ! ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯೋದನ್ನು ಕೇಸರಿಗಳಿಗೆ ಹೇಳಿಕೊಡಬೇಕೆ!!

ಹಾಗಾಗಿ ಈಶ್ವರಪ್ಪನ ಇಶ್ಯೂ ಇಟ್ಟುಕೊಂಡು ಕೊಡಗು ಜಿಲ್ಲೆಯ ಅಧ್ಯಕ್ಷರನ್ನು ಬದಲಿಸಲು ಯಡಿಯೂರಪ್ಪನ ಮೇಲೆ ಸಂಘದ ಮುಖಂಡರು ಒತ್ತಡ ತಂದಿದ್ದಾರೆ. ಈಶ್ವರಪ್ಪನನ್ನು ಹದ್ದುಬಸ್ತಿನಲ್ಲಿಡಲು ಸಂಘ ಪರಿವಾರದ ಬೆಂಬಲದ ಅನಿವಾರ್ಯತೆ ಇರುವ ಯಡ್ಡಿಯೂ ಅದಕ್ಕೆ ಸೈ ಅಂದಿದ್ದಾರೆ. ಅಲ್ಲಿಗೆ ಅಧ್ಯಕ್ಷರ ಬದಲಾವಣೆ ಘಟಿಸಿಹೋಗಿದೆ. ಸಂಘ ಪರಿವಾರದ ಹಿಡಿತದಲ್ಲಿದ್ದ ಬಿ.ಬಿ. ಭಾರತೀಶ್‌ಗೆ ಅಧ್ಯಕ್ಷ ಯೋಗ ಒಲಿದು ಬಂದಿದೆ.

ಬೋಪಯ್ಯ ವರ್ಸಸ್ ಸಿಮ್ಹ

ಕೆಲದಿನಗಳ ಹಿಂದೆ ಕಸ್ತೂರಿ ರಂಗನ್ ವರದಿ ವಿರೋಧಿಸಿ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಸಂಸದ ಪ್ರತಾಪ್ ಸಿಮ್ಹ ಮತ್ತು ಕೆ.ಜಿ. ಬೋಪಯ್ಯ ವೇದಿಕೆಯಲ್ಲೇ ಕಿತ್ತಾಡಿಕೊಂಡಿದ್ದರು. ಸಿಮ್ಹನ ವರ್ತನೆ ಖಂಡಿಸಿ, ಕಡೂರು ಶಾಸಕ ವೈ.ಎಸ್.ವಿ.ದತ್ತ ಸಭಾತ್ಯಾಗ ಮಾಡಿದ್ದೂ ಉಂಟು. ಆ ಗಲಾಟೆಯ ವೇಳೆ ಮುಂದಿನ ಚುನಾವಣೆಗೆ ನಿನಗೆ ಟಿಕೆಟ್ ತಪ್ಪುವಂತೆ ಮಾಡುತ್ತೇನೆ ಅಂತ ಸಿಮ್ಹ ಘರ್ಜಿಸಿತ್ತು. ಹಾಗಾಗಿ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ರವಿ ಕುಶಾಲಪ್ಪನನ್ನು ವಿರಾಜಪೇಟೆಯಲ್ಲಿ ಬೋಪಯ್ಯನಿಗೆ ಪರ್ಯಾಯ ನಾಯಕನನ್ನಾಗಿ ರೂಪಿಸುವ ಯತ್ನಗಳೂ ಚಾಲನೆ ಪಡೆದುಕೊಂಡಿವೆ. ಅಸಲಿಗೆ ಈ ಮೊದಲು ಜಿಲ್ಲಾ ಪದಾಧಿಕಾರಿಗಳ ಆಯ್ಕೆ ಸಮಯದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷನನ್ನಾಗಿ ಇದೇ ರವಿ ಕುಶಾಲಪ್ಪನನ್ನು ನೇಮಿಸುವಂತೆ ಒತ್ತಡಗಳೂ ಬಂದಿದ್ದವು. ಆದರೆ ಯಡಿಯೂರಪ್ಪನೊಟ್ಟಿಗಿರುವ ತನ್ನ ಆಪ್ತತೆಯನ್ನೆ ಬಂಡವಾಳ ಮಾಡಿಕೊಂಡ ಕೆ.ಜಿ.ಬೋಪಯ್ಯ ತನ್ನ ಬಂಟ ಮನು ಮುತ್ತಪ್ಪನನ್ನು ಅಧ್ಯಕ್ಷರನ್ನಾಗಿಸುವಲ್ಲಿ ಸಫಲರಾಗಿದ್ದರು. ಆಮೇಲೆ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ರವಿ ಕುಶಾಲಪ್ಪನನ್ನು ಘೋಷಿಸಲಾಗಿತ್ತಾದರೂ ಆತ ಹುದ್ದೆಯನ್ನು ಸ್ವೀಕರಿಸಲಿಲ್ಲ.

ಈಗ ಜಿಲ್ಲಾಧ್ಯಕ್ಷ ಮರುಆಯ್ಕೆ ವಿಚಾರ ಪ್ರಸ್ತುತಕ್ಕೆ ಬಂದಾಗಲೂ ಮನು ಮುತ್ತಪ್ಪನ ಜಾಗಕ್ಕೆ ಬಿ.ಬಿ. ಭಾರತೀಶ್‌ನ ಜೊತೆಗೆ ಅದೇ ರವಿ ಕುಶಾಲಪ್ಪನ ಹೆಸರೂ ಕೇಳಿಬಂದಿತ್ತು. ಇವರಿಬ್ಬರ ನಡುವೆ ಯಾರು ಎಂಬ ಪ್ರಶ್ನೆ ಬಂದಾಗ, ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್, ಯಡ್ಡಿಯೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿ ಭಾರತೀಶ್ ಹೆಸರನ್ನೇ ನಿಕ್ಕಿ ಮಾಡಿದ್ದಾರೆ. ರವಿ ಕುಶಾಲಪ್ಪ ಕೊಡವ ಜನಾಂಗಕ್ಕೆ ಸೇರಿದ್ದು ಮುಂದೆ ಆತನನ್ನು ವಿರಾಜಪೇಟೆಗೆ ಅಭ್ಯರ್ಥಿಯಾಗಿಸುವ ಅಪಾಯ ಇದೆ ಎನ್ನುವುದು ಬೋಪಯ್ಯನ ಆತಂಕವಾದರೆ, ಈ ಹಿಂದೆಯೇ ತನಗೆ ಬಹಿರಂಗ ಸೆಡ್ಡು ಹೊಡೆದಿದ್ದ ರವಿ ಕುಶಾಲಪ್ಪ ಮಡಿಕೇರಿಯವರು ಆಗಿರುವುದರಿಂದ ಮಡಿಕೇರಿಯಲ್ಲಿ ತನ್ನ ಪ್ರತಿಸ್ಪರ್ಧಿಯಾಗಬಹುದು ಎಂಬುದು ಅಪ್ಪಚ್ಚು ರಂಜನ್ ಆತಂಕ. ಹಾಗಾಗಿ ಬಿ.ಬಿ.ಭಾರತೀಶ್‌ಗೆ ಜೈ ಅಂದಿದ್ದಾರೆ. ಪರೋಕ್ಷವಾಗಿ ಸಂಘ ಪರಿವಾರ ಬಯಸಿದ್ದಕ್ಕೆ ಸೈ ಅಂದಿದ್ದಾರೆ!


ಈ ನಡುವೆ ಅಧ್ಯಕ್ಷರ ದಿಢೀರ್ ಬದಲಾವಣೆಯಿಂದ ಗೊಂದಲಕ್ಕೆ ಒಳಗಾದ ಬಿಜೆಪಿ ಕಾರ್ಯಕರ್ತರನ್ನು ಯಡ್ಡಿ ಸಂತೈಸುತ್ತಾ 'ಮುಂದಿನ ಚುನಾವಣೆಯಲ್ಲಿ ಕೊಡಗು ಜಿಲ್ಲೆಯಿಂದ ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರೇ ಅಭ್ಯರ್ಥಿಗಳು. ಈ ವಿಚಾರದಲ್ಲಿ ಯಾವ ಗೊಂದಲವೂ ಬೇಡ. ನಿಶ್ಚಿಂತೆಯಿಂದ ಕೆಲಸ ಮಾಡಿ' ಎಂದಿದ್ದಾರೆ. ಅಸಲಿಗೆ ಜಿಲ್ಲೆಯಲ್ಲಿ ಪ್ರಭಾವಿಗಳಾಗಿ ಬೇರೂರಿ ತನ್ನ ಪ್ರಭಾವವನ್ನೇ ಕುಗ್ಗಿಸಿರುವ ಈ ಈರ್ವರನ್ನು ಬಗ್ಗುಬಡಿದು ಜಿಲ್ಲೆಯನ್ನು ತನ್ನ ಕೋಮು ಹಿಡಿತಕ್ಕೆ ಸೆಳೆದುಕೊಳ್ಳಬೇಕೆನ್ನುವುದು ಸಂಘ ಪರಿವಾರದ ಉದ್ದೇಶ. ಈ ಹಾದಿಯಲ್ಲಿ ಇವರಿಬ್ಬರಿಗೂ ಅಥವಾ ಕಡೇಪಕ್ಷ ಒಬ್ಬರಿಗಾದರೂ ಟಿಕೆಟ್ ತಪ್ಪಿಸಬೇಕೆಂದೆ ಸಂಘ ಪರಿವಾರ ಜಿಲ್ಲಾಧ್ಯಕ್ಷರ ಬದಲಾವಣೆ ಮಾಡಿಸಿದೆ. ಅಂತದ್ದರಲ್ಲಿ ಚುನಾವಣೆಗೆ ಒಂದು ವರ್ಷ ಇರುವಾಗಲೇ ಯಡ್ಡಿ ಹೀಗೆ ಘೋಷಣೆ ಮಾಡಿರೋದು ಮತ್ತೊಂದು ಸಂಘರ್ಷಕ್ಕೆ ನಾಂದಿ ಹಾಡಬಹುದಾಗಿದೆ.

ಈ ಹಿಂದೆ ಎಸ್.ಜಿ. ಮೇದಪ್ಪ ಜಿಲ್ಲಾಧ್ಯಕ್ಷರಾಗಿದ್ದ ವೇಳೆಯಲ್ಲಿ ಅವರಿಗೆ ಒಂದೇಒಂದು ಸಭೆ ನಡೆಸಲೂ ಸಹಕಾರ ನೀಡದೆ, ಬಹುಮತವಿದ್ದರೂ ಅವರನ್ನು ವಿಧಾನ ಪರಿಷತ್ ಚುನಾವಣೆಯಲ್ಲಿ ಸೋಲಿಸಿದ್ದ ಬೋಪಯ್ಯ-ರಂಜನ್ ಜೋಡಿ ಈಗ ಭಾರತೀಶ್‌ಗೆ ಎಂಥಾ ಸಹಕಾರ ನೀಡುತ್ತೆ ಅನ್ನೋದನ್ನು ಕಾದುನೋಡಬೇಕು. ಒಟ್ಟಿನಲ್ಲಿ ಕೊಡಗಿನ ಮಟ್ಟಿಗೆ ಇದು ಬಿಜೆಪಿ-ಸಂಘ ಪರಿವಾರದ ನಡುವಿನ ವಿಲಕ್ಷಣ ಕಾಳಗ.


■ ಬಿ.ಎನ್. ಮನುಶೇಖರ್

ಲಂಕೇಶ್ ವಾರ್ಷಿಕ ಚಂದಾ ವಿವರ
ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...
ಚಂದಾ ವಿವರಗಳು ಹೀಗಿವೆ:
ಒಂದು ವರ್ಷಕ್ಕೆ : 700 ರೂ.
ಎರಡು ವರ್ಷಕ್ಕೆ : 1400 ರೂ.
ಮೂರು ವರ್ಷಕ್ಕೆ : 2000 ರೂ.
ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.
ಹೆಚ್ಚಿನ ಮಾಹಿತಿಗಾಗಿ: 9880302817/080-26676427

ಹುಳಿಯಾರು: ವಿದ್ಯಾರ್ಥಿಗಳ 'ವಿಷ' ಸಾವಿನ ಹಿಂದೆ 'ಸೇಡಿ'ನ ಜಾಡು!








ಎಬ್ಬ ಸೆಕ್ಯೂರಿಟಿ ಗಾರ್ಡ್ ಸೇರಿದಂತೆ ಅನಾಮತ್ತು ಐದು ಅಮಾಯಕ ವಿದ್ಯಾರ್ಥಿಗಳ ಪ್ರಾಣ ತೆಗೆದ ನಾಯಕನಹಳ್ಳಿ ತಾಲೂಕಿನ ಬಳ್ಳಿಕಟ್ಟೆಯ ವಿದ್ಯಾವಾರಿಧಿ ಈಗ ಅಕ್ಷರಶಃ ನಿಗೂಢ ಸಾವಿನ ಮನೆಯಂತಾಗಿದೆ. ಭವಿಷ್ಯದ ಬಗ್ಗೆ ಕನಸು ಕಟ್ಟಿಕೊಂಡಿದ್ದ ಹೆತ್ತ ...ಗಳು ಆಸ್ಪತ್ರೆ ಮಾರ್ಚುರಿಯಲ್ಲಿ ಹೆಣವಾಗಿ ಮಲಗಿದ್ದ ... ಮುಂದೆ ಎದೆ ಹೊಡೆದುಕೊಂಡು ರೋದಿಸುತ್ತಿದ್ದ ...ಅಂತವರ ಎದೆಯಲ್ಲೂ ದುಃಖ ಚಿಮ್ಮಿಸುತ್ತಿತ್ತು. ...ದು ಆಕಸ್ಮಿಕ ಘಟನೆಯಂತೆ ಕಂಡುಬಂದರೂ ... ವ್ಯಾಪಾರೀಕರಣ ಮತ್ತು ಅಂತಹ ವ್ಯಾಪಾರೀಕರಣದ ...ದ್ದ ಪೋಷಕರ ಮುನ್ನುಡಿಯಂತಿದ್ದುದು ಸುಳ್ಳಲ್ಲ. ...ಳಿಯಾರಿನ ವಿದ್ಯಾವಾರಿಧಿ ಇಂಟರ್‌ನ್ಯಾಷನಲ್ ಸಂಸ್ಥೆ ... ಪಠ್ಯಾಧಾರಿತ ವಸತಿಶಾಲೆ. ಇದು ಬಿಜೆಪಿ ಮಾಜಿ ಕಿರಣ್ ಕುಮಾರ್ ಮತ್ತು ಆತನ ಹೆಂಡತಿ ಕವಿತಾರ ...ದ ಶಾಲೆ. ಈ ಶಾಲೆ ಪ್ರತಿಷ್ಠಿತವಾದದ್ದು ಎಂಬ ... ಪೋಷಕರಲ್ಲಿ ಬಲವಾಗಿ ಬೇರೂರಿದ್ದರಿಂದ ...ರ ರೂಪಾಯಿ ಸುರಿದು ಸಹ ಈ ಭಾಗದ ಜನ ... ಮಕ್ಕಳನ್ನು ಸೇರಿಸಲು ಬಯಸುತ್ತಾರೆ. ಸದಾ ...ಯದಲ್ಲಿ ಮುಳುಗಿರುವ ಕಿರಣ್ ಈ ಕಡೆ ...ಹರಿಸುವುದು ಕಮ್ಮಿ. ಇಲ್ಲಿ ನಡೆಯುವುದೆಲ್ಲ ಕವಿತಾರ ...ಮುಂತೆ.

...ಟನೆ ನಡೆದ ದಿನ ಎಂದಿನಂತೆ ರಾತ್ರಿ ಚಪಾತಿ, ...ರ್ ಊಟ ಮಾಡಿದ ಮಕ್ಕಳಲ್ಲಿ ಐವರು ಇದ್ದಕ್ಕಿದ್ದಂತೆ ...ಒಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿತಾದರು ...ಮ್‌ಪುರದ ಶ್ರೇಯಸ್, ಆಕಾಂಕ್ಷ್ ಪಲ್ಲಕ್ಕಿ ಹಾಗೂ ...ಹಳ್ಳಿಯ ಶಾಂತಮೂರ್ತಿ ಎಂಬ ಹದಿನೈದು ವರ್ಷ ...ಸಿನ ವಿದ್ಯಾರ್ಥಿಗಳು ಅಸುನೀಗಿದ್ದಾರೆ. ವಿಷಾಹಾರ ...ದ ಮಕ್ಕಳು ಕೈಕಾಲು, ಎದೆನೋವು, ತಲೆನೋವು, ...ನಿಂದ ನರಳುತ್ತಾ ಉಳಿದ ವಿದ್ಯಾರ್ಥಿಗಳಿಗೆ ಈ ...ಮಾಡಬೇಡಿ ಎಂದು ಬೇಡಿಕೊಂಡಿದ್ದರಿಂದ ಬಾಕಿ ...ದ್ಯಾರ್ಥಿಗಳು ಬದುಕುಳಿದಿದ್ದಾರೆ. ಇಲ್ಲದೇ ...ದ್ದಲ್ಲಿ ಅನಾಮತ್ತು 26 ವಿದ್ಯಾರ್ಥಿಗಳು ಪ್ರಾಣ ಕೊನೆಯಾಗುತ್ತಿತ್ತು.

... ಮಕ್ಕಳು ಹೇಳುತ್ತಿರೋದು ಸುಳ್ಳೋ, ನಿಜವೋ ...ರೀಕ್ಷಿಸಲು ಆಹಾರ ಸೇವಿಸಿದ್ದ ಸೆಕ್ಯೂರಿಟಿ ಗಾರ್ಡ್ ... ಕೂಡ ಜಿಲ್ಲಾಸ್ಪತ್ರೆಯ ಐಸಿಯುನಲ್ಲಿ ಸಾವುಬದುಕಿನ ... ಸೆಣಸಾಡಿ ಮೃತಪಟ್ಟಿದ್ದಾನೆ. ಈ ದುರಂತದಿಂದ ...ಕರು ಕಂಗಾಲಾಗಿದ್ದು ಆಕ್ರೋಶದೊಂದಿಗೆ ...ತ್ತಿದ್ದಾರೆ. ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ... ಹೇಳಲು ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ...ಯಚಂದ್ರ ಈ ಮೂರು ವಿದ್ಯಾರ್ಥಿಗಳಲ್ಲಿ ಇಬ್ಬರು ...ಬಂಧಿಗಳೂ ಹೌದು, ಈ ಪ್ರಕರಣದ ಬಗ್ಗೆ ...ನಿಖೆ ನಡೆಸಲಾಗುವುದು ಎಂದು ಹೇಳಿದ್ದಾರೆ. ...ರಣಕ್ಕೆ ಸಂಬಂಧಿಸಿದಂತೆ ಅಡುಗೆ ಭಟ್ಟ ಶಿವಯ್ಯ, ...ಕಿ ರಂಗಲಕ್ಷ್ಮೀ, ಮೇಲ್ವಿಚಾರಕ ಸುಹಾನ್ ಮತ್ತು ...ರನ್ನು ಎರಡನೇ ದಿನವೇ ಬಂಧಿಸಿದ್ದರು. ಆದರೆ ...ರಣದಲ್ಲಿ ಎ1 ಮತ್ತು ಎ2 ಆರೋಪಿಗಳಾದ ...ಕುಮಾರ್ ಹಾಗು ಕವಿತಾಕಿರಣ್ ಎರಡು ದಿನ ...ಸಿಕೊಂಡು, ನಂತರ ತಾವಾಗಿಯೇ ದಿವೈಎಸ್ಪಿ ...ಪಾಲ್ ಮುಂದೆ ಶರಣಾಗಿದ್ದಾರೆ. ಸದ್ಯಕ್ಕೆ ಎಲ್ಲರೂ ...ಮೀನಿ ಹೊರಬಂದಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿ ...ರಣ್ ಕುಮಾರ್ ಊಟದಲ್ಲಿ ನೀಲಿ ಬಣ್ಣ ಕಾಣಿಸಿ...ದ್ದು ಯಾರದೋ ಕಾಣದ ಕೈಗಳ ಕೈವಾಡವಿದ್ದು ... ವಿಷ ಔಷಧ ಬೆರೆಸಿದ್ದಾರೆ ಎಂದು ಹೇಳಿದ್ದಾರೆ.

ನಾನಾ ಅನುಮಾನಗಳು?

ಜಿಲ್ಲಾ ಉಸ್ತುವಾರಿ ಸಚಿವ ಜಯಚಂದ್ರರು




ವಿದ್ಯಾಸಂಸ್ಥೆಯ ಮಾಜಿ ಪ್ರಾಂಶುಪಾಲ ರವಿ

ಉದ್ದೇಶಪೂರ್ವಕ ವಿಷಪ್ರಯೋಗವಾಗಿರುವ ಅನುಮಾನವಿದೆ ಎಂದಿರುವುದರಿಂದ ಇದು ಸಹಜ ನಿರ್ಲಕ್ಷ್ಯದಿಂದ ನಡೆದಿದೆ ಎಂದು ಹೇಳಲಾಗದು. ಆಹಾರದಲ್ಲಿ ಉದ್ದೇಶಪೂರ್ವಕವಾಗಿ ವಿಷ ಬೆರೆಸಿದ್ದಾರೆ ಎಂಬ ಅಭಿಪ್ರಾಯ ದಟ್ಟವಾಗುತ್ತಿದೆ. ಇಂತಹ ಅಭಿಪ್ರಾಯ ದಟ್ಟವಾದಂತೆಯೇ ಅದು ಮಾಜಿ ಪ್ರಿನ್ಸಿಪಾಲ್ ರವಿಯತ್ತ ತಿರುಗಿಕೊಳ್ಳುತ್ತಿರೋದು ಕುತೂಹಲ ಮೂಡಿಸುತ್ತಿದೆ.


ಈ ಹಿಂದೆ ವಿದ್ಯಾವಾರಿಧಿ ವಿದ್ಯಾಸಂಸ್ಥೆಯ ಪ್ರಾಂಶುಪಾಲನಾಗಿದ್ದ ರವಿಗೂ ಸಂಸ್ಥೆಯ ಕಾರ್ಯದರ್ಶಿ ಕವಿತಾಗೂ ಇದ್ದಂತಹ ಸಲುಗೆಯಿಂದ ಕೆರಳಿದ್ದ ಕವಿತಾರ ಗಂಡ ಹಾಗು ಸಂಸ್ಥೆಯ ಮಾಲಿಕ ಕಿರಣ್ ಕುಮಾರ್,. ರವಿಯನ್ನು ವಜಾಗೊಳಿಸಿದ್ದ. ಈ ವೇಳೆ ರವಿ ಮಾನ ತೆಗೆಯುವುದಾಗಿ ಕಿರಣ್ ಕುಮಾರ್‌ಗೆ ಸವಾಲು ಹಾಕಿದ್ದನೆಂದು ಹೇಳಲಾಗುತ್ತಿದ್ದು ಇವನ ಪಿತೂರಿಯಿಂದಲೇ ಈ ಘಟನೆ ನಡೆದಿದೆಯೆಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಇದನ್ನು ಪುಷ್ಟೀಕರಿಸುವಂತೆ ರವಿ ಕೂಡ ನಾಪತ್ತೆಯಾಗಿರುವುದು ಅನುಮಾನಾಸ್ಪದವಾಗಿದೆ.

ಈ ಹಿಂದೆ ವಿದ್ಯಾವಾರಿಧಿ ವಿದ್ಯಾಸಂಸ್ಥೆಯ ಪ್ರಾಂಶುಪಾಲನಾಗಿದ್ದ ರವಿಗೂ ಸಂಸ್ಥೆಯ ಕಾರ್ಯದರ್ಶಿ ಕವಿತಾಗೂ ಇದ್ದಂತಹ ಸಲುಗೆಯಿಂದ ಕೆರಳಿದ್ದ ಕವಿತಾರ ಗಂಡ ಹಾಗು ಸಂಸ್ಥೆಯ ಮಾಲಿಕ ಕಿರಣ್ ಕುಮಾರ್, ರವಿಯನ್ನು ವಜಾಗೊಳಿಸಿದ್ದ. ಈ ವೇಳೆ ರವಿ ಮಾನ ತೆಗೆಯುವುದಾಗಿ ಕಿರಣ್ ಕುಮಾರ್‌ಗೆ ಸವಾಲು ಹಾಕಿದ್ದನೆಂದು ಹೇಳಲಾಗುತ್ತಿದ್ದು ಇವನ ಪಿತೂರಿಯಿಂದಲೇ ಈ ಘಟನೆ ನಡೆದಿದೆಯೆಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಇದನ್ನು ಪುಷ್ಟೀಕರಿಸುವಂತೆ ರವಿ ಕೂಡ ನಾಪತ್ತೆಯಾಗಿರುವುದು ಅನುಮಾನಾಸ್ಪದವಾಗಿದೆ. ಜೊತೆಗೆ ಶಾಲೆಯಲ್ಲಿರುವ 17 ಸಿ.ಸಿ. ಕ್ಯಾಮರಗಳು ಅವತ್ತು ಕಾರ್ಯನಿರ್ವಹಿಸದೆ ಇರೋದು ನೋಡಿದರೆ ಇದೊಂದು ಪಕ್ಕಾ ಪೂರ್ವನಿಯೋಜಿತ ಕೃತ್ಯ ಎನ್ನುವುದು ಮನದಟ್ಟಾಗುತ್ತದೆ.



ಟಿ.ಬಿ. ಜಯಚಂದ್ರ

ಇಲ್ಲಿ ಮತ್ತೊಂದು ವಾದವೂ ತೇಲಿಬರುತ್ತಿದೆ. ಅದೇನೆಂದರೆ, ಕಿರಣ್‌ಕುಮಾರ್ 2018ರ ಎಲೆಕ್ಷನ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗುವ ಪ್ರಯತ್ನದಲ್ಲಿದ್ದು ಇದನ್ನು ತಪ್ಪಿಸಲು ಪಕ್ಷದೊಳಗಿನ ಅವರ ಪ್ರತಿಸ್ಪರ್ಧಿಗಳೇ ಈ ರೀತಿ ಮಾಡಿದ್ದಾರೆ ಎನ್ನಲಾಗುತ್ತಿದೆ. ಸದ್ಯ ಹುಳಿಯಾರು ಪೊಲೀಸ್ ಠಾಣೆಯಲ್ಲಿ ಶಾಲೆಯ ಮಾಲೀಕರು ಮತ್ತು ಸಿಬ್ಬಂದಿ ಮೇಲೆ ಸೆಕ್ಷನ್ 304ಎ ದೂರು ದಾಖಲಾಗಿದೆ.



ಮೃತ ರಮೇಶ್ ಕುಟುಂಬಕ್ಕೆ ಸಾಂತ್ವನ ಹೇಳುತ್ತಿರುವ ವರಿಷ್ಠಾಧಿಕಾರಿ ಇಶಾ ಪಂಥ್

ವಸತಿಶಾಲೆಗೆ ಅನುಮತಿಯೆ ಇರಲಿಲ್ಲ

ಈ ವಿದ್ಯಾವಾರಿಧಿ ಇಂಟರ್ ನ್ಯಾಷನಲ್ ಶಾಲೆಗೆ ಸಿಬಿಎಸ್‌ಸಿ ಸಿಲಬಸ್‌ನಲ್ಲಿ ಬೋಧಿಸಲು ಅವಕಾಶವಿತ್ತೇ ವಿನಃ ವಸತಿಶಾಲೆ ನಡೆಸಲು ಅನುಮತಿ ಇರಲಿಲ್ಲ ಎನ್ನುವ ಮಾಹಿತಿ ಪೊಲೀಸ್ ತನಿಖೆಯ ವೇಳೆ ಬೆಳಕಿಗೆ ಬಂದಿದೆಯಂತೆ. ಈ ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗೂ 848 ವಿಧ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಹಾಸ್ಟೆಲ್‌ನಲ್ಲಿ 29 ಮಕ್ಕಳು ದಾಖಲಾಗಿದ್ದಾರೆ. ಊಟದ ವಿಚಾರದಲ್ಲಿ ಮಕ್ಕಳಿಂದ ಸಾಕಷ್ಟು ದೂರುಗಳಿದ್ದವು ಎಂದು ಹೇಳಲಾಗುತ್ತಿದೆ. ಈ ವಿಚಾರವಾಗಿ ಅನುಮತಿಯಿಲ್ಲದೆ ಸರ್ಕಾರಕ್ಕೆ ವಂಚಿಸಿದ ಆಡಳಿತ ಮಂಡಳಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾದ ಅನಿವಾರ್ಯತೆ ಇದೆ. ಇಷ್ಟೆಲ್ಲಾ ಆದರೂ ಯಡಿಯೂರಪ್ಪನ ಪಕ್ಕಾ ಅನುಯಾಯಿಯಾಗಿರುವ ಕಿರಣ್ ಕುಮಾರ್ ಹೆಚ್ಚೇನೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ.

ಈ ದುರಂತದಲ್ಲಿ ಸಾವನ್ನಪ್ಪಿದ ಸೆಕ್ಯೂರಿಟಿ ಗಾರ್ಡ್ ಹೊಸಹಳ್ಳಿಯ ರಮೇಶ್(45)ನ ಕುಟುಂಬ ಈಗ ಅಕ್ಷರಶಃ ಬೀದಿಗೆ ಬಿದ್ದಿದೆ. ಈ ಮುನ್ನ ಹೆಂಚಿನ ಕಾರ್ಖಾನೆಯಲ್ಲಿ 20 ವರ್ಷಗಳಿಂದ ಕೂಲಿ ಕೆಲಸ ಮಾಡುತ್ತಿದ್ದ ರಮೇಶ್ ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ವಿದ್ಯಾವಾರಿಧಿ ಶಾಲೆಯ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಸೇರಿಕೊಂಡಿದ್ದ. ಘಟನೆ ನಡೆದ ರಾತ್ರಿ ಮಕ್ಕಳು ಅನ್ನಸಾಂಬಾರ್ ವಾಸನೆಯಾಗಿದೆ ಎಂದಾಗ, ಪರೀಕ್ಷಿಸಲು ಊಟದ ರುಚಿ ನೋಡಿ ವಿದ್ಯಾರ್ಥಿಗಳಿಗೆ ತಿನ್ನದಂತೆ ಸೂಚನೆ ನೀಡಿದ್ದ. ಆದರೆ ವಿಷಾಹಾರ ಸೇವಿಸಿದ ಕಾರಣ ರಮೇಶ್ ಕೂಡಾ ಪ್ರಾಣ ಕಳೆದುಕೊಳ್ಳುವಂತಾಗಿದೆ. ರಮೇಶ್‌ನ ತಾಯಿ, ಹೆಂಡತಿ, ಮಕ್ಕಳು ಅನಾಥರಾಗಿದ್ದಾರೆ. ಈ ಕುಟುಂಬವನ್ನು ಸಂತೈಸಲು ಬಂದ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂಥ್ ಸಹ ಅವರ ದುಸ್ಥಿತಿ ಕಂಡು ಕಣ್ಣೀರು ಹಾಕಿದ್ದು ಆ ಕುಟುಂಬದ ದಾರುಣತೆಯನ್ನು ಬಿಚ್ಚಿಡುತ್ತದೆ. ಅಳುತ್ತಿದ್ದ ಮಕ್ಕಳನ್ನು ಕಂಡು ಕರಗಿದ ಇಶಾ ಪಂಥ್ ತನ್ನ ಕಾರಿನಲ್ಲಿದ್ದ ಬಿಸ್ಕೆಟ್ ಕೊಟ್ಟು ಸಂತೈಸಿದರಾದರು ಆ ಬಿಸ್ಕೆಟ್ ಆ ಮಕ್ಕಳ ಹೊಟ್ಟೆಯನ್ನು ಅದೆಷ್ಟು ದಿನ ತಾನೆ ತುಂಬಿಸಬಲ್ಲದು? ಮನುಷ್ಯತ್ವ ಮಾತ್ರವೇ ಈಗ ಆ ಮಕ್ಕಳ ನೆರವಿಗೆ ಧಾವಿಸಬೇಕಿದೆ!

ತುಮಕೂರಿನಿಂದ ರಮೇಶ್ ಶವ ತೆಗೆದುಕೊಂಡು ಹೋದ ಊರಿನ ಜನ ಶಾಲೆಯ ಮುಂಭಾಗ ಶವವಿಟ್ಟು ಕಿರಣ್ ಕುಮಾರ್ ಸ್ಥಳಕ್ಕೆ ಬರಬೇಕೆಂದು ಪ್ರತಿಭಟನೆ ನಡೆಸಿದಾಗ ಶಾಲೆಯ ಸಿಬ್ಬಂದಿ ಮತ್ತು ಪೊಲೀಸರು ಸಮಾಧಾನ ಮಾಡಿ ಪರಿಹಾರ ಕೊಡಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ ಆ ಭರವಸೆ, ಭರವಸೆಯಾಗಿಯೇ ಉಳಿಯದಂತೆ ನೋಡಿಕೊಳ್ಳುವುದು ಪೊಲೀಸರ ಹೆಗಲ ಮೇಲಿದೆ.

ಈ ದುರಂತದಿಂದ ಪೋಷಕರು ಈಗಲಾದರೂ ಪಾಠ ಕಲಿಯಬೇಕಿದೆ. ಅಕ್ಷರ-ಮನೆಗಳನ್ನು ಕಾಸಿನ-ಅಂಗಡಿ ಮಾಡಿಕೊಂಡ ಬಂಡವಾಳಿಗರ, ರಾಜಕಾರಣಿಗಳ ಕೈಗಳಿಗೆ ನಮ್ಮ ಮಕ್ಕಳ ಪ್ರಾಣವನ್ನು ಒಪ್ಪಿಸುವುದೇ ಅವರ ಭವಿಷ್ಯ ರೂಪಿಸುವ ನಮ್ಮ ಜವಾಬ್ದಾರಿಯಲ್ಲ ಅನ್ನೋದನ್ನು ಪೋಷಕರು ಅರ್ಥಮಾಡಿಕೊಳ್ಳಬೇಕಾಗಿದೆ. ಇಲ್ಲದೇ ಹೋದಲ್ಲಿ ಇಂತಹ ಅನಾಹುತಗಳು ಪ್ರತಿ ಊರಲ್ಲೂ ಸರಣಿಗಟ್ಟಿ ನಿಲ್ಲುತ್ತವೆ!

■ ಅನಿಲ್‌ಕುಮಾರ್ ಚಿಕ್ಕದಾಳವಟ್ಟ

ಗಣಿಕಳ್ಳರಿಗೆ ಅಚ್ಛೇದಿನ್



'ಇದ್ದೋರು ಮೂವರು ಕದ್ದೋರು ಯಾರು?' ಎಂಬಂತಾಗಿದೆ ಬಳ್ಳಾರಿಯ ಗಣಿ ಲೂಟಿ. ದೋಚಿದ್ದು ಕನ್ನಡಿಗರ ಸೊತ್ತು, ಹೆಚ್ಚೂಕಮ್ಮಿ ಒಂದು ಲಕ್ಷ ಕೋಟಿಯಷ್ಟು ಮೊತ್ತದ ಕಬ್ಬಿಣದ ಅದಿರು. ಅರಣ್ಯ ಭೂಮಿಗೇ ಕನ್ನ ಹಾಕಿ, ರಾಜ್ಯ ರಾಜ್ಯಗಳ ನಡುವಿನ ಗಡಿರೇಖೆಯನ್ನೇ ಅಳಿಸಿಹಾಕಿ, ಆಂಧ್ರಾ ಮತ್ತು ಕರ್ನಾಟಕ ಸರ್ಕಾರಗಳೆರಡರ ಕಣ್ಣಿಗೆ ಮಣ್ಣೆರಚಿ ಗಣಿಕಳ್ಳರ ಹಿಂಡೊಂದು ದೋಚಿದ ಭೂಸಂಪತ್ತಿಗೆ ಶಿಕ್ಷೆಯೆಂಬುದೇ ಇಲ್ಲವಾದರೆ ಅದಕ್ಕೆ ಸರ್ಕಾರಗಳಿದ್ದೇನು ಪ್ರಯೋಜನ? ಈ ಪುರುಷಾರ್ಥಕ್ಕೆ ಕೋರ್ಟ್‌ಗಳೇಕೆ? ಕಾಯ್ದೆ, ಕಾನೂನು, ಅಧಿಕಾರಿಗಳು, ಪೊಲೀಸ್, ಸಿಬಿಐ ಎಲ್ಲವೂ ಬಳ್ಳಾರಿ ರಿಪಬ್ಲಿಕ್ಕಿನ ಮುಂದೆ ನಿವಾಳಿಸಿ ಎಸೆದಂತಾಯಿತೆ?

ಮೊನ್ನೆ ಅಂದರೆ 2017 ರ ಮಾರ್ಚ್ 13 ರ ಸೋಮವಾರದ ಹೈಕೋರ್ಟ್ ತೀರ್ಪು ಒಂದೇ ಏಟಿಗೆ ಎರಡು ರಾಜ್ಯಗಳ ಸರ್ಕಾರಗಳನ್ನೂ ಸಿಬಿಐನ ಪ್ರತಿಷ್ಠೆಯನ್ನೂ ಜೊತೆಗೆ ಕನ್ನಡಿಗರ ಸಾಕ್ಷಿಪ್ರಜ್ಞೆಯನ್ನೂ ಒಟ್ಟೊಟ್ಟಿಗೆ ನಿವಾಳಿಸಿ ಬಿಸಾಡಿದೆ. ಅದು ಕರಾಳ ತೀರ್ಪು. ಬಹುಶಃ ಕಾವೇರಿ ಅನ್ಯಾಯದ ನಂತರ ಇದು ಕರ್ನಾಟಕಕ್ಕಾಗುತ್ತಿರುವ ಅತೀ ದೊಡ್ಡ ಮುಖಭಂಗವೋ ಅನ್ಯಾಯವೋ ಅಥವಾ ಬಿದ್ದ ಬರೆಯೋ ಹೇಳುವವರ್‍ಯಾರು?

ಈ ಮೂಲಕ ಲೋಕಾಯುಕ್ತ ಸಂತೋಷ್ ಹೆಗ್ಡೆಯವರ ವರ್ಷಂಪೂರ್ತಿ ಪ್ರಯತ್ನ, ಯು.ವಿ. ಸಿಂಗ್ ಎಂಬ ಪ್ರಾಮಾಣಿಕ ಅಧಿಕಾರಿಯ ಅವಿರತ ಶ್ರಮ, ಲೋಕಾಯುಕ್ತದ ನೂರಾರು ಮಂದಿ ಅಧಿಕಾರಿಗಳು ಕಲೆ ಹಾಕಿದ ಸಾಕ್ಷ್ಯಾಧಾರಗಳ ಉದ್ದೇಶ ಮತ್ತು ಸಿಬಿಐ ನಡೆಸಿದ ಧೀರೋದ್ಧಾತ ತನಿಖೆಯ ಫಲ ಎಲ್ಲವೂ ನೀರುಪಾಲಾಗಿದೆ. ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಸ್.ಕೆ. ಮುಖರ್ಜಿ ಮತ್ತು ಆರ್.ಬಿ. ಬೂದಿಹಾಳರಿದ್ದ ವಿಭಾಗೀಯ ಪೀಠದ ಮಾರ್ಚ್ 13 ರ ತೀರ್ಪಿನ ಪ್ರಕಾರ ಗಣಿಕಳ್ಳರಿಂದ ಸರ್ಕಾರ ಜಪ್ತಿ ಮಾಡಿಕೊಂಡಿದ್ದ ಸ್ಥಿರ ಮತ್ತು ಚರಾಸ್ತಿಗಳೆಲ್ಲವನ್ನೂ ಮತ್ತದೇ ಗಣಿ ಕಳ್ಳರಿಗೆ ವಾಪಸ್ಸು ಮಾಡಬೇಕು. ಆ ಪ್ರಕಾರ **Enforcement Directorate** ಗಾಲಿ ಜನಾರ್ದನ ರೆಡ್ಡಿಯ ವಿರುದ್ಧ ಸಲ್ಲಿಸಿದ್ದ ದೋಷಾರೋಪಣಾ ಪಟ್ಟಿಯೇ ಅಕ್ರಮ!

ಜನ ಕಿಂಚಿತ್ತು ಯಾಮಾರಿದರೂ ಸರ್ಕಾರವೊಂದು ಸಣ್ಣಗೆ ಮೈಮರೆತರೂ ಏನೆಲ್ಲಾ ಅನಾಹುತಗಳಾಗುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆ ಮಾತ್ರ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗಲೇ ಜೈಲು ಪಾಲಾದವನು ಗಾಲಿ ಜನಾರ್ದನ ರೆಡ್ಡಿ. ಓಬಾಳಾಪುರಂ ಮೈನಿಂಗ್ ಕಂಪೆನಿಯೊಂದೇ ಐವತ್ತು ಸಾವಿರ ಕೋಟಿಗೂ ಅಧಿಕ ಮೊತ್ತದ ಅದಿರು ದೋಚಿದ ಆರೋಪವಿತ್ತು. ಬಳ್ಳಾರಿ ಗಡಿಯ ಅರಣ್ಯ ಭೂಮಿಗೇ ನುಗ್ಗಿ ಅದಿರು ದೋಚಿದ್ದು ಒಂದಾದರೆ ಆಂಧ್ರಕ್ಕೆ ಹೊಂದಿಕೊಂಡಿದ್ದ ಕರ್ನಾಟಕದ ಗಡಿರೇಖೆಯ ಗುರುತು ಕಲ್ಲುಗಳನ್ನೇ ಕಿತ್ತೆಸೆದು ನೆಲಬಗೆಯಲಾಗಿತ್ತು, ಪಕ್ಕದ ಆಂಧ್ರದ್ದೂ ಇದೇ ಗತಿ. ಅವರ ಗಡಿರೇಖೆಯನ್ನೂ ಅಳಿಸಿ ಹಾಕಲಾಗಿತ್ತು, ಆಗ ವಿರೋಧ ಪಕ್ಷದ ನಾಯಕನಾಗಿದ್ದ ಚಂದ್ರಬಾಬು ನಾಯ್ಡುವೇ ಈಗ ಆಂಧ್ರದ ಮುಖ್ಯಮಂತ್ರಿ. ಆಗ ಬಳ್ಳಾರಿಗೆ ಪಾದಯಾತ್ರೆ ಮಾಡಿ ಗಣಿಲೂಟಿಯ ವಿರುದ್ಧ ತೊಡೆತಟ್ಟಿದ್ದ ಸಿದ್ದರಾಮಯ್ಯನವರೇ ಈಗ ಕರ್ನಾಟಕದ ಮುಖ್ಯಮಂತ್ರಿ. ಪರಿಣಾಮ ಮಾತ್ರ ಗಣಿ ಡಕಾಯಿತ ರೆಡ್ಡಿಗೆ ಮುಕ್ತಿ ಬಾರಾಖೂನ್ ಮಾಫಿ.

ಬಳ್ಳಾರಿಯ ಕರ್ನಾಟಕ ಮತ್ತು ಆಂಧ್ರದ ಗಡಿಗಳ ನಡುಭಾಗದಲ್ಲಿ ನಡೆದ ಬರೋಬ್ಬರಿ ಒಂದು ಲಕ್ಷ ಕೋಟಿಗೂ ಅಧಿಕ ಮೊತ್ತದ ಅದಿರು ಲೂಟಿಗೆ ಸಂಬಂಧಪಟ್ಟಂತೆ ಸಿಬಿಐ ತನಿಖೆ ಶುರುವಾಗಿದ್ದು 2011 ರಲ್ಲಿ, ಆಂಧ್ರ ಮತ್ತು ಕರ್ನಾಟಕದ ಮಲಪನಗುಡಿ, ಓಬಳಾಪುರಂ, ಕುಮಟಿ ಇತ್ಯಾದಿ ಪ್ರದೇಶಗಳ ಅರಣ್ಯನಾಶ, ಅಕ್ರಮ ಗಣಿಗಾರಿಕೆ, ಗಡಿಗುರುತುಗಳ ನಾಶ, ಬೇಲಿಕೇರಿ ಬಂದರಿನಿಂದ ಅದಿರು ಕದ್ದು ಸಾಗಿಸಿದ್ದೂ ಸೇರಿದಂತೆ ಒಂದು ಡಜನ್ನಿಗೂ ಅಧಿಕ ಪ್ರಕರಣಗಳಲ್ಲಿ ಗಾಲಿ ಜನಾರ್ದನ ರೆಡ್ಡಿಯೇ ಮೊದಲ ಆರೋಪಿ. ರೆಡ್ಡಿಯ ಸಂಬಂಧಿ ಶ್ರೀನಿವಾಸ್ ರೆಡ್ಡಿ, ಆಂಧ್ರದ ಮಾಜಿ ಮುಖ್ಯಮಂತ್ರಿ ವೈಎಸ್‌ಆರ್ ಪುತ್ರ ಜಗನ್ ರೆಡ್ಡಿ, ಜನಾರ್ದನ ರೆಡ್ಡಿಯ ಪತ್ನಿ ಲಕ್ಷ್ಮಿ ಅರುಣಾ ಸೇರಿದಂತೆ ಇಪ್ಪತ್ತಕ್ಕೂ ಅಧಿಕ ರೆಡ್ಡಿ ಸಹಚರರು, ಅಧಿಕಾರಿಗಳು, ಸಾರಿಗೆ ಸಹಕರಿಸಿದವರು, ಶಿಪ್ಪಿಂಗ್ ಕಂಪೆನಿಗಳು ಎಲ್ಲರೂ ಪಾಪದ ಪಾಲುದಾರರೇ.

ಈ ಪ್ರಕಾರವೇ ರೆಡ್ಡಿ ವರ್ಷಾನುಗಟ್ಟಲೇ ಕಂಬಿ ಎಣಿಸಲೇಬೇಕಾಯಿತು. ಆತನ ಪಾಪದ ಸೊತ್ತೂ ಜಪ್ತಿಯಾಯಿತು. ಹೀಗೆ ರೆಡ್ಡಿಯ ಬಳ್ಳಾರಿಯ ಬಂಗಲೆ, ಹೆಲಿಪ್ಯಾಡ್, ಹೆಲಿಕಾಪ್ಟರುಗಳು, ಹತ್ತಕ್ಕೂ ಅಧಿಕ ಐಷಾರಾಮಿ ಕಾರುಗಳು, ಬೆಂಗಳೂರಿನ ಬೇರೆಬೇರೆ ಬಡಾವಣೆಗಳಲ್ಲಿ ಖರೀದಿಸಿದ್ದ ಹದಿನೈದಕ್ಕೂ ಅಧಿಕ ಸೊತ್ತುಗಳು, ದೇವನಹಳ್ಳಿ ಏರ್‌ಪೋರ್ಟ್ ರಸ್ತೆಯ ಎಕರೆಗಟ್ಟಲೇ ಜಮೀನು ಮತ್ತು



ಆಂಧ್ರದ ಅನಂತಪುರದಲ್ಲಿ ರೆಡ್ಡಿ ಆರಂಭಿಸಿದ್ದ ಬ್ರಹ್ಮಣಿ ಸ್ಟೀಲ್ಸ್ ಫ್ಯಾಕ್ಟರಿಯ ಸ್ಥಿರಾಸ್ತಿ ಹೈದರಾಬಾದ್‌ನ ಬಂಜಾರಾ ಹಿಲ್ಸ್ ಏರಿಯಾದ ಐಷಾರಾಮಿ ಬಂಗಲೆ ಎಲ್ಲವೂ ಸೇರಿ ಅದು 884 ಕೋಟಿ ರೂಪಾಯಿಗಳ ಮೊತ್ತ, ಈ ಪೈಕಿ ರೆಡ್ಡಿಯ ಚಿನ್ನದ ಸಿಂಹಾಸನವೂ ಸೇರಿತೆಂದರೆ ಹೆಚ್ಚೂಕಮ್ಮಿ 900 ಕೋಟಿ ರೂಪಾಯಿಗಳಾಗಿತ್ತು.

ಈ 900 ಕೋಟಿಯೇನಿದ್ದರೂ ಸರ್ಕಾರಕ್ಕೆ ಕಟ್ಟಬೇಕಿದ್ದ ತೆರಿಗೆ ಮತ್ತು ರಾಯಲ್ಟಿಯ ಮೊತ್ತವೇ ಹೊರತು ದೋಚಿದ ಅಷ್ಟೂ ಪ್ರಮಾಣದ ಅದಿರಿನ ಬಾಬತ್ತಾಗಿರಲಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿರುವ ತನಕ ರೆಡ್ಡಿಗೆ ಜಮೀನು ಸಿಗಲಿಲ್ಲ, ಸಾಲದ್ದಕ್ಕೆ ಹೈದರಾಬಾದಿನ ಹೈಕೋರ್ಟ್ ನ್ಯಾಯಮೂರ್ತಿಗೇ ಲಂಚ ಕೊಟ್ಟು ರೆಡ್‌ಹ್ಯಾಂಡ್ ಸಿಕ್ಕಿಬಿದ್ದದ್ದು ರೆಡ್ಡಿಯ ಘಾತಕ ಪ್ರವೃತ್ತಿಯನ್ನು ಮೇಲುನೋಟಕ್ಕೆ ಸಾಬೀತುಪಡಿಸಿತ್ತು. ಸಿಬಿಐ ಸಲ್ಲಿಸಿದ್ದ ಚಾರ್ಜ್‌ಶೀಟ್‌ನಲ್ಲಿ ಯಥೇಚ್ಛ ದಾಖಲೆಗಳಿದ್ದುದರಿಂದಲೇ ಕರ್ನಾಟಕ ಮತ್ತು ಆಂಧ್ರದ ಹೈಕೋರ್ಟುಗಳು ಪದೇಪದೇ ಆತನ ಜಾಮೀನು ಅರ್ಜಿಯನ್ನು ತಿರಸ್ಕರಿಸಿದವು.

ಆದರೆ ಮೋದಿ ಗೆದ್ದು ಪ್ರಧಾನಿಯಾಗಿ ಬಿಜೆಪಿ ದರ್ಬಾರ್ ಶುರುವಾಯಿತಲ್ಲ; ಸಿಬಿಐಗೆ ಕೇಸರಿ ಕೈಗೊಂಬೆ ನಿರ್ದೇಶಕನನ್ನು ತಂದ ಮೋದಿ ಜಾರಿ ನಿರ್ದೇಶನಾಲಯಕ್ಕೂ ತನ್ನ ಕೈಗೊಂಬೆಯೊಬ್ಬನನ್ನು ನೇಮಿಸಿಕೊಂಡರು. ರಾತ್ರೋರಾತ್ರಿ ಸಿಬಿಐ ವರಸೆಯೂ ಬದಲಾಯಿತು. ಗಣಿ ಲೂಟಿಗೆ ಸಂಬಂಧಪಟ್ಟಂತೆ ಸಿಬಿಐ ವಕೀಲರನ್ನು ಬದಲಾಯಿಸಲಾಯಿತು. ಇದೆಲ್ಲದರ ಪರಿಣಾಮವೇ ರೆಡ್ಡಿಗೆ ಜಾಮೀನು. ಆಜನ್ಮ ಪರ್ಯಂತ ಜೈಲಿಂದ ಹೊರಬರುವುದು ಸಾಧ್ಯವೇ ಇಲ್ಲ ಎಂಬಂತಿದ್ದ ಪರಿಸ್ಥಿತಿ ರಾತ್ರೋರಾತ್ರಿ ಉಲ್ಟಾ ಹೊಡೆದಿತ್ತು, ಜೈಲಿಂದ ಹೊರಬಿದ್ದ ರೆಡ್ಡಿ ಐನೂರು ಕೋಟಿಗೂ ಅಧಿಕ ಮೊತ್ತದ ರೊಕ್ಕ ಸುರಿದು ಯಾವ ರಾಜಮಹಾರಾಜರೂ ನಾಚುವಂತೆ ತನ್ನ ಮಗಳ ಮದು[illegible] ಮುಗಿಸಿದ್ದ. ಇದರ ವಿರುದ್ಧ ಇಡಿ ಮತ್ತೊಂದು ಪ್ರಕ[illegible] ದಾಖಲಿಸಿ ಮದುವೆಗೆಂದು ಖರ್ಚಾದ ಐನೂ[illegible] ಕೋಟಿಯೂ ಗಣಿಲೂಟಿಯ ದುಡ್ಡೇ ಎಂದು ವಾದಿಸಿ[illegible]

ಆದರೆ ಈಗಾಗಲೇ ಸಿಬಿಐ ತನ್ನ ತನಿಖೆ ಮುಗಿಸಿ[illegible] ಪ್ರಕಾರವೇ ಇಡಿ 884 ಕೋಟಿ ರೂಪಾಯಿಗಳ ಮೊ[illegible] ರೆಡ್ಡಿಯ ಸೊತ್ತುಗಳನ್ನು ಜಪ್ತಿ ಮಾಡಿಕೊಂಡಿತ್ತಲ್ಲ. ಒ[illegible] ತನಿಖೆ ಮುಗಿದು ಅಕ್ರಮದ ಮೊತ್ತ ನಿಗದಿಗೊಂಡು ಸೊ[illegible] ಜಪ್ತಿ ಮಾಡಿಕೊಂಡ ಆಮೇಲೆ ಮತ್ತೆ ಅದೇ ಪ್ರಕರಣದ[illegible] ಮತ್ತಷ್ಟು ಮುಟ್ಟುಗೋಲು ಕ್ರಮ ಎಂದರೆ ಏನರ್ಥ[illegible] ಇದು ಅತಾರ್ಕಿಕ ಎಂದು ಹೈಕೋರ್ಟ್ ಇಡಿಯ[illegible] ಮೇಲ್ಮನವಿಯನ್ನು ರದ್ದು ಪಡಿಸಿತು. ಇದಾಗಿದ್ದು ತಿಂ[illegible] ಹಿಂದೆ. ಅಲ್ಲಿಗೆ ಪರಿಸ್ಥಿತಿ ರೆಡ್ಡಿಗಳ ಪಕ್ಷ ಬದಲಾಯಿಸಿ[illegible] ಸ್ಪಷ್ಟವಾಗಿತ್ತು.

ಇದೇ ಹೊತ್ತಿಗೆ ರೆಡ್ಡಿ ಗ್ಯಾಂಗ್ ಹೈಕೋ[illegible] ವಿಭಾಗೀಯ ಪೀಠದ ಮುಂದೆ ನಿಗೂಢ ಮತ್ತು ವಿ[illegible] ಅರ್ಜಿಯೊಂದನ್ನು ಮಂಡಿಸಿತ್ತು. ಅದು 2009 [illegible] ಹಣಕಾಸು ಲೇವಾದೇವಿ ಕಾಯ್ದೆಯ ತಿದ್ದುಪಡಿಯಿಂದಾ[illegible] ವ್ಯತ್ಯಾಸದ ಕುರಿತ ಅರ್ಜಿ. ರೆಡ್ಡಿಯ ಕೋರಿಕೆಯೆಂ[illegible] ಇಡಿ ದಾಖಲಿಸಿದ ದೋಷಾರೋಪದ ಪ[illegible] ಆಧರಿಸಿರುವುದು 2009 ರ ತಿದ್ದುಪಡಿ ಕಾಯ್ದೆಯ ಪ್ರಕಾ[illegible] ಆದರೆ ಗಣಿ ಲೂಟಿ ನಡೆದಿರುವುದು 2007 ಕ್ಕೂ ಮು[illegible] ತಿದ್ದುಪಡಿಗೂ ಮೊದಲು ನಡೆದ ಅಪರಾಧ[illegible] ತಿದ್ದುಪಡಿಯಾದ ಕಾಯ್ದೆಯನ್ನು ಪೂರ್ವಾನ್ವಯ ಮಾಡುವು[illegible] ಕಾನೂನುಬಾಹಿರ ಎಂಬುದು ರೆಡ್ಡಿ ವಕೀಲರ ವಾದವಾಗಿ[illegible] 2002 ರ ಮನಿ ಲಾಂಡರಿಂಗ್ ಆಕ್ಟ್‌ನ ಕಲಂ [illegible] ಪ್ರಕಾರ ಆಸ್ತಿ ಮುಟ್ಟುಗೋಲು ಹಾಕಿಕೊಂಡು ಅ[illegible] 2009 ರ ತಿದ್ದುಪಡಿ ಕಾಯ್ದೆ ಅಳವಡಿಸಿದ್ದೇ ಅಕ್ರ[illegible] ಎಂದು ರೆಡ್ಡಿ ವಕೀಲರು ವಾದಿಸಿದ್ದರು.

ಕಾಯ್ದೆ ಯಾವುದಾದರೇನಂತೆ ಅಪರಾಧ ಅಪರಾಧ[illegible] ಅಲ್ಲವೇ? ಹಾಗೊಮ್ಮೆ ಇಡಿ ದಾಖಲಿಸಿದ್ದ ಚಾರ್ಜ್‌ಶೀ[illegible] ನಲ್ಲಿ ಕಾಯ್ದೆಯ ಕುರಿತಂತೆ ಸೂಕ್ಷ್ಮ ಗೊಂದಲವಿದ್ದ[illegible] ಅದನ್ನು ಸರಿಪಡಿಸಿ ಹೆಚ್ಚುವರಿ ಅಥವಾ ಹೊಸ ಚಾಜ[illegible] ಶೀಟ್ ದಾಖಲಿಸುವಂತೆ ಕೋರ್ಟು ಜಾರಿ ನಿರ್ದೇಶನಾ[illegible] ಯಕ್ಕೆ ಸೂಚಿಸುವುದು ನ್ಯಾಯಸಮ್ಮತವಾಗಿತ್ತು, ಏಕೆಂ[illegible] ಅಪರಾಧ ನಡೆದದ್ದು ಸ್ಪಷ್ಟ, ಅಪರಾಧಿಗಳ ಗಳಿಕೆ ಜಪ್ತಿಯ[illegible] ರುವುದೂ ಸ್ಪಷ್ಟ. ಸಮಸ್ಯೆಯಿದ್ದದ್ದು ಕಾಯ್ದೆಯ ಅಳವಡಿಕೆ[illegible] ಪ್ರಶ್ನೆಯಲ್ಲಷ್ಟೇ. ಹಾಗಂತ ಪ್ರಕರಣವನ್ನೇ ಕೈಬಿಡುವು[illegible] ಅಥವಾ ವಜಾಗೊಳಿಸುವುದು ಸಹಜವಾಗೇ ಅಪರಾಧಿಗಳಿ[illegible] ಅನುಕೂಲ ಕಲ್ಪಿಸಿಕೊಟ್ಟಂತೆ ಮತ್ತು ಇಡೀ ಸಮಾಜ[illegible] ಸೊತ್ತನ್ನೇ ಲೂಟಿಗೈದ ದೈತ್ಯ ಪಾತಕವೊಂದನ್ನು ಪುರಸ್ಕರಿಸಿ[illegible] ಹಾಗೆಯೇ.

ವಿಭಾಗೀಯ ಪೀಠದ ಮುಂದೆ ಕೇಂದ್ರ ಸರ[illegible] ಮತ್ತು ಸಿಬಿಐ ಪರ ಹಾಜರಿದ್ದ ಸಾಲಿಸಿಟರ್ ಜನರ[illegible] ಕೃಷ್ಣ ದೀಕ್ಷಿತ್ ಇದನ್ನೇ ವಾದಿಸಿದ್ದರು. ಅಕ್ರಮ ನಡೆಸಿ[illegible] ನಂತರವೂ ಅದರಿಂದ ಗಳಿಸಿದ್ದ ದುಡ್ಡನ್ನು ಅಪರಾಧಿಗ[illegible] ಬ್ರಾಹ್ಮಣಿ ಸ್ಟೀಲ್ಸ್‌ನ ಷೇರುಗಳನ್ನು ಖರೀದಿಸಿರುವು[illegible] ಅಪರಾಧದ ಸ್ಪಷ್ಟ ಮುಂದುವರಿಕೆಯಷ್ಟೇ ಎಂದು ಎ[illegible] ವಾದ ಮಂಡಿಸಿದರೂ ಆದು ಪೀಠದ ಕಿವಿಗೆ ಮುಟ್ಟಲಿ[illegible] ಆಘಾತಕಾರಿ ಆಂಧ್ರ ಮತ್ತು ಕರ್ನಾಟಕ ಸರ್ಕಾರಗಳೆರ[illegible] ಪಾಲಿಗೂ ಕರಾಳವಾದ ತೀರ್ಪು ಹೊರಬಿದ್ದಿತ[illegible] ಕಳ್ಳನಿಗೊಂದು ಪಿಳ್ಳೆನೆವ ಎಂಬುದನ್ನು ಮಾರ್ಚ್ 13[illegible] ತೀರ್ಪು ಮತ್ತೆ ಮತ್ತೆ ಸಾಬೀತುಪಡಿಸಿತ್ತು.

ಬಿಜೆಪಿ ಕೇಂದ್ರಕ್ಕಡರಿದ್ದರ ಪರಿಣಾಮವೋ ಮೋದಿ[illegible] ಅಚ್ಛೇ ದಿನ್ ಎಂಬುದು ಈಗ ಗಣಿ ರೆಡ್ಡಿಗಳ ಪಾಲಿಗ[illegible] ಶುರುವಾಗಿದೆಯೋ ಇದೆಲ್ಲದರ ಪ್ರತಿಫಲ ತೀರ್ಪಿನ ರೂ[illegible] ತಾಳಿದೆಯೋ ಬಲ್ಲವರ್‍ಯಾರು?

■ ರಾ.ಸೋಮನಾಥ



ಪೇಜಾವರ ಸನ್ನಿಧಿಯಲ್ಲಿ ರೆಡ್ಡಿಯೂ, ನ್ಯಾಯಮೂರ್ತಿಯೂ




ಮಾರ್ಚ್ 13 ರ ಅನಿರೀಕ್ಷಿತ ತೀರ್ಪಿಗೆ ಸಂಬಂಧಪಟ್ಟಂತೆ ಸಮಸ್ತ ಹೈಕೋರ್ಟ್ ವಕೀಲ ಸಮೂಹವಷ್ಟೇ ಅಲ್ಲ, ಕರ್ನಾಟಕದ ಪ್ರಜ್ಞಾವಂತ ವಲಯವೂ ಅಚ್ಚರಿಗೆ ಬಿದ್ದಿದೆ. ಫೇಸ್‌ಬುಕ್ ಮತ್ತು ವಾಟ್ಸಪ್‌ಗಳಲ್ಲಿ ವ್ಯಕ್ತವಾಗುತ್ತಿರುವ ಟೀಕೆ, ಆಕ್ರೋಶಗಳೇ ಸಾಕು. ತೀರ್ಪಿನ ಹಿಂದಿರುವ ನಿಗೂಢ ವಕೀಲರ ವಲಯದಲ್ಲಿ ಕೇಳಿಬರುತ್ತಿರುವ ಒಂದು ವದಂತಿಯೆಂದರೆ ಇಲ್ಲಿಗೆ ತಿಂಗಳ ಹಿಂದೆ ಗಾಲಿ ಜನಾರ್ದನ ರೆಡ್ಡಿ ಉಡುಪಿಗೆ ಹೋಗಿ ಪೇಜಾವರ ಮಠಾಧೀಶ ವಿಶ್ವೇಶ ತೀರ್ಥರ ಪಾದಕ್ಕೆರಗಿದ್ದು!

ಏಕೆಂದರೆ ತೀರ್ಪಿಗೆ ಕಾರಣವಾದ ನ್ಯಾಯಮೂರ್ತಿಗಳ ಪೈಕಿ ಬಂಗಾಳಿ ಮೂಲದ ನ್ಯಾಯಮೂರ್ತಿಯೊಬ್ಬರು ಇದಕ್ಕೂ ಮೊದಲೇ ಉಡುಪಿಯ ಕೃಷ್ಣ ಮಠಕ್ಕೆ ಭೇಟಿಯಿತ್ತಿದ್ದರು ಮತ್ತು ಪೇಜಾವರರ ಪಾದ ಮುಟ್ಟಿ ಬಂದಿದ್ದರು!

ಇದು ದೇಶದ ನ್ಯಾಯಾಂಗ ವ್ಯವಸ್ಥೆ ಹೇಗೆ ಮೋದಿಯ ಕಪಿಮುಷ್ಠಿಗೆ ಸಿಲುಕಿದೆಯೆಂಬುದರ ತೃಣಸದೃಶ ಪುರಾವೆಯಷ್ಟೇ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ಸರ್ಕಾರಕ್ಕೆ ಉಲ್ಟಾ ಹೊಡೆದಿದ್ದ ಹನ್ನೊಂದು ಮಂದಿ ಶಾಸಕರ ಆಯ್ಕೆಯನ್ನು ಅನೂರ್ಜಿತಗೊಳಿಸಿ ಆದೇಶ ಹೊರಡಿಸಿದ್ದ ಪ್ರಮುಖ ನ್ಯಾಯಮೂರ್ತಿಯೊಬ್ಬರಿಗೆ ಸುಪ್ರೀಂಕೋರ್ಟ್ ಯೋಗ ಕೂಡಿ ಬಂದದ್ದೂ ಇದಕ್ಕೆ ಸಮರ್ಥನೆಯಂತಿತ್ತು, ಮೋದಿ ಪ್ರಭುತ್ವದ ಮೂಗಿನ ನೇರಕ್ಕೆ ತಕ್ಕಂತೆ ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ದಾಖಲಿಸಿದ್ದ ಒಂದೊಂದೇ ಕೇಸುಗಳನ್ನು ಹೈಕೋರ್ಟ್ ವಜಾಗೊಳಿಸುತ್ತಾ ಬಂತು. ಬೆನ್ನಲ್ಲೇ ಸದಾನಂದಗೌಡರ ವಿರುದ್ಧ ಪತ್ರಕರ್ತೆ ನಾಗಲಕ್ಷ್ಮಿ ಬಾಯಿ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ಕೈಬಿಟ್ಟಿತು. ಇದೆಲ್ಲದರ ಪರಮಾವಧಿಯಂತೆ ಜೈಲು ಕಂಡಿದ್ದ ಮತ್ತೊಬ್ಬ ಬಿಜೆಪಿ ನಾಯಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ವಿರುದ್ಧದ ಗುರುತರ ಪ್ರಕರಣವನ್ನೂ ಹೈಕೋರ್ಟ್ ಗತಿ ಕಾಣಿಸಿತ್ತು. ಸಿದ್ದು ಸರ್ಕಾರ ಅನಿವಾರ್ಯವಾಗಿ ಈ ಎಲ್ಲಾ ಪ್ರಕರಣಗಳ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಕ್ಕಲೇಬೇಕಾದ ಇಕ್ಕಟ್ಟಿಗೆ ಸಿಲುಕಿತು. ಈಗ ಸತ್ಯ ನ್ಯಾಯಗಳ ನೆತ್ತಿಯ ಮೇಲೇ ಮೊಟಕಿದಂತೆ ಗಣಿಕಳ್ಳರ ಪಾಪಕೃತ್ಯ ಕೋರ್ಟು ಕುರುಡುತನ ಪ್ರದರ್ಶಿಸಿದೆ. ಮೋದಿಯ ಅಚ್ಛೇ ದಿನ್ ಬಿಜೆಪಿಯ ಗಣಿಕಳ್ಳರು, ಲೂಟಿಕೋರರು, ಭ್ರಷ್ಟರು, ದುಷ್ಟರ ಮಟ್ಟಿಗಂತೂ ಎಗ್ಗಿಲ್ಲದೇ ನುಗ್ಗಿಬರುತ್ತಿದೆ. ಆದರೆ ದೇವೇಗೌಡರ ಮತ್ತು ಬಾಲಕೃಷ್ಣ ಗೌಡರ ವಿರುದ್ಧ ಲೋಕಾ ಕೋರ್ಟು ಸುಳ್ಳು ಕೇಸೊಂದನ್ನು ವಜಾಗೊಳಿಸಿದರೂ ಹೈಕೋರ್ಟ್ ಅದಕ್ಕೆ ತಡೆ ನೀಡುತ್ತದೆ!

ನ್ಯಾಯಾಂಗದ ಕೇಸರಿಕರಣವೆಂದರೆ ಇದೇನಾ?



ಯಡ್ಡಿಗ್ಯಾರು ಹಿತವರು?

ಯಲ್ಲಾಪುರದಲ್ಲಿ ಅನಂತ್ಮಾಣಿ V/s ಪಾಟೀಲ್ ಫೈಟಿಂಗ್?





...ದ್ಯಾಕೋ ಬಿಜೆಪಿಯಲ್ಲಿ 'ಕೊಬ್ಬನಂತ' ಒಂದೇ ...ನೆ ಏರುತ್ತಲೇ ಇದೆ! ಆ ಕೇಸರಿ ಪಕ್ಷ ಅದರದೇ ...ಕ್ಕೆ ಕುಸಿದುಬಿದ್ದು ಹೃದಯಾಘಾತಕ್ಕೆ ತುತ್ತಾಗುವ ...ತೆಯ ಡೇಂಜರ್ ಸಂಕೇತ ಉತ್ತರ ಪ್ರದೇಶದ ...ಾವಣಾ ಫಲಿತಾಂಶ ಬಿತ್ತರಿಸಿದೆ. ಆದರೂ ...ನ್ಯಾವುದೋ ಪಾರ್ಟಿಯ ದಂಡ-ಪಿಂಡ ಗುಂಡುಕಲ್ಲುಗಳು ... ತೆಪ್ಪ ತುಂಬಿಕೊಳ್ಳುವುದು ಮಾತ್ರ ನಿಂತಿಲ್ಲ. ರಾಜ್ಯದಲ್ಲಿ ... ಗ್ಯಾಂಗು ನಡೆಸಿರುವ ಪಕ್ಷಾಂತರದ ಗ್ರಾಫಿನ ದರಕ್ಕೆ ...ಲಿಸಿದರೆ ಉತ್ತರ ಕನ್ನಡ ಬಿಜೆಪಿಯತ್ತದ ವಲಸೆ ...ಾಣ ತೀರಾ ಸಣ್ಣದು. ಯಡ್ಡಿ ಬಂಟನೂ ಪುಂಡ ...ಮಿಯೂ ಆಗಿರುವ ಸಂಸದ ಅನಂತ್ಮಾಣಿ ಜಿಲ್ಲೆಯಲ್ಲಿ ...ಡೆಯುತ್ತಿರುವ ಗಿರಗಿಟ್ಲೆಗೆ ಸುಂಕವೂ ಗಿಟ್ಟುತ್ತಿಲ್ಲ....

...ಆಜನ್ಮ ವೈರಿ ಕೇಂದ್ರ ಮಂತ್ರಿ ಅನಂತಕುಮಾರ್ ...ಬಣದ ಭೂಪ ಕಾಗೇರಿ ಮಾಣಿಯನ್ನು ಹಣಿಯುವ ... ಉದ್ದೇಶದಿಂದ ಆತನ ಎದುರಾಳಿ ಅನಂತ್ಮಾಣಿಯನ್ನು ...ಕಟ್ಟಿದ್ದಾರೆ ಯಡ್ಡೀಜಿ. ಐದು ಬಾರಿ ಸಂಸದನಾದರೂ ...ಅವಗುಣಗಳ ಮಹಿಮೆಯಿಂದಾಗಿ ಕೇಂದ್ರದಲ್ಲಿ ಒಂದು ...ದೆ ಸ್ಥಾನ-ಮಾನ ಪಡೆಯಲಾಗದ ಗುದುಮುರಿಗೆ ...ಲಿಸ್ಟ್ ಅನಂತ್ಮಾಣಿಗೆ ರಾಜ್ಯದಲ್ಲಿ ಮಂತ್ರಿ ಮಾಡುವ ...ಹುಟ್ಟಿಸಿ ಆತನನ್ನು ಉತ್ತರ ಕನ್ನಡ ಬಯಲಿಗೆ ಯಡ್ಡಿ ...ದ್ದಾರೆ. ಈ ಅಧಿಕಪ್ರಸಂಗಿ ಅನಂತ್ಮಾಣಿಯೋ ತಾನು ...ತ್ರಿ ಆಗಿಯೇ ಬಿಟ್ಟೆನೆಂಬ ಧರತಿಯಲ್ಲಿ ತುಂಡುಗುಪ್ಪಳ ...ಡೆಯುತ್ತಿದ್ದಾನೆ. "ನಂಗೆ ಬೆನ್ನು ನೋವು.... ಓಡಾಡಲು ...... ಎಂಗೆ ತ್ರಾಸ್ ಕೊಡಲಿ..." ಎನ್ನುತ್ತ ಜನರಿಂದ ...ತಪ್ಪಿಸಿಕೊಂಡು ಕಾಲ ಹಾಕುತ್ತಿದ್ದ ಅನಂತ್ಮಾಣಿ ಈಗ ... ತೋರಿಸುತ್ತಿರುವ ಗೂಟದ ಕಾರಿನ ಲಾಲಸೆಗೆ ... ಜಿಲ್ಲೆಯಾದ್ಯಂತ 'ದಂಡ'ಯಾತ್ರೆ ಕೈಗೊಳ್ಳುತ್ತಿದ್ದಾನೆ. ...ಪೆಯೆಂದರೆ, ಅಮಾವಾಸ್ಯೆ-ಹುಣ್ಣಿಮೆಗೆ ಅಮಾಯಕ ...ಮೇಲೆರಗಿ ರಕ್ತ ಹರಿಸುವ ರೋಗ ಮಾತ್ರ ಈ ...' ಮಂತ್ರಿಗೆ ವಾಸಿಯಾಗಿಲ್ಲ!!

...ಸ್ವಂತ ಕೇಸರಿ ಸಿದ್ಧಾಂತದ ಮೇಲೆ ಹಿಂದೂ ರಾಷ್ಟ್ರ ...ನ, ಬಿಜೆಪಿ ಬಲಗೊಳಿಸುವ ಭೋಂಗು ಬಿಡುತ್ತ ...ರುವ ಅನಂತ್ಮಾಣಿ ಈಗ ಯಾವ್ಯಾವುದೋ ಪಕ್ಷದಲ್ಲಿ ... ಕೊಳೆತು ಗಬ್ಬು ನಾರುತ್ತಿರುವ, ಲಡ್ಡಾಗಿ ಜಂಗು ...ರವರ ಎಳೆದು ತಂದು ಬಿಜೆಪಿ ಬುಟ್ಟಿ ತುಂಬುತ್ತಿದ್ದಾನೆ. ... ಖೋಟಾ ಹಿಂದೂತ್ವ, ಅಧಿಕಾರದ ಹಪಾಹಪಿ ... ಒರಿಜನಲ್ ಚೆಡ್ಡಿಗಳೇ ಕ್ಯಾಕರಿಸಿ ಉಗಿಯುತ್ತಿದ್ದಾರೆ. ... ಮಾಣಿ ಎರಡು 'ಇಲಿ' ಬೇಟೆ ಮುಗಿಸಿ 'ಹುಲಿ' ...ರಂತೆ ಬೀಗುತ್ತಿದ್ದಾನೆ. ಕುಮಟೆಯ ಜೆಡಿಎಸ್‌ನ ಮಾಜಿ ... ದಿನಕರ ಶೆಟ್ಟಿ ಮತ್ತು ಭಟ್ಕಳದ ವೇಸ್ಟ್‌ಬಾಡಿ ...ಸಿಗ ಜಟ್ಟಪ್ಪ ನಾಯ್ಕನನ್ನು ಬಿಜೆಪಿಗೆ ಎಳೆದಿರುವ ...ತ್ಮಾಣಿ ಅವರಿಬ್ಬರಿಗೆ ಎಮ್ಮೆಲ್ಲೆಗಿರಿಗೆ ಕೇಸರಿ ಟಿಕೆಟ್ ...ಸುವ ಭರವಸೆ ಕೊಟ್ಟಿದ್ದಾನಂತೆ. ಆದರೆ ಆತ ಈ ...ರನ್ನು ಬಿಜೆಪಿಗೆ ಕರೆ ತಂದಿರುವುದು ತಾನು ...ನಾಗುವ ಆಟಕ್ಕೆ ಬಳಸಿಕೊಳ್ಳಲಿಕ್ಕಷ್ಟೇ!

...ಈ ಅವಾಂತರಕಾರಿ ಅನಂತ್ಮಾಣಿ ಬೇರೆಯವರಿಗೆ ... ಅಭ್ಯರ್ಥಿ ಮಾಡುವುದು ಒತ್ತಟ್ಟಿಗಿರಲಿ, ತಾನೇ ...್ ತಂದುಕೊಳ್ಳಲು ತಿಣುಕಾಡಬೇಕಾಗಿ ಬಂದಿದೆ! ... ಬಿಜೆಪಿಯಲ್ಲಿ ಅನಂತಕುಮಾರ್ ಶಾಸ್ತ್ರಿ ಎಂಬ ... ಬ್ರಾಹ್ಮಣ ಬಲಾಢ್ಯನಾಗಿರುವ ತನಕ ತನಗೇನೂ ...ಂಬುದು ಖಾತ್ರಿಯಾಗಿರುವ ಅನಂತ್ಮಾಣಿ ರಾಜ್ಯ ...ಾರಣದತ್ತ ಹಪಾಹಪಿ ನೋಟ ತೇಲಿಸುತ್ತಿದ್ದಾನೆ. ...ಂಟಾಗಿ ಶಾಸಕನಾಗಲು ಆತನಿಗೊಂದು ಕ್ಷೇತ್ರ ...ಗಿದೆ. ತವರು ಕ್ಷೇತ್ರ ಶಿರಸಿಯಿಂದ ಎಬಿವಿಪಿ ಕ್ಯಾಡರಿನ ...ರಿಯನ್ನು ಕದಲಿಸುವುದು ಕಷ್ಟವೆಂದರಿತಿರುವ ಮಾಣಿ ... ಕರಾವಳಿಯ ಕುಮಟಾ ಮತ್ತು ಭಟ್ಕಳ, ಘಟ್ಟದ ...ನ ಯಲ್ಲಾಪುರದ ಮೇಲೆ ಬಿದ್ದಿದೆ. ಯಾವುದು ...ಈ ಮೂರರೊಳಗೆ ಎಂಬುದನ್ನು ಮಾಣಿ ಅಳೆದು-... ಲೆಕ್ಕ ಹಾಕುತ್ತಿದ್ದಾನೆ.

...ಂದೂ ಜಾಗರಣಾ ವೇದಿಕೆಯ ಪುಂಡ ...್‌ನಂತಿದ್ದ ಗಲಭೆಕೋರ ಅನಂತ್ಮಾಣಿಗೆ ರಾಜಕೀಯ ... ನೆಗೆಯಲು ಚಿಮ್ಮು ಹಲಿಗೆಯಾಗಿದ್ದು ಕೋಮು ... ಭಟ್ಕಳ! 1990ರ ದಶಕದಲ್ಲಿ ಸತತ ಒಂದು ... ಭಟ್ಕಳ ಹೊತ್ತಿ ಉರಿದಾಗ ಮಾಣಿ ಕೊಟ್ಟ ಕೊಡುಗೆ ...ಸದ ಪುಟದಲ್ಲಿ ದಾಖಲಾಗಿ ಹೋಗಿದೆ. ಆದರೆ ... ಎಂಪಿಯಾದ ಬಳಿಕ ಭಟ್ಕಳದ ಮಂದಿಗೆ ಭ್ರಮನಿರಸನವಾಗಿತ್ತು. ಆತನ ಢೋಂಗಿ ಹಿಂದೂತ್ವ ಹಿಕಮತ್ತು ಅರ್ಥವಾಗಿತ್ತು. ಹೀಗಾಗಿ ಆತ ಎಂಪಿಗಿರಿಗೆ ಸ್ಪರ್ಧಿಸಿದಾಗ ಭಟ್ಕಳದಲ್ಲೇ ಹಿನ್ನಡೆ ಅನುಭವಿಸಿದ್ದೂ ಇದೆ. ಅಲ್ಲೀಗ ದೀವರು ಮತ್ತು ದೀವರೇತರರ ಧ್ರುವೀಕೃತ ರಾಜಕೀಯ ಜಿದ್ದಾಜಿದ್ದಿ ನಡೆದಿದೆ. ಬಿಜೆಪಿ ಎಂಬುದು ದೀವರ ಪಕ್ಷ ಎಂಬಂತಾಗಿ ಇತರರು ದೂರ ಸರಿಯುವಂತಾಗಿದೆ. ಇದು ತನಗೆ ಗಂಡಾಂತರಕಾರಿ ಎಂದರಿತ ಅನಂತ್ಮಾಣಿ ಸಾವಕಾಶವಾಗಿ ಕುಮಟೆಯತ್ತ ಕಾಲು ಬೆಳೆಸಿದ್ದಾನೆ. ಅಕಸ್ಮಾತ್ ಟಿಕೆಟ್ ಲಾಟರಿಯಲ್ಲಿ ಭಟ್ಕಳವೇ ಅನಿವಾರ್ಯವಾದರೆ, ಬೆನ್ನಿಗೆ ಇರಲೆಂದು ಕೆಲಸಕ್ಕೆ ಬಾರದ ಕಾಂಗ್ರೆಸ್‌ನಲ್ಲಿ ಮೂಲೆ ಗುಂಪಾಗಿದ್ದ ಜಟ್ಟಪ್ಪ ನಾಯ್ಕನಂಥವರನ್ನು ಪಾರ್ಟಿಗೆ ಸೇರಿಸಿಕೊಳ್ಳುತ್ತಿದ್ದಾನೆ.

ಇಂಥದೇ ದೂ(ದು)ರಾಲೋಚನೆಯಲ್ಲಿ ಕುಮಟಾದ ಮಾಜಿ ಎಮ್ಮೆಲ್ಲೆ ದಿನಕರ ಶೆಟ್ಟಿಯ ಬಿಜೆಪಿ ಸೇರುವಿಕೆಗೆ ಯಾವ ಅಡ್ಡಿ-ಆತಂಕವನ್ನೂ ಮಾಣಿ ಒಡ್ಡಲಿಲ್ಲ! ಕುಮಟೆ ಭಟ್ಕಳಕ್ಕಿಂತಲೂ ಅನುಕೂಲಕರ ಎಂಬುದು ಮಾಣಿ ಯೋಚನೆ. ಇಲ್ಲಿ ಸ್ವ-ಜಾತಿ ಹೈಗರು ಹೆಚ್ಚಿದ್ದಾರೆ; ದೀವರಿಗಿಂತ ಬುಡಕಟ್ಟು ಜನಾಂಗದ ಹಾಲಕ್ಕಿ ಒಕ್ಕಲಿಗರು ಜಾಸ್ತಿಯಿದ್ದಾರೆ. ಇತರ ಸಣ್ಣ-ಪುಟ್ಟ ಜಾತಿ-ಜನಾಂಗದವರೂ ಇನ್ನೂ ದೊಡ್ಡ ಪ್ರಮಾಣದಲ್ಲಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆಯೇ ಡಜನ್ ದಾಟುತ್ತಿದೆ.

ಈ ಎಮ್ಮೆಲ್ಲೆ ದುರಾಸಿಗರ ಕಿತ್ತಾಟದಲ್ಲಿ ತಾನು ರಾಜಿ ಅಭ್ಯರ್ಥಿಯಾಗಿ ಕಣಕ್ಕಿಳಿವ ಕಸರತ್ತು ಲೀಲಾಜಾಲವಾಗಿ ನಡೆಸಬಹುದೆಂಬುದು ಅನಂತಣ್ಣನ ಅಂದಾಜು. ದಿನಕರ ಶೆಟ್ಟಿಗೆ ಹೆಡೆಮುರಿ ಕಟ್ಟಿ ಕೂಡ್ರಿಸುವ ಸ್ಕೆಚ್ ಆತ ಬಿಜೆಪಿ ಪಾಲಾಗುವ ಹಂತದಲ್ಲೇ ರೆಡಿಯಾಗಿದೆ. ಸೂರಜ್ ಸೋನಿಯನ್ನು ಕಂಡರಾಗದ ಕೊಂಕಣಿ ಚೆಡ್ಡಿಗರು ಶೆಟ್ಟಿಯನ್ನು ಆದರದಲ್ಲಿ ಸ್ವಾಗತಿಸಿದ್ದಾರಾದರೂ ಒರಿಜಿನಲ್ ಚೆಡ್ಡಿಗರ ಫೇವರಿಟ್ ಜಿಪಂ ಸದಸ್ಯೆ ಗಾಯತ್ರಿ ಗೌಡ ಎಂಬ ಗ್ಲಾಮರ್ ಪುಢಾರಿಣಿ. ಹಾಗೊಮ್ಮೆ ಅನಂತ್ಮಾಣಿಗೆ ಕುಮಟೆಯ ಟಿಕೆಟ್ ಕೊಡಲಾಗದ ಸಂದಿಗ್ಧ ಬಂದರೆ ಆಗ ಯಡ್ಡಿ ಮಹಾತ್ಮ ಕೆಜೆಪಿ ಪೂರ್ವಾಶ್ರಮದ ಗಾಯತ್ರಿ ಗೌಡರಿಗೆ ಚಾನ್ಸ್ ಕೊಡುತ್ತಾರೆ. ಆಕೆ ಗೆಲ್ಲುವ ಕುದುರೆಯೂ ಹೌದು. ಹಾಲಿ ಶಾಸಕಿ ಶಾರದಾ ಶೆಟ್ಟಿ ಬಳಗ ಬಿಜೆಪಿಯಲ್ಲಿ ಹೆದರುವುದು ಗಾಯತ್ರಿ ಒಬ್ಬರಿಗೇ! ಕುಮಟೆಯಲ್ಲಿ ದಿನಕರ ಜೆಡಿಎಸ್ ಬಿಟ್ಟು ಕೆಟ್ಟ ಎಂದು ಲೊಚಗುಟ್ಟುವವರೇ ಹೆಚ್ಚು. ಆತನಿಗೆ ಈ ಬಾರಿ ಜೆಡಿಎಸ್‌ನಿಂದ ಗೆಲ್ಲುವ ಅವಕಾಶ ಜಾಸ್ತಿಯಿತ್ತು. ಒಟ್ಟಿನಲ್ಲಿ ರೈಟ್ ಪರ್ಸನ್ ಇನ್ ದಿ ರಾಂಗ್ ಪಾರ್ಟಿ-ಎಂಬಂತಾಯ್ತು ಶೆಟ್ಟಿಯ ಬಿಟ್ಟಿ ರಾಜಕಾರಣ!

ಅನಂತ್ಮಾಣಿಗೆ ಭಟ್ಕಳ ಮತ್ತು ಕುಮಟಾ ಕ್ಷೇತ್ರಕ್ಕಿಂತ ತವರೂರು ಶಿರಸಿಯ ಪಕ್ಕದ ಯಲ್ಲಾಪುರವೇ ಎಲ್ಲ ದೃಷ್ಟಿಯಲ್ಲಿ ಸುರಕ್ಷಿತ ಅನ್ನಿಸುತ್ತಿದೆ. ಶಿರಸಿಯ ಬನವಾಸಿ ಸೀಮೆ, ಯಲ್ಲಾಪುರ ಮತ್ತು ಮುಂಡಗೋಡ ತಾಲ್ಲೂಕು ಸೇರಿ ರಚಿತವಾಗಿರುವ ಈ ಕ್ಷೇತ್ರದಲ್ಲಿ ಹವ್ಯಕರು ಗಣನೀಯವಾಗಿದ್ದಾರೆ. ಯಲ್ಲಾಪುರದ ಶಾಸಕ ಕಾಂಗ್ರೆಸ್‌ನ ಶಿವರಾಮ ಹೆಬ್ಬಾರ್ ಕಳೆಗುಂದಿದ್ದಾರೆ. ಮುಂಡಗೋಡ-ಯಲ್ಲಾಪುರದಲ್ಲಿ ಬಿಜೆಪಿ ಬಲಗೊಂಡಿದೆ. ಪಕ್ಕದ ಶಿರಸಿಯಲ್ಲಿ ಶತ್ರು ಕಾಗೇರಿ ಸ್ಪರ್ಧಿಸುವುದರಿಂದ ಆತ ಕಾಲೆಳೆವ ಭಯವಿಲ್ಲ. ಶಾಸಕ ಹೆಬ್ಬಾರ್ ಜತೆಗಿನ ರಹಸ್ಯ ಸ್ನೇಹ-ಸಂಬಂಧ ಒಂದು ಬಿಟ್ಟರೆ ಅನಂತ್ಮಾಣಿಗೆ ಉಳಿದೆಲ್ಲ ರೀತಿಯಿಂದ ಯಲ್ಲಾಪುರ ಸುರಕ್ಷಿತ. ಆದರೆ ಆತನಿಗೆ ಮಾಜಿ ಶಾಸಕ ವಿ.ಎಸ್. ಪಾಟೀಲ್ ಮಾತ್ರ ಅಡ್ಡಗಾಲು ಹಾಕಿ ಕುಂತಿದ್ದಾರೆ.


ಯಡ್ಡಿಯ ಲಿಂಗಾಯತ ಲಾಬಿಯ ಕಟ್ಟಾ ಬೆಂಬಲಿಗ ಈ ವಿ.ಎಸ್. ಪಾಟೀಲ್. ಆದರೆ ಸದ್ರಿ ಪಾಟೀಲರ ತಲೆ ಕಂಡರೆ ಮೊದಲಿಂದಲೂ ಅನಂತ್ಮಾಣಿಗೆ ಆಗದು. ಒಮ್ಮೆ ಗೆದ್ದು ಒಮ್ಮೆ ಸೋತಿರುವ ಪಾಟೀಲರಿಗೆ ಬಿಜೆಪಿ ಟಿಕೆಟ್ ತಪ್ಪಿಸಲು ಏನೇನು ಬೇಕೋ ಅದೆಲ್ಲ ಮಾಡಿದ್ದಾನೆ ಅನಂತ್ಮಾಣಿ. ಕೆಲವು ಬಾರಿ ಪಾಟೀಲರ ಮೇಲೇರಿ ಹೋಗಿದ್ದೂ ಇದೆ; ಪಾರ್ಟಿ ಮೀಟಿಂಗಲ್ಲಿ ಕುರ್ಚಿ ಎತ್ತಿ ಪಾಟೀಲರತ್ತ ಅನಂತ್ಮಾಣಿ ಎಸೆದು ಭಯೋತ್ಪಾದಕನಂತೆ ಹಾರಾಡಿದ್ದೂ ಇದೆ. ಯಾರೇನೇ ಹೇಳಲಿ ಯಡ್ಡಿಗೆ ಸ್ವ-ಜಾತಿಯ ಪಾಟೀಲರೇ ಅನಂತ್ಮಾಣಿಗಿಂತಲೂ ನಂಬಿಗಸ್ಥ ಬಂಟ. ನೀರಿಗಿಂತ ರಕ್ತವೇ ದಪ್ಪ ತಾನೆ? ಇದು ಅನಂತ್ಮಾಣಿಗೂ ಗೊತ್ತಿದೆ. ಹಾಗಾಗಿ ಅಷ್ಟು ಸುಲಭದಲ್ಲಿ ತನಗೆ ಯಲ್ಲಾಪುರದಲ್ಲಿ ಸ್ಪರ್ಧೆಗಿಳಿವ ಅವಕಾಶ ಸಿಗಲಾರದೆಂಬ ಆತಂಕ ಆತನನ್ನು ಕಾಡುತ್ತಿದೆ.

ಯಲ್ಲಾಪುರದಲ್ಲಿ ಲಿಂಗಾಯತರನ್ನು ಎದುರು ಹಾಕಿಕೊಂಡು ಗೆಲ್ಲುವುದು ಅನಂತ್ಮಾಣಿಯಿಂದ ಸಾಧ್ಯವೇ ಇಲ್ಲ. ಈಗಾಗಲೇ ಆತನ ಕಂಡರೆ ಲಿಂಗಾಯತರೂ ಮುಖ ಸಿಂಡರಿಸಿಕೊಂಡು ಹೋಗುತ್ತಾರೆ. ನಿರ್ಣಾಯಕ ಸಂಖ್ಯೆಯಲ್ಲಿರುವ ಲಿಂಗಾಯತರು ಯಲ್ಲಾಪುರ-ಮುಂಡಗೋಡ ಕ್ಷೇತ್ರದಲ್ಲಿ ಬಿಜೆಪಿಗೆ ಬೆನ್ನೆಲುಬು. ಈ ಜಾತಿ ಕೆಮಿಸ್ಟ್ರಿ ಮುಂದಿಟ್ಟು ಯಡ್ಡಿ ಟಿಕೆಟ್ ವಿ.ಎಸ್. ಪಾಟೀಲರಿಗೇ ಕೊಡುತ್ತಾರೆಂಬ ಆತಂಕದಿಂದಲೇ ಅನಂತ್ಮಾಣಿ ಕುಮಟಾಕ್ಕೆ ಜೋತು ಬಿದ್ದಿದ್ದಾನೆ. ಅನಂತ್ಮಾಣಿಯ ಮೂಲವೂ ಕುಮಟೆಯೇ. ಆತನ ತಂದೆ ಹೊಟ್ಟೆಪಾಡಿಗೆ ಘಟ್ಟಕ್ಕೆ ವಲಸೆ ಹೋದವರು. ಅನಂತ್ಮಾಣಿ ಕುಮಟೆಗೆ ವಕ್ಕರಿಸಿದರೆ ಜೆಡಿಎಸ್‌ಗೆ ದ್ರೋಹ ಮಾಡಿದ ದಿನಕರ ಶೆಟ್ಟಿ ಬಲಿ ಖಂಡಿತ. ಯಲ್ಲಾಪುರಕ್ಕೆ ಹೋದರೆ ವಿ.ಎಸ್.ಪಾಟೀಲರ ಪಾಡು ಹೇಳತೀರದು. ಅನಂತನ ಫೇವರಿಟ್ ಯಲ್ಲಾಪುರವೇ. ಆತನ ಸುತ್ತಾಟ ಬನವಾಸಿ-ಯಲ್ಲಾಪುರ-ಮುಂಡಗೋಡದಲ್ಲಿ ಬಿರುಸಾಗುತ್ತಿದೆ. ಜನರಿಗಾಗಿ ಎಂದೂ ಎಂಪಿ ನಾತೆಯಿಂದ ಓಡಾಡದ ಅನಂತ್ಮಾಣಿ ತನ್ನ ಒಣ ಪ್ರತಿಷ್ಠೆಯ ರಾಜಕಾರಣಕ್ಕಾಗಿ ಕಾಲಿಗೆ ಚಕ್ರ ಸುತ್ತಿಗೊಂಡಂತೆ ತಿರುಗುತ್ತಿರುವುದು ಜನರಲ್ಲಿ ಅಸಹ್ಯ ಮೂಡಿಸಿದೆ. ಯಲ್ಲಾಪುರದಲ್ಲಿ ತನಗೆ ಅನುಕೂಲವಾಗಬಹುದೆಂದು ಮಾಣಿ ಕಾಂಗ್ರೆಸ್ ವಕ್ತಾರನಾಗಿದ್ದ ಪ್ರಮೋದ್ ಹೆಗಡೆ ಎಂಬ ಭಾಷಣಕ್ಕಷ್ಟೇ ಭೂಷಣನಾದ ಪೊಕ್ಕು ಪುಢಾರಿಯನ್ನು ಬರಮಾಡಿಕೊಂಡಿದ್ದಾನೆ. ಪಕ್ಷ-ಪಕ್ಷ ಸುತ್ತಿ ಬಂದ ಖಾಲಿ ಜೋಳಿಗೆಯ ಪ್ರಮೋದ್‌ಗೋ ಬಿಜೆಪಿಯಲ್ಲಿ ತನ್ನ ಕುಲ ಕಂಠೀರವನ ಭವಿಷ್ಯ ಬೆಳಗುವ ತವಕ, ಪಾಪ!!


ಇಷ್ಟೆಲ್ಲ ಲಾಗ ಹಾಕಿದರೂ ಅಸೆಂಬ್ಲಿ ಸ್ಪರ್ಧೆಯ ಟಿಕೆಟ್ ತರುವ ತಾಕತ್ತು ಮಾತ್ರ ಅನಂತ್ಮಾಣಿಗೆ ಬಂದಿಲ್ಲ. ಬಿಜೆಪಿಯಲ್ಲಿ ಆತನ ಆಸೆಗೆ ವಿರುದ್ಧವಾದ ಟಿಕೆಟ್ ನಾಟಕಗಳು ದಿನಕ್ಕೊಂದರಂತೆ ನಡೆಯಲಾರಂಭಿಸಿದೆ. ಅನಂತ್ಮಾಣಿ ಅಂತೆಯೇ ಆರೆಂಟು ಬಿಜೆಪಿ ಸಂಸದರು ಅಸೆಂಬ್ಲಿ ಅಖಾಡಕ್ಕೆ ಇಳಿದು ಮಂತ್ರಿಯಾಗುವ ತೆವಲಲ್ಲಿದ್ದಾರೆ. ಯಡ್ಡಿಯ 'ಸಹಚಾರಿಣಿ' ಶೋಭಾ ಕರಂದ್ಲಾಜೆ ದಕ್ಷಿಣ ಕನ್ನಡ ಪುತ್ತೂರು ಟಿಕೆಟ್ ಬಯಸಿದ್ದಾರೆ. ಹಳೆಯ ಕ್ಷೇತ್ರ ಬೆಂಗಳೂರಿನ ಯಶವಂತಪುರದಲ್ಲಿ ಹೊರಗಿನವಳೆಂಬ ಕಳಂಕ ಕಾಡುತ್ತಿದೆ. ಕೊಪ್ಪಳದ ಸಂಗಣ್ಣ ಶಾಸಕನಾಗುವ ಕರಡಿ ಕುಣಿತ ಶುರು ಹಚ್ಚಿಕೊಂಡಿದ್ದಾರೆ. ಅದಿರುಗಳ್ಳರ ಬಳಗದ ಶ್ರೀರಾಮುಲುಗೆ ಬಳ್ಳಾರಿ ಗ್ರಾಮಾಂತರದ ಎಮ್ಮೆಲ್ಲೆ ಆಗುವ ಹಠ. ಬೆಂಗಳೂರಿನ ಗಾಂಧಿನಗರದಲ್ಲಿ ಎರಡೆರಡು ಬಾರಿ ಮಕಾಡೆ ಬಿದ್ದಿರುವ ಪಿ.ಸಿ. ಮೋಹನ್‌ಗೆ ಮತ್ತೊಂದು ಕೈ ನೋಡುವ ಉಮೇದಿ. ದಾವಣಗೆರೆಯಿಂದ ತಾನೇಕೆ ಶಾಸಕಂ ಮಂತ್ರಿಯಾಗಬಾರದು ಎಂಬ ಯೋಚನೆ ಸಿದ್ದೇಶರದು. ಹಿಂಗೆ ಮಂತ್ರಿಗಿರಿ ಕಾರಿನ ಕನಸಿಗ ಚೆಡ್ಡಿ ಸಂಸದರ ಲಿಸ್ಟ್ ಬೆಳೆಯುತ್ತ ಹೋಗುತ್ತದೆ.

ಒಟ್ಟಿನಲ್ಲಿ ಬಿಜೆಪಿಯ ರೆಬೆಲ್ ಬಾಯಿಬಡುಕ ಈಶ್ವರಿಯೇ ಹಲುಬುವಂತೆ- ಬಿಜೆಪಿಯಲ್ಲಿ ಯಾರ್‍ಯಾರು ಸಾಯ್ತಾರೋ....? ಯಾರ್‍ಯಾರು ಬದುಕುತ್ತಾರೋ....? ಸದ್ಯಕ್ಕಂತೂ ಸಾಕ್ಷಾತ್ ಮೋದಿ ಮಾಮನಿಂದಲೂ ಹೇಳಲಾಗದಂಥ 'ತುರ್ತು ಪರಿಸ್ಥಿತಿ' ಕೇಸರಿ ಪಾಳಯದಲ್ಲಿ ಉದ್ಭವಿಸಿದೆ!

■ ನಹುಷ













ಬಲವಂತವಾಗಿ ತುರುಕಲ್ಪಡುತ್ತಿರುವ ಆಧಾರ್

EPW ಸಂಪಾದಕೀಯ

ಕೃಪೆ: *Economic and Political Weekly* *March 11, 2017. Vol. 52. No.10*


■ ಅನು: ಶಿವಸುಂದರ್

ಕಲ್ಯಾಣರಾಜ್ಯಕ್ಕೂ ಮತ್ತು ಬೇಹುಗಾರಿಕೆ ಮಾಡುವ ಪ್ರಭುತ್ವಗಳಿಗೂ ನಡುವಿನ ವ್ಯತ್ಯಾಸ ವೇಗವಾಗಿ ಕಣ್ಮರೆಯಾಗುತ್ತಿದೆ.

ಆಹಾರದ ಹಕ್ಕನ್ನು ಪಡೆದುಕೊಳ್ಳಲು ಶರತ್ತನ್ನು ವಿಧಿಸುವುದು ಯಾವುದೇ ಕಲ್ಯಾಣರಾಜ್ಯದ ಲಕ್ಷಣವಲ್ಲ. ಮಧ್ಯಾಹ್ನದ ಬಿಸಿಯೂಟದ ಸೌಲಭ್ಯವನ್ನು ಪಡೆದುಕೊಳ್ಳಲೂ ಆಧಾರ್ ಕಾರ್ಡ್ ಸಂಖ್ಯೆಯನ್ನು ಒದಗಿಸುವುದನ್ನು ಕಡ್ಡಾಯ ಮಾಡಿ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಸೂಚನೆಯು ಸಹಜವಾದ ಮತ್ತು ನ್ಯಾಯಸಮ್ಮತ ಆಕ್ರೋಶವನ್ನು ಹುಟ್ಟುಹಾಕಿದೆ. ಏಕೆಂದರೆ ಕೆಲವು ರಾಜ್ಯಗಳಲ್ಲಿ ಈ ಹಿಂದೆ ಪಡಿತರ ಪದ್ಧತಿಯ ಸೌಲಭ್ಯವನ್ನು ಪಡೆದುಕೊಳ್ಳಲೂ ಆಧಾರ್ ಕಾರ್ಡನ್ನು ಕಡ್ಡಾಯ ಮಾಡಿದ್ದರಿಂದ ಉಂಟಾದ ಕೋಲಾಹಲವು ಇನ್ನಿದುವರೆಗೂ ತಣ್ಣಗಾಗಿಲ್ಲ. ಹಾಗಿದ್ದರೂ ಮುಂದುವರೆದಿರುವ ಸರ್ಕಾರದ ಈ ನಿರ್ಧಾರ ಸಾಧಾರಣವಾದದ್ದಲ್ಲ. ಗುಜರಾತ್, ಜಾರ್ಖಂಡ್ ಮತ್ತು ಆಂಧ್ರ ಪ್ರದೇಶ ಹಾಗೂ ಮತ್ತಿತರ ರಾಜ್ಯಗಳಿಂದ ಬರುತ್ತಿರುವ ವರದಿಗಳು ಆಧಾರ್ ದಾಖಲೆಗಳಲ್ಲಿ ಮತ್ತದರ ಧೃಢೀಕರಣದ ಪ್ರಕ್ರಿಯೆಯಲ್ಲಿನ ಸಮಸ್ಯೆಗಳು ಮತ್ತು ತಂತ್ರಜ್ಞಾನ ಮತ್ತು ಮೂಲಸೌಕರ್ಯಗಳ ಕೊರತೆ ಇತ್ಯಾದಿಗಳಿಂದ ನೈಜ ಫಲಾನುಭವಿಗಳು ಹೇಗೆ ಹೊರಗುಳಿಸಲ್ಪಟ್ಟಿದ್ದಾರೆಂಬ ದಾರುಣ ಸತ್ಯಗಳನ್ನು ವಿವರಿಸುತ್ತವೆ. ಈ ಅನುಭವಗಳು ಪಡಿತರ ವಿತರಣೆಯಲ್ಲಿ ಎದುರಾಗುತ್ತಿರುವ ಭ್ರಷ್ಟಾಚಾರ ಮತ್ತು ಅದಕ್ಷತೆಗಳ ನಿವಾರಣೆಗೆ ತಂತ್ರಜ್ಞಾನವೊಂದೇ ದಿವ್ಯೌಷಧಿಯಾಗಲಾರದೆಂಬುದನ್ನೂ ಮತ್ತು ತಂತ್ರಜ್ಞಾನವೇ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತಂತ್ರರಾದವರನ್ನು ಹೊರಗಟ್ಟುವ ಖಾತರಿ ವಿಧಾನವಾಗಿಬಿಡಬಹುದೆಂಬ ಪಾಠವನ್ನು ಸರ್ಕಾರಕ್ಕೆ ಕಲಿಸಬೇಕಿತ್ತು.

ಹಾಗಿದ್ದರೂ ಇತ್ತೀಚಿನ ಕೆಲವು ವಾರಗಳಲ್ಲಿ ಹಲವಾರು ಇಲಾಖೆಗಳು 30ಕ್ಕೂ ಹೆಚ್ಚು ಯೋಜನೆಗಳನ್ನು ಈ ಆಧಾರ್ ಬೋಗಿಗೆ ಸೇರಿಸುವುದಾಗಿ ಘೋಷಿಸಿವೆ. ಅದರಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ, ಕಾರ್ಮಿಕರ ವಿಮಾ ನಿಧಿ, ನಿವೃತ್ತಿವೇತನ ಮತ್ತು ವಿದ್ಯಾರ್ಥಿವೇತನ ಯೋಜನೆಗಳು ಮಾತ್ರವಲ್ಲದೆ 1984ರ ಭೋಪಾಲ್ ಅನಿಲ ಸೋರಿಕೆ ಪೀಡಿತರಿಗೆ ನಿಡಲಾಗುತ್ತಿರುವ ಪರಿಹಾರದ ಮೊತ್ತವನ್ನು ಪಡೆಯಲೂ ಇತ್ತೀಚೆಗೆ ಆಧಾರ್ ಅನ್ನು ಕಡ್ಡಾಯಗೊಳಿಸಲಾಗಿದೆ. ಅಂತಿಮವಾಗಿ ಜನರಿಗೆ ಒದಗಿಸಲಾಗುತ್ತಿರುವ ಎಲ್ಲಾ 84 ಯೋಜನೆಗಳಿಗೂ ಆಧಾರ್ ಅನ್ನು ಕಡ್ಡಾಯ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಸರ್ಕಾರವು ಏನೇ ಹೇಳಿದರೂ, ಈ ನಿರ್ಧಾರವು ಸಾರ್ವಜನಿಕರು ಸರ್ಕಾರದ ಯೋಜನೆಗಳ ಪ್ರಯೋಜನವನ್ನು ಪಡೆದುಕೊಳ್ಳಲು ಆಧಾರ್ ಅನ್ನು ಕಡ್ಡಾಯಗೊಳಿಸಬಾರದೆಂದು ಸುಪ್ರೀಂಕೋರ್ಟು ಪದೇಪದೇ ನೀಡುತ್ತಿರುವ ನಿರ್ದೇಶನಗಳಿಗೆ ತದ್ವಿರುದ್ಧವಾಗಿದೆ. ಈ ಪ್ರಕರಣ ಇನ್ನೂ ನ್ಯಾಯಾಲಯದ ಅಧೀನದಲ್ಲೇ ಇದೆ. ಆದರೂ ನ್ಯಾಯಾಲಯದ ಆದೇಶವನ್ನೂ ಪಕ್ಕಕ್ಕೆ ಸರಿಸಿ ಸರ್ಕಾರವು ತನ್ನ ಇತ್ತೀಚಿನ ಪತ್ರಿಕಾಹೇಳಿಕೆಯಲ್ಲಿ ಯಾವುದೇ ವ್ಯಕ್ತಿಗೆ ಇನ್ನೂ ಆಧಾರ್ ಸಂಖ್ಯೆ ದಕ್ಕಿಲ್ಲವಾದರೆ ಅದನ್ನು ಪಡೆದುಕೊಳ್ಳುವವರೆಗೆ ಇನ್ನಿತರ ಪರ್ಯಾಯ ಗುರುತು ದೃಢೀಕರಣ ಸಾಧನಗಳನ್ನು ಆಧರಿಸಿ ಪ್ರಯೋಜನವನ್ನು ವಿತರಿಸಲಾಗುವುದು ಎಂದು ಘೋಷಿಸಿದೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಎಲ್ಲಾ ರಾಜ್ಯಗಳಿಗೆ ಕಳಿಸಿರುವ ಸೂಚನೆಗಳಲ್ಲೂ ಸರ್ಕಾರದ ಯೋಜನೆಗಳ ಪ್ರಯೋಜನಗಳನ್ನು ಪಡೆದುಕೊಳ್ಳಲು ಆಧಾರ ಕಾರ್ಡ್ ಅತ್ಯಗತ್ಯವೆಂದೂ, ಅದಿಲ್ಲದಿದ್ದಲ್ಲಿ ಸೂಚಿಸಲಾದ ಇತರೆ ಗುರುತು ದೃಢೀಕರಣ ದಾಖಲೆಗಳನ್ನು ಒಪ್ಪಿಕೊಳ್ಳಲಾಗುವುದೆಂದೂ ಸ್ಪಷ್ಟೀಕರಿಸುತ್ತದೆ. ಆದರೆ ಫಲಾನುಭವಿಗಳು ತಾವು ಆಧಾರ್ ಕಾರ್ಡ್ ಪಡೆಯಲು ಮಾಡಿಕೊಂಡಿರುವ ನೋಂದಾವಣೆಯನ್ನು ತೋರಿಸಬೇಕು. ಇದರೊಡನೆ ಆಧಾರ್ ಸಂಖ್ಯೆಯನ್ನು ಪಡೆಯಲು ವಿಧಿಸಿರುವ ಕಟ್ಟುನಿಟ್ಟಿನ ಗಡುವನ್ನು ಗಮನಿಸಿದಾಗ ಆಧಾರ್ ಅನ್ನು ಹೆಚ್ಚೂಕಡಿಮೆ ಕಡ್ಡಾಯ ಮಾಡಿರುವುದು ಸ್ಪಷ್ಟವಾಗುತ್ತದೆ.



ಸರ್ಕಾರವು ಆಧಾರ್ ಅನ್ನು ಸರ್ಕಾರಿ ಯೋಜನೆಗಳಲ್ಲಿ ಸೋರಿಕೆಯನ್ನು ತಡೆಗಟ್ಟುವ, ಪಾರದರ್ಶಕತೆಯನ್ನು ತರುವ, ನಕಲಿ ಫಲಾನುಭವಿಗಳನ್ನು ಹೊರತಳ್ಳಿ, ದೊಡ್ಡ ಮೊತ್ತದ ಸಾರ್ವಜನಿಕರ ಹಣವನ್ನು ಉಳಿಸುವ ಮಂತ್ರದಂಡವೆಂದು ಬಿಂಬಿಸುತ್ತಿದೆ. ಆದರೆ ಅದು ಹೇಳದೆ ಮರೆಮಾಚುತ್ತಿರುವ ಸತ್ಯ ಸಂಗತಿಯೆಂದರೆ ಈ ಯೋಜನೆಯು ಜನರ ವೈಯಕ್ತಿಕ ಮತ್ತು ಖಾಸಗಿ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಮತ್ತು ನಿಯಂತ್ರಿಸುವ ಬೃಹತ್ ಸಾಧನವೂ ಆಗಿದೆ. ಇದರಿಂದ ಸರ್ಕಾರವು ಜನರ ಆನ್‌ಲೈನ್ ಚಟುವಟಿಕೆಗಳ ಮತ್ತು ವೈಯಕ್ತಿಕ ಮಾಹಿತಿಗಳ ಡಿಜಿಟಲ್ ದತ್ತಾಂಶಗಳ ಮೇಲೆ ನಿಗಾ ಇರಿಸುತ್ತಾ ದತ್ತಾಂಶ ಬೇಹುಗಾರಿಕೆ (ಡೇಟಾವಲೆನ್ಸ್) ನಡೆಸಲು ಸಾಧ್ಯವಾಗುತ್ತದೆ. ಕಾರ್ಗಿಲ್ ಯುದ್ಧದ ನಂತರದಲ್ಲಿ ಆಗಿನ ಭಾರತೀಯ ಜನತಾ ಪಕ್ಷದ ನೇತೃತ್ವದ ಎನ್‌ಡಿಎ ಸರ್ಕಾರವು ಆಧಾರ್ ಯೋಜನೆಯನ್ನು ಒಂದು ಭದ್ರತಾ ಮತ್ತು ಬೇಹುಗಾರಿಕಾ ಯೋಜನೆಯನ್ನಾಗಿಯೇ ಕಲ್ಪಿಸಿಕೊಂಡಿತ್ತು. ಇಂದಿನ ಆಧಾರ್ ಯೋಜನೆಯ ಗುಣಲಕ್ಷಣಗಳು ಅದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಅಷ್ಟು ಮಾತ್ರವಲ್ಲದೆ ಈ ಸರ್ಕಾರವು ಆಧಾರ್ ಅನ್ನು ಕಡ್ಡಾಯ ಮಾಡಬಾರದೆಂಬ ಸುಪ್ರೀಂಕೋರ್ಟಿನ ಆದೇಶವನ್ನು ಒಂದೆಡೆ ಉಲ್ಲಂಘಿಸುತ್ತಲೇ, ಮತ್ತೊಂದೆಡೆ ನಾಗರಿಕರ ಖಾಸಗಿತನವನ್ನು ರಕ್ಷಿಸುವ ಕಾನೂನನ್ನಾಗಲೀ ಅಥವಾ ಬಯೊಮೆಟ್ರಿಕ್ ದತ್ತಾಂಶಗಳನ್ನು ನಿಯಂತ್ರಣ ಮಾಡುವ ಕಾನೂನನ್ನಾಗಲೀ ರೂಪಿಸದೆ ಎಲ್ಲಾ ಸಾಂವಿಧಾನಿಕ ಪದ್ಧತಿ ಮತ್ತು ಎಚ್ಚರಿಕೆಗಳನ್ನು ಪಕ್ಕಕ್ಕೆ ಸರಿಸಿ ಆಧಾರ್ (ಟಾರ್ಗೆಟೆಡ್ ಡೆಲಿವರಿ ಆಫ್ ಫೈನಾನ್ಷಿಯಲ್ ಅಂಡ್ ಅದರ ಸಬ್ಸಿಡೀಸ್, ಬೆನಿಫಿಟ್ಸ್ ಅಂಡ್ ಸರ್ವೀಸಸ್) ಆಕ್ಟ್-2016 (ನಿರ್ದಿಷ್ಟ ವರ್ಗಗಳಿಗೆ ಮಾತ್ರ ಒದಗಿಸುವ ಹಣಕಾಸು ಮತ್ತಿತರ ಸಹಾಯಧನ, ಸೇವೆ ಮತ್ತು ಪ್ರಯೋಜನ ಕಾಯಿದೆ-2016) ಅನ್ನು ಒಂದು ಹಣಕಾಸು ಮಸೂದೆಯಾಗಿ (ಯಾವುದೇ ಹಣಕಾಸು ಮಸೂದೆಗೆ ರಾಜ್ಯಸಭೆಯ ಅನುಮೋದನೆ ಅಗತ್ಯವಿರುವುದಿಲ್ಲ- ಅನು) ಜಾರಿಮಾಡಿದೆ.

ಸಾವಿರಾರು ನಾಗರಿಕರನ್ನು ಅತ್ಯಂತ ಕಳವಳಕ್ಕೀಡುಮಾಡುತ್ತಿರುವ ಸಂಗತಿಯೆಂದರೆ ಅವರ ಖಾಸಗಿ ಬಯೋಮೆಟ್ರಿಕ್ ಮಾಹಿತಿಯ ನಿಯಂತ್ರಣ ಮತ್ತು ಅದನ್ನು ಯಾರ್‍ಯಾರು ದಕ್ಕಿಸಿಕೊಳ್ಳಬಹುದೆಂಬ ಸಂಗತಿ. ಆಧಾರ್ ನೋಂದಾವಣೆ ಅರ್ಜಿ ನಮೂನೆಯು ಕೆಳಗಿನ ರೀತಿಯಲ್ಲಿ ಒಂದು ಅಸ್ಪಷ್ಟವಾದ ಸಮ್ಮತಿ ಪರವಾನಗಿಯನ್ನು ಪಡೆದುಕೊಳ್ಳುತ್ತದೆ: ನಾನು ಇಲ್ಲಿ ಒದಗಿಸಿರುವ ಮಾಹಿತಿಯನ್ನು ಯು.ಐ.ಡಿ.ಎ.ಐ (ಯುನಿಕ್ ಐಡೆಂಟಿಫಿಕೇಷನ್ ಆಥಾರಿಟಿ ಆಫ್ ಇಂಡಿಯಾ- ಭಾರತದ ವಿಶಿಷ್ಟ ಗುರುತು ನೀಡಿಕೆ ಪ್ರಾಧಿಕಾರ)ವು ಸಾರ್ವಜನಿಕ ಮತ್ತು ಕಲ್ಯಾಣ ಯೋಜನಾ ಸೇವೆಗಳನ್ನು ಒದಗಿಸುತ್ತಿರುವ ಇತರ ಸಂಸ್ಥೆಗಳೊಂದಿಗೆ ಹಂಚಿಕೊಳ್ಳುವುದರ ಬಗ್ಗೆ ನನಗ[illegible] ಯಾವುದೇ ಆಕ್ಷೇಪಣೆಯಿಲ್ಲ. ಇದರ ಕುರಿತು ಭಾರತ[illegible] ವಿಶಿಷ್ಟ ಗುರುತು ನೀಡಿಕೆ ಪ್ರಾಧಿಕಾರವು ಯಾವುದೇ[illegible] ನಿಬಂಧನೆಗಳನ್ನು ಸ್ಪಷ್ಟೀಕರಿಸಿಲ್ಲವಾದರೂ ನೋಂದಾವ[illegible] ಕೇಂದ್ರದಲ್ಲಿನ ಸಿಬ್ಬಂದಿಗಳು ಭವಿಷ್ಯದ ದೃಷ್ಟಿಯಿಂದ ಸಮ್ಮ[illegible] ನೀಡುವುದು ಒಳ್ಳೆಯದೆಂದು ಪುಸಲಾಯಿಸುತ್ತಾರೆ. ಆಧಾರ[illegible] ಬಗ್ಗೆ ನಡೆಸುತ್ತಿರುವ ಪ್ರಚಾರದಲ್ಲಿ ಸರ್ಕಾರವು ಈ[illegible] ಸ್ವಸಮ್ಮತಿಯ ಬಗ್ಗೆ ಹೆಚ್ಚಿಗೆ ಪ್ರಚಾರ ಮಾಡುತ್ತಿಲ್ಲ. ಅದೇರೀ[illegible] ಒಂದು ನೊಂದಾಯಿತ ಮೊಬೈಲ್ ಫೋನ್ ಇದ್ದ[illegible] ಒಂದು ಬಾರಿ ಪಡೆದುಕೊಳ್ಳುವ ಪಾಸ್ವರ್ಡ್ (ಒಟಿ[illegible] ವ್ಯವಸ್ಥೆಯ ಮೂಲಕ ಗುರುತು ಪ್ರಾಧಿಕಾರದ ವೆಬ್‌ಸೈಟಿನ[illegible] ತಮ್ಮ ಬಯೋಮೆಟ್ರಿಕ್ ವಿವರಗಳನ್ನು ಲಾ[illegible] ಮಾಡಬಹುದೆಂಬುದರ ಬಗ್ಗೆಯೂ ಪ್ರಚಾರ ಮಾಡಿಲ್ಲ[illegible] ಆದರೆ ಇಂಟರ್ನೆಟ್ ಮತ್ತು ಮೊಬೈಲ್ ಸೌಲಭ್ಯವಿಲ್ಲದವ[illegible] ಈ ಅವಕಾಶವನ್ನು ಬಳಸಿಕೊಳ್ಳಲೂ ಆಗುವುದಿಲ್ಲ.


ಆಧಾರ್ ಕಾಯಿದೆಯೂ ಈ ಯಾವುದೇ ಅಂಶಗಳನ್ನು[illegible] ಮುಟ್ಟುವುದೂ ಇಲ್ಲ. ಬದಲಿಗೆ ಅದರ 57ನೇ ಅಂಶದಲ್ಲಿ[illegible] ಈ ಆಧಾರ್ ಸಂಖ್ಯೆಯನ್ನು ಸರ್ಕಾರ ಅಥವಾ ಅಸ್ತಿತ್ವದಲ್ಲಿರುವ[illegible] ಕಾನೂನಿಗೆ ಅಥವಾ ಒಪ್ಪಂದಕ್ಕೆ ಒಳಪಟ್ಟು ಯಾವುದೇ[illegible] ವ್ಯಕ್ತಿ ಅಥವಾ ಸಂಸ್ಥೆ ಯಾವುದೇ ಉದ್ದೇಶಕ್ಕೆ ಯಾವುದೇ[illegible] ವ್ಯಕ್ತಿಯ ಗುರುತನ್ನು ದೃಢೀಕರಿಸಲು ಬಳಸಬಹುದಾದ[illegible] ಅಧಿಕಾರವನ್ನು ನೀಡುತ್ತದೆ. ಹೀಗೆ ಈ ಕಾನೂನು ತುಂಬಾ[illegible] ಸ್ಪಷ್ಟವಾಗಿ ಸರ್ಕಾರೇತರ ಸಂಸ್ಥೆಗಳು ಸಹ ಆಧಾರ್[illegible] ದೃಢೀಕರಣವನ್ನು ಮತ್ತದರಲ್ಲಿರುವ ಮಾಹಿತಿಗಳನ್ನು[illegible] ಬಳಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಈಗಾಗಲೇ[illegible] ಇದು ಬಳಕೆಗೂ ಬಂದಿದೆ. ತೀರಾ ಇತ್ತೀಚೆಗ[illegible] ಸಾರ್ವಜನಿಕರಿಂದ ಬಂದ ದೂರುಗಳನ್ನು ಆಧರಿಸಿ ತನ್ನಲ್ಲಿದ್ದ[illegible] ಮಾಹಿತಿಗಳನ್ನು ಕಾನೂನುಬಾಹಿರವಾಗಿ ಬಳಸಿಕೊಳ್ಳುತ್ತಿದ್ದ[illegible] 24 ಕಂಪನಿಗಳಿಗೆ ಪ್ರಾಧಿಕಾರವು ತಡೆಯೊಡ್ಡಿದೆ. ಇದರ[illegible] ಜೊತೆಗೆ ಯಾವುದು ಬಯೊಮೆಟ್ರಿಕ್ ಮಾಹಿತಿ ಎಂಬುದರ[illegible] ವ್ಯಾಖ್ಯಾನದಲ್ಲಿ ಇತರ ಜೈವಿಕ ಅಂಶಗಳೂ (ಭವಿಷ್ಯದಲ್ಲಿ[illegible] ಡಿಎನ್‌ಎ ಕೂಡಾ ಎಂದು ಓದಿಕೊಳ್ಳಿ) ಎಂಬುದು ಮತ್ತಷ್ಟು[illegible] ಗೊಂದಲವನ್ನು ಹುಟ್ಟುಹಾಕಿದೆ. ಇದಕ್ಕಿಂತ ಹೆಚ್ಚಿನ[illegible] ಗೊಂದಲವನ್ನು ಸುಪ್ರೀಂ ಕೋರ್ಟು ತನ್ನ ಇತ್ತೀಚಿನ[illegible] 2017ರ ಫೆಬ್ರವರಿ ಆದೇಶದ ಮೂಲಕ ಹುಟ್ಟುಹಾಕಿದೆ[illegible] ಆ ಆದೇಶದಲ್ಲಿ ಎಲ್ಲಾ ಮೊಬೈಲ್ ಫೋನುಗಳ ಸಿಮ್[illegible] ಕಾರ್ಡಿಗೆ ಆಧಾರ್ ಸಂಖ್ಯೆಯನ್ನು ಲಗತ್ತಿಸುವುದನ್ನು ಕಡ್ಡಾಯ[illegible] ಮಾಡುವ ಮೂಲಕ, ಸಾರ್ವಜನಿಕ ಸೇವೆಗಳಿಗೆ ಆಧಾರ್[illegible] ಅನ್ನು ಕಡ್ಡಾಯ ಮಾಡಬಾರದೆಂಬ ತನ್ನ ಈವರೆಗಿನ[illegible] ಆದೇಶಗಳಿಗೆ ತಾನೇ ವ್ಯತಿರಿಕ್ತವಾಗಿ ಆದೇಶ ನೀಡಿದೆ[illegible] ಇವೆಲ್ಲವೂ ಈ ಬೃಹತ್ ಬಯೋಮೆಟ್ರಿಕ್ ಮತ್ತು[illegible] ಜನಸಂಖ್ಯಾ ದತ್ತಾಂಶಗಳ ಸಂಗ್ರಹ ಮತ್ತು ನಿಯಂತ್ರಣಗಳ[illegible] ಬಗ್ಗೆ ಹಲವು ಕಳವಳಕಾರಿ ಪ್ರಶ್ನೆಗಳನ್ನು ಹುಟ್ಟಿಸುತ್ತವೆ[illegible] ಭಾರತ ಪ್ರಭುತ್ವವು ಆಧಾರ್ ಅನ್ನು ಪ್ರೋತ್ಸಾಹಿಸುವ[illegible] ಮೂಲಕ ತಮ್ಮ ಸೇವೆಯನ್ನು ಒದಗಿಸಲು ನಮ್ಮ[illegible] ಮಾಹಿತಿಗಳನ್ನು ಒದಗಿಸುವುದನ್ನು ಕಡ್ಡಾಯ ಶರತ್ತನ್ನಾಗಿಸುವ[illegible] ಕಾರ್ಪೊರೇಟ್ ಸಂಸ್ಥೆಗಳ ರೀತಿ ವರ್ತಿಸುತ್ತಿದೆ. ಅದನ್ನು[illegible] ನಂತರದಲ್ಲಿ ನಮ್ಮ ಮೇಲೆಯೇ ಬೇಹುಗಾರಿಕೆ ನಡೆಸಲು[illegible] ಬಳಸಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ತನ್ನ ಜನರಿಂದ[illegible] ಪಾರದರ್ಶಕತೆಯನ್ನು ನಿರೀಕ್ಷಿಸುವ ಪ್ರಭುತ್ವವೊಂದು ತಾನು[illegible] ಮಾತ್ರ ಅಪಾರದರ್ಶಕವಾಗಿರುವುದು ಸ್ಪಷ್ಟ. ■

ಅಳಿವಿನ ವಿರುದ್ಧ ಹೋರಾಡಿದ ಜೀವ ಅಳಿದಿದೆ

ಕಳೆದ ವರ್ಷ ಸುಮಾರು ಇದೇ ಸಮಯ, ಅಂದರೆ ಮಾರ್ಚ್ ತಿಂಗಳಲ್ಲಿ ವಿಜಯನಾಥ ಶೆಣೈ ಅವರ ಕನಸಾದ ಹೆರಿಟೇಜ್ ವಿಲೇಜಿಗೆ ಕೊನೆಯ ಬಾರಿ ಭೇಟಿ ನೀಡಿದ್ದು. ಇನ್ನೇನು ಸಾರ್ವಜನಿಕ ಭೇಟಿಗೆ ತೆರೆದುಕೊಳ್ಳಲಿದ್ದ ಹೆರಿಟೇಜ್ ವಿಲೇಜ್ ಅಂದು ಭೇಟಿ ನೀಡಿದಾಗ ಅದರ ರೂವಾರಿಯಾದ ವಿಜಯನಾಥ ಶೆಣೈ ಆರೋಗ್ಯ ಬಹಳಷ್ಟು ಹದಗೆಟ್ಟಿತ್ತು. ಆದರೂ ಬಂದು ಅರಳುತ್ತಿರುವ ಹೆರಿಟೇಜ್ ವಿಲೇಜ್ ನಡುವೆ ಕೂತು ತಾವು ಅರಳುತ್ತಿದ್ದರು.

ಹಿಂದೆ ಬಾಲ್ಯದ ದಿನಗಳಲ್ಲಿ ಅವರ ಹೆರಿಟೇಜ್ ವಿಲ್ಲಾಜಿನ ಬಿಂದು ರೂಪ ಹಸ್ತ-ಶಿಲ್ಪಕ್ಕೆ ಅಪ್ಪ ಕೆಲವೊಮ್ಮೆ ಕರೆದುಕೊಂಡು ಹೋಗುತ್ತಿದ್ದರು. ಆಗ ನನಗೆ ಅದೊಂದು ಮೋಜು ಮಾತ್ರವಾಗಿತ್ತು. ಅಲ್ಲಿನ ಕಂಬ, ಗೋಡೆ, ಮಣೆ, ಭಾವಣೆ ಎಲ್ಲದರ ಕುರಿತು ಮಾತನಾಡುತ್ತಿದ್ದ ವಿಜಯನಾಥ ಶೆಣೈ ಕಣಕಣದಲ್ಲಿಯೂ ಇತಿಹಾಸ ಹರಿಯುತ್ತಿದೆ ಎಂದು ತೋರಿಸಿದ್ದರು. ಅದೆಲ್ಲಾ ಅರ್ಥವಾಗಿದ್ದು ಮುಂದೆ






ಎಂದೋ. ಆ ಹೊತ್ತಿಗಾಗಲೇ ಹಸ್ತ-ಶಿಲ್ಪ ಬಾಗಿಲು ಹಾಕಿಕೊಂಡು ಜಿಗುಪ್ಸೆ ಬಂದ ಮುದುಕಿಯಂತೆ ಮುದುಡಿ ಕುಳಿತು ಕೊಂಡಿತು. ಆದರೆ ಅದರ ಮುಂದುವರಿದ ಭಾಗವಾಗಿ ಅಲ್ಲೇ ಸ್ವಲ್ಪ ದೂರದಲ್ಲಿ ಹೆರಿಟೇಜ್ ವಿಲೇಜ್ ತಲೆಯೆತ್ತ ಲಾರಂಭಿಸಿತು. ಅದಕ್ಕೂ ರೂವಾರಿ ವಿಜಯನಾಥ ಶೆಣೈ ಅವರೇ.

ಆಗಿನ್ನೂ ಸಾರ್ವಜನಿಕ ವೀಕ್ಷಣೆಗೆ ಹೆರಿಟೇಜ್

ಚುನಾವಣೆಗಳು, ಭಯೋತ್ಪಾದನೆ, ಭಟ್ಟಂಗಿ ಮಾಧ್ಯಮ



2017ರ ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಬಿಜೆಪಿ ...ದಂಥಾ ಪ್ರಚಂಡ ಗೆಲುವಿನ ಹಿಂದೆ ...ರಾರೂಢರನ್ನು ಬದಲಾಯಿಸುವ ಇಚ್ಛೆ ಭಾರತೀಯರ ... ಆರಾಧನೆಯ ದೌರ್ಬಲ್ಯ ಮೊದಲಾದ ಹತ್ತು ...ರ ಕಾರಣಗಳನ್ನು ಕೊಡಬಹುದು. ಆದರೆ ಬಿಜೆಪಿ ...ಂಡರು ಹಿಂದೂತ್ವ ಅಸ್ತ್ರವನ್ನು ಪರಿಣಾಮಕಾರಿಯಾಗಿ ... ಸಮಾಜವನ್ನು ಧರ್ಮದ ನೆಲೆಯಲ್ಲಿ ಧ್ರುವೀಕರಿಸಿ ...ೂಲಕ ಮತಗಳನ್ನು ಕ್ರೋಢೀಕರಿಸಿರುವುದೇ ಅತ್ಯಂತ ...ಖ ಕಾರಣವೆಂದು ಅನಿಸುತ್ತದೆ. ಅಲ್ಪಸಂಖ್ಯಾತರೆಂದರೆ ...ಜವಿರೋಧಿ ಕೃತ್ಯಗಳನ್ನು ಎಸಗುವವರು, ...ಾಮಿಗಳು, ಇವರಿಂದ ಮತ್ತು ಇವರ ಹೆಚ್ಚುತ್ತಿರುವ ...ಗಳಿಂದ ಹಿಂದೂ ಧರ್ಮಕ್ಕೆ ದೊಡ್ಡ ಅಪಾಯವಿದೆ ... ಬಿಂಬಿಸುತ್ತಾ ಬರಲಾಗಿದೆ. ಸಾರ್ವಜನಿಕ ಸಭೆಗಳು ... ಭಟ್ಟಂಗಿ ಮಾಧ್ಯಮಗಳ ಮೂಲಕ ರೈಲು ...ಾತಗಳು, ಸ್ಫೋಟಗಳು ಮುಂತಾದ ದುಷ್ಕೃತ್ಯಗಳಿಗೆ ...ಂ ಮೂಲಭೂತವಾದಿಗಳೇ ಕಾರಣ ಎಂಬ ...ಯನ್ನು ವ್ಯಾಪಕವಾಗಿ ಹಬ್ಬಿಸಲಾಗಿದೆ. ಒಟ್ಟಾರೆಯಾಗಿ ...ಖ್ಯಾತ ಸಮುದಾಯಗಳ ಕುರಿತು ಭಯ ಹಾಗೂ ...ರ ಭಾವನೆಯನ್ನು ಬಿತ್ತುವಲ್ಲಿ ಗುಜರಾತ್ ಮಾದರಿಯ ... ಬಳಕೆ ಆಗಿರುವಂತಿದೆ.

ಚುನಾವಣೆಗಳು ಮತ್ತು ಭಯೋತ್ಪಾದನೆಯ ಗುಮ್ಮ

...ಾರ್ಚ್ 7ರಂದು ಅಂದರೆ ಕೊನೆಯ ಹಂತದ ...ಾನದ ಮುನ್ನಾದಿನ ಭೋಪಾಲದಿಂದ ಉಜ್ಜಯಿನಿಗೆ ...ುತ್ತಿದ್ದ ರೈಲುಗಾಡಿಯಲ್ಲಿ ಮಧ್ಯ ಪ್ರದೇಶದ ಜಾಬ್ಡಿ ...ಲ್ಲಿ ಕಡಿಮೆ ತೀವ್ರತೆಯ ಸ್ಫೋಟ ಸಂಭವಿಸಿದ ...ಮವಾಗಿ ಸುಮಾರು 9 ಮಂದಿ ಪ್ರಯಾಣಿಕರು ...ಗೊಂಡಿದ್ದರು. ಇದಾದ ಕೆಲವೆ ಗಂಟೆಗಳೊಳಗಾಗಿ ...ಒಂದು ಬಾರಿ ದೊಡ್ಡ ಭಯೋತ್ಪಾದಕ ದಾಳಿಯೆಂದು ...ಲಾಯಿತು. ರಾಜ್ಯದ ಹೆಚ್ಚಿನ ಮಾಧ್ಯಮಗಳ ...ೖನ್‌ಗಳು, ಬ್ರೇಕಿಂಗ್ ನ್ಯೂಸ್‌ಗಳೆಲ್ಲ ಇದು ಐಸಿಸ್ ... ಕೃತ್ಯವೆಂದು ಹೇಳುವ ರೀತಿಯಲ್ಲಿದ್ದವು. ...ರಣೆಗೆ: 'ಐಸಿಸ್‌ನಿಂದ ಮೊತ್ತಮೊದಲ ಬಾರಿ ...ದ ಮೇಲೆ ದಾಳಿ', 'ಉಜ್ಜಯಿನಿ ರೈಲು ಸ್ಫೋಟಕ್ಕೆ ... ಜತೆ ಸಂಬಂಧ', 'ದಾಳಿಕೋರರಿಂದ ಸ್ಫೋಟ ...ು ಸಿರಿಯಾಗೆ ರವಾನೆ' ಇತ್ಯಾದಿ...


ಅನತಿ ಕಾಲದಲ್ಲಿ ಮತ್ತೊಂದು ಸುದ್ದಿ ಪ್ರಕಟವಾಯಿತು. 'ಐಸಿಸ್ ಜತೆ ಸಂಬಂಧವಿರುವ ಉಗ್ರ ಸೈಫುಲ್ಲಾನನ್ನು ಲಕ್ನೋದಲ್ಲಿ ಪತ್ತೆಹಚ್ಚಲಾಯಿತು; ಆ ಸಂದರ್ಭದಲ್ಲಿ ಎಟಿಎಸ್ ತಂಡ ಮತ್ತು ಸೈಫುಲ್ಲಾ ನಡುವೆ ನಡೆದ ಶೂಟೌಟ್‌ನಲ್ಲಿ ಸೈಫುಲ್ಲಾನನ್ನು ಕೊಲ್ಲಲಾಯಿತು; ಇನ್ನೂ ಇಬ್ಬರು ಉಗ್ರರು ಲಕ್ನೋದ ಠಾಕುರ್‌ಗಂಜ್‌ನಲ್ಲಿ ಅವಿತಿರಬಹುದು ಎಂಬ ಅನುಮಾನಗಳಿವೆ.'

ಮಾರ್ಚ್ 7, 8ರಂದು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲೆಲ್ಲಾ ಇದನ್ನು ಬಿಟ್ಟು ಬೇರೆ ಸುದ್ದಿಯೆ ಇಲ್ಲ ಎಂಬಂತಿತ್ತು. ಮಾರ್ಚ್ 8ರಂದು ಮತದಾನ ನಡೆಯುತ್ತಿದ್ದಾಗ ಸುದ್ದಿ ವಾಹಿನಿಗಳು ಎಡೆಬಿಡದೆ ತೋರಿಸುತ್ತಿದ್ದ ಎರಡು ದೃಶ್ಯಗಳೆಂದರೆ ಲಕ್ನೋ ಶೂಟೌಟ್ ಮತ್ತು ಮೋದಿ, ಶಾ ಜೋಡಿಯ ಸೋಮನಾಥ ಮಂದಿರ ಭೇಟಿ. ವಾಹಿನಿಗಳು ಸುಮಾರು 20 ಗಂಟೆಗಳ ಕಾಲ ಇದನ್ನೇ ತೋರಿಸಿದವು. ಅನೇಕ ಟಿವಿ ಚರ್ಚೆಗಳೂ ನಡೆದವೆಂದು ಬೇರೆ ಹೇಳಬೇಕಾಗಿಲ್ಲ. ಗಮನಾರ್ಹವಾಗಿ ಅದೇ ದಿನ 2007ರ ಅಜ್ಮೇರ ಸ್ಫೋಟ ಪ್ರಕರಣದಲ್ಲಿ ಮೂವರು ಆರೆಸ್ಸೆಸ್ ಸದಸ್ಯರಿಗೆ ಶಿಕ್ಷೆಯಾಗಿ ಸ್ವಾಮಿ ಅಸೀಮಾನಂದ ಸೇರಿದಂತೆ ಉಳಿದ 7 ಮಂದಿ ಬದಲಾವಣೆಗಳಾದವು. ಸೈಫುಲ್ಲಾನಿಗಾಗಲಿ, ಉಳಿದ ಇಬ್ಬರು 'ಉಗ್ರ'ರಿಗಾಗಲಿ ಐಸಿಸ್ ಜತೆ ಸಂಪರ್ಕವಿತ್ತು ಎಂಬುದನ್ನು ರಾಜ್ಯ ಪೊಲೀಸರು ಮತ್ತು ಕೇಂದ್ರ ಗೃಹಸಚಿವರು ಅಧಿಕೃತವಾಗಿ ದೃಢಪಡಿಸಿಲ್ಲ ಎಂಬ ವರದಿಗಳು ಪ್ರಕಟವಾದವು.

ಮೊನ್ನೆಯ ಲೈವ್ ಪ್ರಸಾರದ ವೇಳೆ ವರದಿಗಾರರು ಎನ್‌ಕೌಂಟರ್ ನಡೆದುದೆನ್ನಲಾದ ಸ್ಥಳದಿಂದ ಕೆಲವೇ ಮೀಟರ್ ದೂರದಲ್ಲಿ ಭದ್ರತಾ ಸಿಬ್ಬಂದಿ ಜತೆ ಲೋಕಾಭಿರಾಮವಾಗಿ ಹರಟುತ್ತಿದ್ದರೆಂದು ತಿಳಿದುಬಂದಿದೆ. ಅಲ್ಲಿ ಯಾವ ಉದ್ವಿಗ್ನತೆಯೂ ಕಂಡುಬಂದಿಲ್ಲ. ಈ ಸಂದರ್ಭದಲ್ಲಿ 2008ರ ಮುಂಬಯಿ ದಾಳಿಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ದಾಳಿಗಳ ಬಳಿಕ ನೇಮಕವಾಗಿದ್ದ ಉನ್ನತ ಮಟ್ಟದ ಸಮಿತಿಯ ತನಿಖೆಯಲ್ಲಿ ತಿಳಿದುಬಂದಿರುವಂತೆ ಅಂದು ತಾಜ್ ಹೋಟೆಲ್ ಸುತ್ತಮುತ್ತಲಿನ ಲೈವ್ ದೃಶ್ಯಗಳನ್ನು ಬಿತ್ತರಿಸಿದ ಪರಿಣಾಮವಾಗಿ ನಮ್ಮ ಭದ್ರತಾ ಪಡೆಗಳಿಗೆ ತುಂಬಾ ಪ್ರಾಣಹಾನಿಯ ಜತೆ ಸೊತ್ತುಗಳಿಗೂ ನಷ್ಟ ಆಗಿತ್ತು. ತದನಂತರ ಸರಕಾರ ರೂಪಿಸಿರುವ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಭಯೋತ್ಪಾದಕರ ವಿರುದ್ಧದ ಯಾವುದೇ ಕಾರ್ಯಾಚರಣೆಯನ್ನು ಲೈವ್ ಆಗಿ ಬಿತ್ತರಿಸಕೂಡದು ಅವರನ್ನೆಲ್ಲ ತಕ್ಷಣ ಪತ್ತೆಹಚ್ಚಿ ಯಶಸ್ವಿ 'ಎನ್‌ಕೌಂಟರ್' ಕಾರ್ಯಾಚರಣೆಗಳ ಮೂಲಕ ಮುಗಿಸಿಬಿಡಲಾಗಿತ್ತು. ಆ ಸಂದರ್ಭದಲ್ಲಿ ಚುನಾವಣಾ ಪ್ರಚಾರ ಭಾಷಣಗಳ ವೇಳೆ ಇದೇ ವಿಷಯವನ್ನು ಎತ್ತಿಕೊಂಡು ಜನರನ್ನು ಭಾವನಾತ್ಮಕವಾಗಿ ಕೆರಳಿಸಿದುದನ್ನು ಜ್ಞಾಪಿಸಿಕೊಳ್ಳಿ. ಅಂದಿಗೆ ಹೋಲಿಸಿದರೆ ಈ ಬಾರಿ ಹೆಚ್ಚು ಆಧುನಿಕ ಹಾಗೂ ಸಂಕೀರ್ಣ ವಿಧಾನಗಳನ್ನು ಬಳಸಿರುವ ಹಾಗಿದೆ.

ಗೂಢಚಾರ ಇಲಾಖೆಗೆ 'ಎನ್‌ಕೌಂಟರ್'ನಲ್ಲಿ ಕೊಲ್ಲಲ್ಪಟ್ಟ ಸೈಫುಲ್ಲಾ ಮತ್ತಿತ್ತರರ ಚಲನವಲನಗಳ ಮಾಹಿತಿ ಇದ್ದಿರಲೇಬೇಕಲ್ಲವೆ? ಆಗಲೆ ಇವರನ್ನು ಬಂಧಿಸಿದ್ದರೆ ತಥಾಕಥಿತ ಐಸಿಸ್ ನಂಟುಗಳ ಬಗ್ಗೆ ಹೆಚ್ಚಿನ ಖಚಿತ ಮಾಹಿತಿಗಳು ಲಭ್ಯವಾಗುತ್ತಿರಲಿಲ್ಲವೆ? ಸೈಫುಲ್ಲಾನ ಬಳಿ ಒಂದು ನಾಡ ಪಿಸ್ತೂಲು ಬಿಟ್ಟರೆ ಬೇರೇನೂ ಸಿಕ್ಕಿಲ್ಲ. ಇದನ್ನೆಲ್ಲ ನೋಡುವಾಗ ಬಂಧಿಸುವ ಬದಲು ಸಾಯಿಸುವುದರ ಹಿಂದೆ ಯಾರದೋ ಗುಟ್ಟು ಬಯಲಾಗಬಾರದು ಎಂಬ ಉದ್ದೇಶವೆ ಇರಬಹುದೆಂದು ತೋರುತ್ತದೆ.

ಸಿಬಿಐ, ಎನ್‌ಐಎಗಳು ಪಂಜರದ ಅರಗಿಣಿಗಳಾಗಿರುವ ಸನ್ನಿವೇಶದಲ್ಲಿ, ನಕಲಿ ಎನ್‌ಕೌಂಟರ್ ಮತ್ತು ಕೇಸರಿ ಭಯೋತ್ಪಾದನೆಯ ಆರೋಪಿಗಳಲ್ಲಿ ಹೆಚ್ಚಿನವರು ಖುಲಾಸೆಗೊಳ್ಳುತ್ತಿರುವ ಇವತ್ತಿನ ಸಂದರ್ಭದಲ್ಲಿ ಒಂದು ವೇಳೆ ತಥಾಕಥಿತ ಎನ್‌ಕೌಂಟರ್ ಮೇಲೆ ತನಿಖೆ ನಡೆದರೂ ಅದು ಎಷ್ಟರ ಮಟ್ಟಿಗೆ ಸತ್ಯಾಂಶಗಳಿಂದ ಕೂಡಿರಬಹುದೆಂದು ನೀವೇ ಯೋಚಿಸಿ.



Pakistan's ISI Behind Kanpur Train Accident? Bihar Police

ಖುಲಾಸೆಗೊಂಡ ಸುದ್ದಿಯನ್ನು ಯಾವ ವಾಹಿನಿಯೂ ಪ್ರಸಾರ ಮಾಡಲಿಲ್ಲ. ಹಿಂದೂತ್ವವಾದಿ ಕೇಸರಿ ಭಯೋತ್ಪಾದಕರ ಬಗ್ಗೆ ಒಂದು ಶಬ್ದವೂ ಬರೆಯಲೊಲ್ಲದ, ಸಮಾಜದ ಹಿತಕ್ಕಿಂತಲೂ ತಮ್ಮ ವಾಣಿಜ್ಯಾಸಕ್ತಿಗಳೇ ಮುಖ್ಯ ಎಂಬ ವ್ಯಾಪಾರಿ ಮನೋಭಾವದ ಇಂತಹ ಅವಕಾಶವಾದಿ, ಭಟ್ಟಂಗಿ ಮಾಧ್ಯಮಗಳಿರುವಾಗ ಜನರಿಗೆ ಪಕ್ಷಪಾತರಹಿತ, ನೈಜ ಸುದ್ದಿಗಳು ದೊರೆಯುವುದಾದರೂ ಹೇಗೆ?

ಮಾರ್ಚ್ 7, 8ರ 'ಭಯ ಬಿತ್ತುವ' ಸುದ್ದಿಗಳ ಹಿಂದೆ ಯಾರ ಕೈವಾಡ ಇತ್ತೆಂದು ನೋಡಹೊರಟರೆ ಕೊನೆಗೆ ಬಂದು ತಲಪುವುದೆ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚವಾಣ್ ಮತ್ತು ಆತನ ಗೃಹಮಂತ್ರಿ ಭೂಪೇಂದ್ರ ಸಿಂಗ್ ಕೊಟ್ಟ ಹೇಳಿಕೆಗಳಿಗೆ. ಮತದಾನದ ದಿನದಂದು ಪತ್ರಿಕಾಧರ್ಮಕ್ಕೆ ವಿರುದ್ಧವಾಗಿ ಇಂತಹ ಅನಧಿಕೃತ, ಊಹಾಪೋಹದ, ಜನರ ದಿಕ್ಕು ತಪ್ಪಿಸುವಂತಿದ್ದ ಸುದ್ದಿಗಳನ್ನು ಬಿತ್ತರಿಸುವುದರ ಹಿಂದೆ ಯಾರ ಕೈವಾಡ ಇರಬಹುದೆಂದು ಊಹಿಸುವುದು ಕಷ್ಟವಿಲ್ಲ. ಆದರೆ ಮತದಾನ ಮುಗಿದ ಬಳಿಕ ಸುದ್ದಿಗಳಲ್ಲಿ ಕೆಲವೊಂದು ಎಂದಿದೆ. ಹಾಗಾದರೆ ಮೊನ್ನೆಯ ಲಕ್ನೋ ಎನ್‌ಕೌಂಟರ್ ವೇಳೆ ಭದ್ರತಾ ಪಡೆಗಳು, ಹಿರಿಯ ಅಧಿಕಾರಿಗಳು ಲೈವ್ ಚಿತ್ರೀಕರಣಕ್ಕೆ ಅನುಮತಿ ಕೊಟ್ಟುದಾದರೂ ಹೇಗೆ, ಯಾಕೆ, ಯಾರ ಆದೇಶದ ಮೇರೆಗೆ? ಮಾರ್ಗದರ್ಶಿ ಸೂತ್ರಗಳ ಉದ್ದೇಶಪೂರ್ವಕ ಉಲ್ಲಂಘನೆಗೆ ಸಮರ್ಥನೆ ಏನು? ಇದರ ಹಿಂದೆ ಯಾರ ಅಭಯಹಸ್ತ ಇದೆ? ಮೋದಿ ಸರ್ಕಾರ ಶೂಟೌಟ್‌ಅನ್ನು ಲೈವ್ ತೋರಿಸಿದ ವಾಹಿನಿಗಳಿಗೆ ನೋಟಿಸ್ ಕಳುಹಿಸುವ ಬದಲು ಮೌನವಾಗಿರುವುದು ಸಂಶಯಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ.

ದೃಢೀಕರಿಸದ ಐಸಿಸ್ ನಂಟಿನ ಈ ಸುದ್ದಿಯ ಉದ್ದೇಶ ಇಸ್ಲಾಮಿಕ್ ಭಯೋತ್ಪಾದನೆಯ ಗುಮ್ಮವನ್ನು ಜನರ ಮುಂದಿಡುವುದಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಚುನಾವಣೆಗಳ ಸಂದರ್ಭದಲ್ಲಿ ಬಿತ್ತರವಾಗುವ ಇಂತಹ ಭಯೋತ್ಪಾದಕ ದಾಳಿಗಳ ಸುದ್ದಿಯನ್ನು ಕೇಳಿದಾಗ ಗುಜರಾತ್ ನೆನಪಾಗುವುದಿಲ್ಲವೆ? ಅಲ್ಲೂ ಭಾರಿ ನಿರ್ಣಾಯಕವಾಗಿದ್ದ ಚುನಾವಣೆಗಳ ಕಾಲದಲ್ಲಿ ಸೊಹ್ರಾಬುದ್ದೀನ್ ಶೇಕ್, ಇಶ್ರತ್ ಜಹಾನ್ ಮುಂತಾದ ಶಂಕಿತ ಉಗ್ರರು ಕಾಣಿಸಿಕೊಂಡಿದ್ದರು.

ಚುನಾವಣೆಗಳು ಮತ್ತು ಒಂದು ಭಟ್ಟಂಗಿ ಮಾಧ್ಯಮ

ಉತ್ತರ ಪ್ರದೇಶದ ಮೊದಲ ಹಂತದ ಚುನಾವಣೆಗಳ ಸಂದರ್ಭ. ಮತದಾನ ಮುಗಿಯುತ್ತಿದ್ದಂತೆ ಬಿಜೆಪಿಗೆ ಹಿನ್ನಡೆಯಾಗಿದೆ ಎಂಬ ರಹಸ್ಯ ವರ್ತಮಾನವೊಂದು ಪಕ್ಷದ ಮುಖ್ಯಸ್ಥರಿಗೆ ಬಂದು ತಲುಪಿದೆ. ಇದರ ನಂತರ ಇದ್ದಕ್ಕಿದ್ದಂತೆ ಹಿಂದಿ ದೈನಿಕ 'ದೈನಿಕ ಜಾಗರಣ್'ನಲ್ಲಿ ಚುನಾವಣೋತ್ತರ ಸಮೀಕ್ಷಾ ವರದಿಯೊಂದು ಪ್ರಕಟವಾಯಿತು. ಸದರಿ ಸಮೀಕ್ಷೆ ಬಿಜೆಪಿ ಅದರ ಎದುರಾಳಿಗಳನ್ನು ಹಿಂದಿಕ್ಕಿ ಮುನ್ನುಗ್ಗುತ್ತಿದೆ ಎಂದು ತಿಳಿಸಿತು. ನೀತಿಸಂಹಿತೆಯನ್ನು ಉಲ್ಲಂಘಿಸಿ ಪ್ರಕಟಿಸಲಾದ ಈ ಸಮೀಕ್ಷೆಯನ್ನು ಬಳಿಕ ಚುನಾವಣಾ ಆಯೋಗದ ಆದೇಶದಂತೆ ವಾಪಾಸ್ ಪಡೆಯಲಾಯಿತಾದರೂ ಅಷ್ಟರೊಳಗಾಗಿ ಅದನ್ನು ವಾಟ್ಸಪ್‌ನಂತಹ ಮೊಬೈಲ್ ಗುಂಪುಗಳ ಮುಖಾಂತರ ರಾಜ್ಯದಾದ್ಯಂತ ಪ್ರಚಾರ ಮಾಡಿ ಆಗಿತ್ತು. ಈಗ ತಿಳಿದುಬಂದಿರುವಂತೆ ಆ ಸಮೀಕ್ಷೆಯನ್ನು ಪತ್ರಿಕೆಗೆ ಕಳುಹಿಸಿದಾತ ಅದೇ ಪತ್ರಿಕೆಯ ವಾಣಿಜ್ಯ ವಿಭಾಗದ ಓರ್ವ ಹಿರಿಯ ಅಧಿಕಾರಿಯಾದ ತನ್ಮಯ್ ಶಂಕರ್. ಫೆಬ್ರವರಿ 10ರಂದು ಈತ 'rdiindia.com' ನಡೆಸಿದಂಥಾ ಈ ಸಮೀಕ್ಷೆಯನ್ನು ಪ್ರಕಟಿಸಿ ಎಂಬ ಸೂಚನೆಯೊಂದನ್ನು ಈಮೇಲ್ ಮೂಲಕ ವಿವಿಧ ಸಂಪಾದಕ ವಿಭಾಗಗಳಿಗೆ ಕಳುಹಿಸಿದ್ದ.

ತನ್ಮಯ್ ಶಂಕರ್‌ಗೆ ಸಮೀಕ್ಷೆಯ ವರದಿ ದೊರೆತಿರುವುದು ಸುನೀಲ್ ಆರ್ ಎಂಬಾತ ತನ್ನ ವಿಳಾಸ drsrdi@gmail.com ದಿಂದ ಕಳುಹಿಸಿದ ಈಮೇಲ್ ಮೂಲಕ. ಆರ್‌ಡಿಐ ಎಂದರೆ Resource Development International ಎಂದೂ ಆಗುತ್ತದೆ, Research and Development Initiative ಎಂದೂ ಆಗುತ್ತದೆ. ಮೊದಲಿನ ಸಂಸ್ಥೆಯ ಮುಖ್ಯಸ್ಥರು ತಾವು ಚುನಾವಣಾ ಸಮೀಕ್ಷೆಯ ವೃತ್ತಿಯಲ್ಲಿ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆದರೆ ಎರಡನೆಯ ಸಂಸ್ಥೆ ಈ ಹಿಂದೆ ಕೆಲವು ಚುನಾವಣಾ ಸಮೀಕ್ಷೆಗಳನ್ನು ನಡೆಸಿರುವುದಾಗಿ ತಿಳಿದುಬಂದಿದೆ. ಇದರ ಪ್ರವರ್ತಕನಾದ ದೇವೇಂದ್ರ ಕುಮಾರ್ ಈ ಹಿಂದೆ ಅರುಣ್ ಜೇಟ್ಲಿ, ವಸುಂಧರಾ ರಾಜೆ ಮುಂತಾದ ಬಿಜೆಪಿ ನಾಯಕರ ಜೊತೆ ಕೆಲಸ ಮಾಡಿದಾತ.

ಆದರೆ ಚುನಾವಣಾ ಆಯೋಗಕ್ಕೆ ನೀಡಿರುವುದು Resource Development International ಸಂಸ್ಥೆಯ ಹೆಸರನ್ನು! ತನ್ಮಯ್ ಶಂಕರ್ ಯಾವ ವಿಚಾರವನ್ನೂ ಬಾಯ್ಬಿಡುತ್ತಿಲ್ಲ. ಅಂದಹಾಗೆ ತನ್ಮಯ್‌ನ ಫೇಸ್‌ಬುಕ್ ಪುಟಗಳಲ್ಲಿ ಆತ ಆರೆಸ್ಸೆಸ್ ಶಾಖಾಗಳಲ್ಲಿ ಭಾಗವಹಿಸಿರುವ, ಗೋಲ್ವಾಲ್ಕರ್‌ಗೆ ನಮಸ್ಕರಿಸುವ ಚಿತ್ರಗಳಿದ್ದವು. ಆದರೆ ಈಗ ಹಠಾತ್ತಾಗಿ ಅವನ್ನೆಲ್ಲ ಡಿಲೀಟ್ ಮಾಡಲಾಗಿದೆ. ಅತ್ತ ದೇವೇಂದ್ರ ಕುಮಾರ್ ಕೂಡಾ ಸಮೀಕ್ಷೆ ವಿಚಾರ ತನಗೇನೂ ತಿಳಿದಿಲ್ಲ ಎನ್ನುತ್ತಿದ್ದಾನೆ. ಹಾಗಾದರೆ ಸುನೀಲ್ ಆರ್ ಯಾರು? 'ದೈನಿಕ್ ಜಾಗರಣ್'ನ ಮಾಲಿಕರಾದ ಸುಕ್ರಿತ್ ಮತ್ತು ಸಂಜಯ ಗುಪ್ತಾರಿಗೆ ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿ ಸಮೀಕ್ಷೆಯನ್ನು ಪ್ರಕಟಿಸುವಂತೆ ಹೇಳಿದವರಾರು?

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: *The Wire* ನಲ್ಲಿ ಊರ್ಮಿಳೇಶ್ ಮತ್ತು ಸಿದ್ಧಾರ್ಥ್ ವರದರಾಜನ್ ಲೇಖನಗಳು)

... ತೆರೆದುಕೊಂಡಿರಲಿಲ್ಲ. ಆದರೂ ಹಸ್ತ-ಶಿಲ್ಪ ...ದ್ದ ನನಗೆ ಅಲ್ಲಿ ಒಳಗೆ ಏನಿರಬಹುದು ಎಂಬ ...ಇತ್ತು; ಅದಕ್ಕಿಂತಲೂ ಹೆಚ್ಚು ಕುತೂಹಲ ...ನನಗೆ ಬಾಲ್ಯದಲ್ಲಿ ದರ್ಶನವಾಗದ ವಿಜಯನಾಥ ...ಅವರ ಸಿಡುಕು ಸ್ವಭಾವ ಒಂದು ...ಯಾಗಿ ಚಾಲ್ತಿಯಲ್ಲಿದ್ದ ಕಾರಣ ಹೆರಿಟೇಜ್ ... ಹತ್ತಿರ ಸುಳಿಯುವ ಧೈರ್ಯವೂ ...ಲ್ಲ. ಆದರೆ ವಿಜಯನಾಥ ಶೆಣೈ ಪರಿಚಯ ...ಅವರ ಆಫೀಸಿಗೆ ನೋಡಲು ಬಿಡುತ್ತಾರೆ ಎಂದು ... ಹಾಗಾಗಿ ಮುಂದೆ ನಾನು ದುಡಿಯುತ್ತಿದ್ದ ... ಬರುತ್ತಿದ್ದ ಸಂಪನ್ಮೂಲ ವ್ಯಕ್ತಿಗಳಿಗೆ ಹೆರಿಟೇಜ್ ... ತೋರಿಸುವ ನೆಪದಲ್ಲಿ ಅವರನ್ನು ಅಲ್ಲಿಗೆ ...ಒಂದು ಹೋಗಿ ಹೆರಿಟೇಜ್ ವಿಲೇಜ್ ...ರುವ ಸಂದರ್ಭದಲ್ಲಿ ನೋಡಿ ಆಸ್ವಾದಿಸುತ್ತಿದ್ದೆ. ...ರಿಟೇಜ್ ವಿಲೇಜ್ ಭೇಟಿ ಸಾಧ್ಯವಾಗಿಸಿದವರು ...ನಾತ ಹೇಳಿದ್ದ ಮತ್ತು ಮುಂದೆ ಸಹೋದ್ಯೋಗಿ ...ರ್ವ ವ್ಯಕ್ತಿ, ಅವರೇ ವಿಜಯನಾಥ ಶೆಣೈ ...ಡುಕು ಸ್ವಭಾವದ ಕತೆ ನನಗೆ ಹೇಳಿದ್ದವರು.) ...ರ್ಷಗಳಲ್ಲಿ ವಿಜಯನಾಥ ಶೆಣೈ ಅವರ ...ಸಿದ್ದು ಇಷ್ಟಗಳ ದರ್ಶನಭಾಗ್ಯ ಆಗಿತ್ತು. ... ಬಂದು ಯಾರೇ ಆಗಲಿ ಅವರು ... ವಿಲೇಜನ್ನು ನೋಡುವ ಸಂದರ್ಭ ಸಂಪೂರ್ಣ ಆಸಕ್ತಿ ತೋರದಿದ್ದರೆ ಶೆಣೈ ಅವರು ಸಿಟ್ಟಾಗುತ್ತಿದ್ದರು. ಅಲ್ಲಿ ಸಂಗ್ರಹಿಸಿದ ವಸ್ತುಗಳನ್ನು ತೀರಾ ಕ್ಯಾಶುಯಲ್ ಆಗಿ ಮುಟ್ಟಲು ಹೋದರೆ ಸಿಡುಕುತ್ತಿದ್ದರು. ಅದು ಅವರಿಗೆ ತಮ್ಮ ಕೆಲಸದ ಕುರಿತಾಗಿ ಇದ್ದ ಪ್ರೀತಿ, ನಿಷ್ಠೆ, ಅನುರಕ್ತಿ ಎಲ್ಲದರ ಪ್ರತಿಫಲನವಾಗಿತ್ತು.

ಕಳೆದ ಮಾರ್ಚಿನಲ್ಲಿ ಹೆರಿಟೇಜ್ ವಿಲೇಜ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೆಂಗಳೂರಿನಿಂದ ಹೆರಿಟೇಜ್ ವಿಲೇಜ್ ನೋಡಲು ಬಂದಿದ್ದ ಓರ್ವ ಪತ್ರಕರ್ತೆ ಅವರೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳಬೇಕು ಎಂದು ಹೇಳಿದಾಗ ತಾವು ಕೂತಲ್ಲೇ ವಿಜಯನಾಥ ಶೆಣೈ ಎದ್ದು ನಿಂತರು. ಆ ಪತ್ರಕರ್ತೆಯೊಂದಿಗೆ ಬಂದಿದ್ದ ಓರ್ವ ಆ ಪತ್ರಕರ್ತೆ ಮತ್ತು ವಿಜಯನಾಥ ಶೆಣೈ ಅವರ ಫೋಟೋ ತೆಗೆದ. ಆ ಹೊತ್ತಿಗೆ ವಿಜಯನಾಥ ಶೆಣೈ ಮತ್ತು ಆ ಪತ್ರಕರ್ತೆ ಸೂರ್ಯನಿಗೆ ಬೆನ್ನು ಮಾಡಿದ್ದ ಕಾರಣ ಆ ಫೋಟೋದಲ್ಲಿ ಅವರ ಮುಖ ಕಾಣದಾಯಿತು. ಅದನ್ನು ನೋಡಿದ ಪತ್ರಕರ್ತೆ "ಸರ್ ಒಂಚೂರು ಆ ಕಡೆ ಹೋಗಿ ಫೋಟೋ ತೆಗೆಸಿಕೊಳ್ಳೋಣ. ಇಲ್ಲಿ ಬಿಸಿಲಿನ ಕಾರಣ ಫೋಟೋ ಸರಿಯಾಗಿ ಬರುತ್ತಿಲ್ಲ" ಎಂದರು. ಆಗ ವಿಜಯನಾಥ ಶೆಣೈ "ಸೂರ್ಯನನ್ನು ಈ ಕಡೆ ತರಲಿಕ್ಕೆ ಆಗುವುದಿಲ್ಲವೇ?" ಎಂದು ಕೇಳಿ ಫೋಟೋಗೆ ಸೂಕ್ತವಾದ ಜಾಗದ ಕಡೆಗೆ ಪತ್ರಕರ್ತೆಯ ಸಹಾಯದಿಂದ ಹೆಜ್ಜೆ ಹಾಕಿದ್ದರು.

ಎಲ್ಲೆಲ್ಲೂ ಬಿದ್ದು ಹಾಳಾಗುತ್ತಿದ್ದ ಹೂಲ ಹಿಡಿಯುತ್ತಿದ್ದ ಸಂಗ್ರಹಯೋಗ್ಯ ವಸ್ತುಗಳನ್ನೆಲ್ಲ ಒಂದು ಕಡೆ ತಂದು ಮೌಲ್ಯಯುತ ಇತಿಹಾಸದ ತುಂಡುಗಳನ್ನು ಕಾಪಾಡಿದ ವಿಜಯನಾಥ ಶೆಣೈ ಸೂರ್ಯನನ್ನೂ ಎಲ್ಲಿಂದಲೋ ತಂದು ಇನ್ನೆಲ್ಲೋ ಜೋಡಿಸಬಹುದು ಎಂಬಂತೆ ಹೇಳಿದ್ದು ಅವರ ತಮಾಷೆಯ ಸ್ವಭಾವವೂ ಹೌದು ಎಂಬಂತಿತ್ತು ಮತ್ತು ಅವರ ಜೀವನದುದ್ದಕ್ಕೂ ಮಾಡಿದ ಅಸಾಮಾನ್ಯ ಕೆಲಸಗಳ ನಂತರ ಅವರಿಗೆ ತಮ್ಮ ಸಾಮರ್ಥ್ಯದ ಬಗ್ಗೆ ಇದ್ದ ನಂಬಿಕೆಯ ಹಾಗೆಯೂ ಇತ್ತು. ಅವರನ್ನು ಅವರ ಕೆಲಸವನ್ನು ಬಲ್ಲವರಿಗೆ ಅವರು ಸೂರ್ಯನನ್ನೇ ತಂದು ಬೇರೆ ಕಡೆ ಕೂರಿಸಿದ್ದರೆ ಆಶ್ಚರ್ಯ ಆಗುತ್ತಿರಲಿಲ್ಲ.

ಅಳಿವಿನ ವಿರುದ್ಧವೇ ಹೋರಾಟ ನಡೆಸಿದ ಜೀವ ಇಂದು ಅಳಿದಿದೆ ಎನ್ನುವುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಹೆರಿಟೇಜ್ ವಿಲೇಜಿನಲ್ಲಿ ಅವರು ಉಳಿಸಿದ ಇತಿಹಾಸದ ನಡುವೆ ಅವರು ಅಳಿಯದೆ ಉಳಿಯುತ್ತಾರೆ ಎಂಬುದು.

■ ಸಂವರ್ತ ಸಾಹಿಲ್

ಉತ್ತರ ಪ್ರದೇಶ ಚುನಾವಣೆ: ಮನೆಯೊಳಗೆ ಮನೆಯೊಡೆಯನಿ...

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಪಕ್ಷ ಬಿಡುಗಡೆ ಮಾಡಿದ ಚುನಾವಣಾ ಪ್ರಣಾಳಿಕೆಯ ಆರಂಭದ ಸಾಲುಗಳು ಹೀಗಿದ್ದವು: "ಶ್ರೀ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಉತ್ತಮ ಆಡಳಿತದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಗುರಿಯನ್ನು ಜಾರಿಗೊಳಿಸಲು ಪಕ್ಷವು ಕಾರ್ಯಪ್ರವೃತ್ತವಾಗಿದೆ". ಆದರೆ ಚುನಾವಣೆ ಮುಗಿದು ಬಿಜೆಪಿ ಪಕ್ಷ ಜಯಭೇರಿ ಬಾರಿಸಿದ್ದೂ ತಳೆಯದಾಗಿ ಮೋದಿ ನೇತೃತ್ವದಲ್ಲಿ ಮೇಲ್ಜಾತಿ-ಬಂಡವಾಳಶಾಹಿ ರಾಜಕಾರಣವು ಉದ್ಘಾಟನೆಯಾಗಿದೆ. 2017ರ ರಾಜ್ಯ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ದೈತ್ಯ ಬಲವನ್ನು ಗಳಿಸಿ ಜಯ ಸಾಧಿಸಿದೆ. ಆಗಲೇ ಬಿಜೆಪಿ ಪಕ್ಷದ ಈ ಅಭೂತಪೂರ್ವ ಗೆಲುವಿನ ಕುರಿತಾಗಿ ಮತ್ತು ಎಸ್‌ಪಿ, ಕಾಂಗ್ರೆಸ್, ಬಿಎಸ್‌ಪಿ ಪಕ್ಷಗಳ ಹೀನಾಯ ಸೋಲಿನ ಕುರಿತಾಗಿ ಚರ್ಚೆ, ವಿಶ್ಲೇಷಣೆಗಳು ಪ್ರಾರಂಭವಾಗಿವೆ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ವಿಶ್ಲೇಷಿಸಬೇಕಾದರೆ ನರೇಂದ್ರ ಮೋದಿ-ಅಮಿತ್ ಷಾ ಜೋಡಿ ಈ ದಿನಕ್ಕೆ, ಈ ಕ್ಷಣಕ್ಕೆ ಸಂಘ ಪರಿವಾರದ ಹಿಂದೂತ್ವದ ಅಜೆಂಡಾ ಮತ್ತು ಮೋದಿಯವರ ಬಂಡವಾಳ ಶಾಹಿ ಅಜೆಂಡಾಗಳಿಗೆ ಸಂಪೂರ್ಣವಾಗಿ ಪೂರಕವಾಗುವಂತಹ 'ರೆಟರಿಕ್' ರಾಜಕೀಯ ವಾತಾವರಣವನ್ನು ನಿರ್ಮಿಸಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಮೋದಿ-ಷಾ ಜೋಡಿ ಈ 'ರೆಟರಿಕ್' ರಾಜಕೀಯದ ಬೀಜಗಳನ್ನು ಬಿತ್ತು ಯಶಸ್ಸನ್ನು ಕಂಡರೆ ಲೋಕಸಭಾ ಚುನಾವಣೆಯ ಈ ಸಾಧನೆ ಆಕಸ್ಮಿಕವಲ್ಲ ಎಂದು 2017ರ ಉತ್ತರ ಪ್ರದೇಶದ ಚುನಾವಣೆ ಮತ್ತೊಮ್ಮೆ ಸಾಬೀತುಪಡಿಸಿದೆ. ಯಾವುದು ಜನಪ್ರಿಯ ಶೈಲಿ ಮತ್ತು ಅಜೆಂಡಾ ಎನ್ನುವುದನ್ನು, ಪ್ರಭುತ್ವ ಮತ್ತು ಪ್ರಜೆಗಳ ನಡುವಿನ ಸಂಬಂಧದ ಸ್ವರೂಪವನ್ನು ನಾನು ಮಾತ್ರ ನಿರ್ಧರಿಸಬಲ್ಲೆ ಎನ್ನುವಂತಹ ಅಲಿಖಿತ ನೀತಿಸಂಹಿತೆಯನ್ನು ಮೋದಿ ಇಂದು ನಮ್ಮ ಮುಂದಿಟ್ಟಿದ್ದಾರೆ. ಅಲ್ಲಿ ಆಯ್ಕೆಗೂ ಅವಕಾಶವಿಲ್ಲ. ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ಒಂದೇ ಉಳಿದಿರುವ ಮಾರ್ಗ!!

ಕೇಂದ್ರದಲ್ಲಿ ಅನೇಕ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವಿರುದ್ಧದ ಸಂಘ ಪರಿವಾರದ 'ರೆಟರಿಕ್' ರಾಜಕೀಯ ಭಾಷೆಯು 2014ರಲ್ಲಿ ನರೇಂದ್ರ ಮೋದಿ-ಷಾ ಜೋಡಿಗೆ ಅಧಿಕಾರದ ಹೆಬ್ಬಾಗಿಲನ್ನೇ ತೆರೆದರೆ 2017ರ ಉತ್ತರ ಪ್ರದೇಶದ ಚುನಾವಣೆಯ ಈ ಗೆಲುವು ಬಿಜೆಪಿ ಪಕ್ಷದ ಮತೀಯವಾದಿ-ಬಂಡವಾಳಶಾಹಿ ತತ್ವಗಳಿಗೆ ಗಟ್ಟಿಯಾದ ನೆಲೆಗಟ್ಟನ್ನು ತಂದುಕೊಟ್ಟಿದೆ. ಇದು ಒಂದು ಬಾರಿ ಸಂಭವಿಸುವ ಗ್ರಹಣದಂತಲ್ಲ, ಬದಲಾಗಿ ಪದೇಪದೇ ಮರುಕಳಿಸಬಹುದಾದ ಭೂಕಂಪದಂತೆ. ಬಿಜೆಪಿ ಪಕ್ಷಕ್ಕೆ ಯಾವ ಬೆಲೆ ತೆತ್ತಾದರೂ ಸರಿಯೇ ಅಧಿಕಾರವನ್ನು ಬಾಚಿಕೊಳ್ಳುವುದು ಒಂದಂಶದ ಪ್ರಣಾಳಿಕೆಗೆ ಮತ್ತು ಸದಾ ಸಾವಿರ ವರ್ಷಗಳ ಭರತಖಂಡದ, ಪಿತೃಭೂಮಿಯ ಇತಿಹಾಸ ಮಾತನಾಡುವ ಆರೆಸ್ಸೆಸ್‌ಗೆ ಮುಂದಿನ ನೂರು ವರ್ಷಗಳಲ್ಲಿ ಸಾವರ್ಕರ್ ಆದರ್ಶದ ಹಿಂದೂತ್ವ ಸಿದ್ಧಾಂತವನ್ನು ಯೋಜನಾಬದ್ಧವಾಗಿ ಜಾರಿಗೊಳಿಸುವ ಮುಖ್ಯ ಪ್ರಣಾಳಿಕೆಗೆ ಉತ್ತರ ಪ್ರದೇಶದ ಚುನಾವಣೆಯ ಈ ಗೆಲುವು ಒಂದು ಮುನ್ನುಡಿಯನ್ನು ಬರೆದಿದೆ. ಇದನ್ನು ಸಾಧಿಸಲು ಸಂಘ ಪರಿವಾರ ಇದುವರೆಗೂ ಬಳಸಿದ ರಾಜಕೀಯ-ಸಾಮಾಜಿಕ ತಂತ್ರಗಳಾವುವು ಮತ್ತು 2014ರ ನಂತರದ ಮೋದಿ-ಷಾ ಜೋಡಿಯ ರಾಜಕೀಯ-ಸಾಮಾಜಿಕ ಕಾರ್ಯತಂತ್ರಗಳಾವುವು ಹಾಗೂ ಮುಂದಿನ ಇಂಡಿಯಾ ರಾಜಕಾರಣದ ದಿಕ್ಸೂಚಿಯನ್ನು ಇವೆರಡರ ನಡುವಿನಿಂದಲೇ ಕಂಡುಕೊಳ್ಳಬೇಕೇ ಎನ್ನುವುದು ಇಂದು ನಮ್ಮ ಮುಂದಿರುವ ಯಕ್ಷಪ್ರಶ್ನೆ. ಹಿಂದೆಂದೂ ಇಂಡಿಯಾದ ರಾಜಕಾರಣ ಮತ್ತು ಪ್ರಜೆಗಳು ಈ ಮಾದರಿಯ ಅವಮಾನಕರವಾದ, ಆತ್ಮವಂಚನೆಯ ಆಯ್ಕೆಯ ಬಿಕ್ಕಟ್ಟನ್ನು ಎದುರಿಸಲಿರಲಿಲ್ಲ. ಆದರೆ ನಾವು ಆರಿಸಿದ್ದೇವೆ, ಆದಕ್ಕೇ ಅಳುತ್ತೇವೆ!!

ತಳಸಮುದಾಯಗಳಿಗೆ ರಾಜಕೀಯ-ಸಾಮಾಜಿಕ-ಶೈಕ್ಷಣಿಕವಾಗಿ ಸಬಲೀಕರಣಗೊಳಿಸುವ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಪರಿವರ್ತನೆಯ ಆಶಯಗಳನ್ನು ಸಂಪೂರ್ಣವಾಗಿ ಸೋಲಿಸಿರುವುದು ಈ ಬಾರಿಯ ಉತ್ತರ ಪ್ರದೇಶದ ಚುನಾವಣೆಯಲ್ಲಿನ ಬಿಜೆಪಿ ಗೆಲುವಿನ ಸಂದೇಶ ಎಂದು ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ. ಸೆಕ್ಯುಲರಿಸಂ ಅನ್ನು ಒಂದು ಓಲೈಕೆಯ (appeasement) ರಾಜಕಾರಣ ಎಂದು ಕಳೆದ ಎರಡು ದಶಕಗಳ ಕಾಲ ವಿರೋಧ ಪಕ್ಷಗಳ ವಿರುದ್ಧ ಪ್ರಗತಿಪರರ ವಿರುದ್ಧ ಅಪಪ್ರಚಾರ ಮಾಡಿದ ಸಂಘ ಪರಿವಾರ 2017ರ ಉತ್ತರ ಪ್ರದೇಶದ ಚುನಾವಣೆಯ ಮೂಲಕ ಸಾಮಾಜಿಕ ನ್ಯಾಯವು ಒಂದು ಜಾತೀಯತೆ ಎಂದು ಸಂದೇಶ ಕೊಡುತ್ತಿದೆ.

ಇದರ ಕುರಿತು ಬರೆಯುತ್ತಾ ರವಿಕುಮಾರ್ ಅವರು 'ಯಾದವ್ ಸಮುದಾಯದವರಲ್ಲದ ಇತರೇ ಹಿಂದುಳಿದ ಜಾತಿಯ ಅಭ್ಯರ್ಥಿಗಳನ್ನು ಎಚ್ಚರಿಕೆಯಿಂದ ಮತ್ತು ಲೆಕ್ಕಾಚಾರದಿಂದ ಆಯ್ಕೆ ಮಾಡಿದ ಮೋದಿ-ಶಾ ಜೋಡಿ ಆ ಮೂಲಕ ಈ ಇತರೇ ಹಿಂದುಳಿದ ಜಾತಿಗಳನ್ನು ಮೇಲ್ಜಾತಿಯ ಬ್ರಾಹ್ಮಣ-ಬನಿಯಾ ಗುಂಪಿಗೆ ಸೇರಿಸಿಬಿಟ್ಟಿತು. ಈ ಮೂಲಕ ಸಾಮಾಜಿಕ ಐಡೆಂಟಿಟಿ ರಾಜಕಾರಣವನ್ನು ಅಭಿವೃದ್ಧಿ ವಿರೋಧಿ ಎಂದು ಗೌಣಗೊಳಿಸಿತು. ಈ ಉತ್ತರ ಪ್ರದೇಶದ ಚುನಾವಣೆಯ ಮೂಲಕ ಬಿಜೆಪಿಯು ತಮ್ಮನ್ನು ಬೆಂಬಲಿಸುವವರೆಲ್ಲರೂ, ಜಾತಿಗಳೆಲ್ಲವೂ ಮೇಲ್ಜಾತಿಗಳು ಎನ್ನುವ ಸ್ಪಷ್ಟ ಸೋಷಿಯಲ್ ಇಂಜಿನಿಯರಿಂಗ್ ಅನ್ನು ನಮ್ಮ ಮುಂದಿಟ್ಟಿದೆ. ಈ ಮೋದಿ-ಶಾ ಜೋಡಿಯ ರಾಜಕಾರಣದ ತಂತ್ರಗಾರಿಕೆಯಲ್ಲಿ ಹಿಂದುಳಿದ ಸಮುದಾಯಗಳು ಕ್ರಮೇಣ ತಮ್ಮ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತ ವ್ಯಕ್ತಿಯೊಬ್ಬ ಕೇವಲ ತನ್ನ ವೈಯಕ್ತಿಕ ನೆಲೆಯಲ್ಲಿ ಮಾತ್ರ ಪ್ರಾಧಾನ್ಯತೆ ಪಡೆಯುತ್ತಾನೆ. ಇದನ್ನು ಸಂಘ ಪರಿವಾರ ಜಾತಿರಹಿತ ಸಮಾಜ ಎಂದು ಕರೆಯುತ್ತದೆ. ಬಿಜೆಪಿ ಪಕ್ಷವು ಇಂಡಿಯಾದ ರಾಜಕಾರಣದಲ್ಲಿ ಹೊಸ ಗಳಿಗೆಯ ಸ್ಥಿತಿಯನ್ನು ಪ್ರತಿನಿಧಿಸುತ್ತಿದೆ. ಈ ಸಾಂಸ್ಕೃತಿಕ-ಸಾಮಾಜಿಕ ಪರಿಸರವನ್ನು ಹೇಗೆ ಕೈವಶ ಮಾಡಿಕೊಳ್ಳಬೇಕೆಂಬುದನ್ನು ಇತರೇ ರಾಜಕೀಯ ಪಕ್ಷಗಳಿಗಿಂತ ಬಿಜೆಪಿ ಚೆನ್ನಾಗಿ ಅರಿತಿದೆ. ಕಾರ್ಪೋರೇಟ್ ಬಂಡವಾಳದ ಪರವಾಗಿ ಇಂಡಿಯಾವನ್ನೇ ಸನ್ನದ್ಧಗೊಳಿಸಲು ಮುಂದಾಗಿರುವ ಬಿಜೆಪಿ ಪಕ್ಷವು ಸಮುದಾಯದ ಕುರಿತಾದ ಒಮ್ಮತವನ್ನು,



ಸಾಮರಸ್ಯವನ್ನು ಒಡೆದು ಹಾಕುತ್ತ ಸಾಮಾಜಿಕ ನ್ಯಾಯವು ಒಂದು ಜಾತೀಯತೆ ಎಂದು ಬಿತ್ತುತ್ತಿದೆ" ಎಂದು ಹೇಳುತ್ತಾರೆ.

ಇಂದು ಓಬಿಸಿ ವರ್ಗಗಳಲ್ಲಿ ಯಾದವ ವರ್ಸಸ್ ಇತರೆ ಹಿಂದುಳಿದ ಸಮುದಾಯ ಮತ್ತು ದಲಿತರಲ್ಲಿ ಜಾಟವ್ ವರ್ಸಸ್ ಇತರೆ ದಲಿತ ಸಮುದಾಯ ಎನ್ನುವ ಒಂದು ಜಾತಿ ಭೇದವನ್ನೇ ಹುಟ್ಟು ಹಾಕಿದ ಮೋದಿ-ಶಾರ ಸೋಷಿಯಲ್ ಇಂಜಿನಿಯರಿಂಗ್‌ನಲ್ಲಿ ಉತ್ತರ ಪ್ರದೇಶದ ಇತರೆ ಹಿಂದುಳಿದ ಜಾತಿಗಳಾದ ಕುರ್ಮಿ, ನಿಶಾದ್, ಮೌರ್ಯ, ರಾಜಭಾರ್ ಸಮುದಾಯಗಳು, ಪಾಸಿ ದಲಿತ ಸಮುದಾಯಗಳು ತಮ್ಮ ಎಲ್ಲಾ ಬಗೆಯ ಐಡೆಂಟಿಟಿಯನ್ನು, ಸಾಂಸ್ಕೃತಿಕ ಚಹರೆಗಳನ್ನು ಕಳೆದುಕೊಂಡು ಮೇಲ್ಜಾತಿಗಳಾದ ಬ್ರಾಹ್ಮಣ-ಬನಿಯಾ ಗುಂಪಿನೊಳಗೆ ಸೇರ್ಪಡೆಯಾಗಿವೆ. ಪ್ರೊ. ಅಪೂರ್ವನಂದ್ ಅವರು "ಇದುವರೆಗೂ ಮಾಯಾವತಿಯವರ ಜಾತಿರಾಜಕಾರಣದಲ್ಲಿ ಜಾತವ್ ಸಮುದಾಯ ಕೇವಲ ಜಾತವ್‌ಗಳಾಗಿ ಉಳಿದಿದ್ದರು, ಅಖಿಲೇಶ್ ಅವರ ಜಾತಿರಾಜಕಾರಣದಲ್ಲಿ ಯಾದವರು ಕೇವಲ ಯಾದವರಾಗಿ ಉಳಿದಿದ್ದರು. ಆದರೆ ಇಂದು ಆರೆಸ್ಸೆಸ್ ರಾಜಕಾರಣದಲ್ಲಿ ಈ ಸಮುದಾಯಗಳಿಗೆ ವಿಸ್ತೃತವಾದ ಹಿಂದೂ ಧರ್ಮದೊಳಗೆ ಅವಕಾಶ ಕಲ್ಪಿಸಲಾಗಿದೆ. ಅಂದರೆ ಅಖಿಲೇಶ್ ಮತ್ತು ಮಾಯಾವತಿಯವರ ಗುರಿಯಿಲ್ಲದ, ಸಂಕುಚಿತವಾದ ರಾಜಕಾರಣವನ್ನು ಮೋದಿ-ಶಾ ಜೋಡಿಯ ಹಿಮ್ಮೊಗದ ಐಡೆಂಟಿಟಿ ರಾಜಕಾರಣವು ಈ ಸಮುದಾಯಗಳಿಗೆ ಇಡೀ ಯೋಜನೆಯನ್ನೇ ಪುನರೂಪಿಸಿ ಹಿಂದೂ ರಾಷ್ಟ್ರೀಯತೆಯ ಐಕ್ಯತೆಯ ಯೋಜನೆಯಲ್ಲಿ ಬಲುದೊಡ್ಡ ಪಾತ್ರವನ್ನೇ ನೀಡಿದೆ. ಈ ಬಾರಿಯ ಚುನಾವಣೆ ಪ್ರಚಾರದಲ್ಲಿ ಎಸ್‌ಪಿ-ಕಾಂಗ್ರೆಸ್, ಬಿಎಸ್‌ಪಿ ಪಕ್ಷಗಳು ಆರ್ಥಿಕ 'ರೆಟರಿಕ್' ಹೊರತುಪಡಿಸಿ ಬೇರೆ ವಿಷಯಗಳನ್ನು ಕೈಗೆತ್ತಿಕೊಳ್ಳಲೇ ಇಲ್ಲ. ಈ ಸೋ ಕಾಲ್ಡ್ ಸೆಕ್ಯುಲರ್ ಪಕ್ಷಗಳು ತಮ್ಮ ಸಾಂಸ್ಕೃತಿಕ ಪ್ರಣಾಳಿಕೆಗಳ ಕುರಿತಾಗಿ ಮಾತನಾಡಲೇ ಇಲ್ಲ. ಇದು ಉತ್ತರ ಪ್ರದೇಶದ ಜನರಲ್ಲಿ ಭ್ರಮನಿರಸನ ಹುಟ್ಟಿಸಿತು. ಏಕೆಂದರೆ ಆರ್ಥಿಕ ವಿಚಾರಕ್ಕೆ ಸಂಬಂಧಪಟ್ಟಂತೆ ಈ ಸೆಕ್ಯುಲರ್ ಪಕ್ಷಗಳಿಗೂ ಮತ್ತು ಬಿಜೆಪಿ ಪಕ್ಷದ ನಡುವೆ ಅಂತಹ ವ್ಯತ್ಯಾಸವೇ ಇಲ್ಲ. ಆಶ್ಚರ್ಯವೆಂದರೆ ಬಿಜೆಪಿ ಪಕ್ಷ ಮಾತ್ರ ಸಾಂಸ್ಕೃತಿಕ ಭಾಷೆಯನ್ನು ಮಾತನಾಡಿತು" ಎಂದು ಹೇಳುತ್ತಾರೆ.

ಇದನ್ನು ಅರಿಯಲು ನಾವು ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಅವರು ಐವತ್ತರ ದಶಕದಲ್ಲಿ ನೆಹರೂ ಅವರ ಆಡಳಿತಾವಧಿಯ ಕಾಲಘಟ್ಟದಲ್ಲಿ ಇಡೀ ದೇಶವೇ ಪ್ರಧಾನಿ ನೆಹರೂ ಅವರನ್ನು ಅಭಿಮಾನದಿಂದ ಪೂಜಿಸುತ್ತಿದ್ದಂತಹ ಅಂದಿನ ದಿನಗಳಲ್ಲಿ ವಂಶಾಡಳಿತದ ವಿರುದ್ಧ ಏಕಮಾದ್ವಿತೀಯವಾದ ರಾಜಕೀಯ ಅಧಿಕಾರದ ವಿರುದ್ಧ 'ಕಾಂಗ್ರೆಸ್ ವಿರೋಧಿ' ಆಂದೋಲನವನ್ನು ಕಟ್ಟುತ್ತಿದ್ದ ದಿನಗಳನ್ನು ನೆನಪಿಸಿಕೊಳ್ಳಬೇಕಾಗಿದೆ. 60ರ ದಶಕದಲ್ಲಿ ಲೋಹಿಯಾ ನೇತೃತ್ವದ ಈ ಕಾಂಗ್ರೆಸ್ ವಿರೋಧಿ ಆಂದೋಲನವು ಭಾರತದ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಇತರೇ ವಿರೋಧಿ ಪಕ್ಷಗಳು ಅಧಿಕಾರಕ್ಕೆ ಬರುವಂತಹ ವಾತಾವರಣ ನಿರ್ಮಿಸಿತ್ತು.

'ಕಾಂಗ್ರೆಸ್ ವಿರೋಧಿ?, ಜಾತಿ ವಿರೋಧಿ' ಚಳವಳಿಗಳು ಮತ್ತು ಸಿದ್ಧಾಂತಗಳು ರಾಮಮನೋಹರ ಲೋಹಿಯಾರವರ ರಾಜಕೀಯ ಮಾನಿಫೆಸ್ಟೋಗಳಾಗಿದ್ದವು. ಪರಿಣಾಮದ ಮಟ್ಟದಲ್ಲಿ ಗಾಂಧಿ, ಮಾರ್ಕ್ಸರವರ ಸಿದ್ಧಾಂತ, ಚಳವಳಿಗಿಂತ ಲೋಹಿಯಾರ ಈ ಸಿದ್ಧಾಂತಗಳು ಮತ್ತು ಚಳವಳಿಗಳು ತುಂಬಾ ಕಡಿಮೆಯಿದ್ದರೂ ಸಮಾಜವನ್ನು, ವ್ಯವಸ್ಥೆಯನ್ನು ತಳಮಟ್ಟದಲ್ಲಿ ಮುಟ್ಟುವಲ್ಲಿ ಪ್ರಭಾವಶಾಲಿಯಾಗಿತ್ತು. ಈ ಹಿನ್ನೆಲೆಯಲ್ಲಿ ರಾಮಮನೋಹರ ಲೋಹಿಯಾ ಅವರು ದೇಶದ ಬುದ್ಧಿಜೀವಿ ರಾಜಕಾರಣಿಯಾಗಿ ಜಾತಿಸಮಾಜದಲ್ಲಿ ಜಾತಿವಿನಾಶದ ಮೂಲಕ ತೀವ್ರವಾದ ಬದಲಾವಣೆಗಳನ್ನು ಆಶಿಸಿದ್ದರು. ಸೋಷಿಯಲಿಸ್ಟ್ ಚಿಂತಕರಾಗಿದ್ದ ಲೋಹಿಯಾ ರವರು ಇತರೇ ಹಿಂದುಳಿದ ಜಾತಿಗಳ ಸಾಮಾಜಿಕ ಮತ್ತು ರಾಜಕಾರಣವು ಪ್ರವರ್ಧಮಾನಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಲೋಹಿಯವಾದದ ಮೂಲಕ ಹಿಂದುಳಿದ ಜಾತಿಗಳು ಮತ್ತು ಸಾಮಾಜಿಕ ಐಡೆಂಟಿಟಿಯನ್ನು ಮುಖ್ಯ ಧಾರೆಯಲ್ಲಿ ಚರ್ಚೆಗೆ ಬರುವಂತೆ ಈ ಓಬಿಸಿ ರಾಜಕಾರಣವನ್ನು ರೂಪಿಸಲಾಗಿತ್ತು. ಮುಂದಿನ ದಶಕಗಳಲ್ಲಿ ರಾಮಮನೋಹರ ಲೋಹಿಯಾ ಅವರು ಬಳಕೆಗೆ ತಂದ, ಪ್ರತಿಪಾದಿಸಿದ ಸಂಯುಕ್ತ ಸರ್ಕಾರದ ಅಸ್ತಿತ್ವದಲ್ಲಿ ಓಬಿಸಿ ಮೆಜಾರಿಟಿಯಲ್ಲಿತ್ತು.

ಎಪ್ಪತ್ತರ ದಶಕದಲ್ಲಿ ಲೋಹಿಯಾವಾದಿಯಾಗಿ ಬಿಹಾರ್ ರಾಜ್ಯದಲ್ಲಿ ಕರ್ಪೂರಿ ಠಾಕೂರ್ ಅವರು, ಒಬ್ಬ ಕಾಂಗ್ರೆಸ್‌ನವರಾಗಿ ಕರ್ನಾಟಕದಲ್ಲಿ ದೇವರಾಜ್ ಅರಸು ಅವರು ಈ ಹಿಂದುಳಿದ ವರ್ಗಗಳ ಸಬಲೀಕರಣವನ್ನು ಐಡೆಂಟಿಟಿ ರಾಜಕಾರಣವನ್ನಾಗಿ ಪ್ರಯೋಗ ನಡೆಸಿ ಯಶಸ್ವಿಯಾದರು. ಆದರೆ ತೊಂಬತ್ತರ ದಶಕದ ವೇಳೆಗೆ ಅಡ್ವಾನಿಯವರ ರಥಯಾತ್ರೆ ತೀವ್ರವಾಗಿದ್ದಂತಹ ಸಂದರ್ಭದಲ್ಲಿ ಅದಕ್ಕೆ ಪರ್ಯಾಯವಾಗಿ ಓಬಿಸಿ ರಾಜಕಾರಣ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳತೊಡಗಿತು. ಈ 'ಕಮಂಡಲ'ಕ್ಕೆ ಪರ್ಯಾಯವಾಗಿ 'ಮಂಡಲ್ ರಾಜಕಾರಣ' ಪ್ರವರ್ಧಮಾನಕ್ಕೆ ಬರತೊಡಗಿತು. 'ಮಂಡಲ, ಮಂದಿರ ಮತ್ತು ಮಾರುಕಟ್ಟೆ' ಎನ್ನವುದು ತೊಂಬತ್ತರ ದಶಕದುದ್ದಕ್ಕೂ ರಾಷ್ಟ್ರೀಯ ಚರ್ಚೆಗಳಾಗಿ, ಧರ್ಮ ಮತ್ತು ಜಾತಿರಾಜಕಾರಣಕ್ಕೆ ಪೂರಕವಾದ ಅಸ್ತ್ರಗಳಾಗಿ ಬಳಕೆಗೊಂಡವು. ಇದರ ನೇರ ಫಲಾನುಭವಿ ಎಂದರೆ ಬಿಜೆಪಿ ಪಕ್ಷ. ಕಾಲಕಳೆದಂತೆ ಇದು ಮತ್ತಷ್ಟು ಸಂಕೀರ್ಣವಾಗತೊಡಗಿತು. ಈ ಮಂಡಲ್ ರಾಜಕಾರಣದಿಂದ ಹೊರಹೊಮ್ಮಿದ ಮುಲಾಯಂ ಯಾದವ್ ಮತ್ತು ಲಲೂ ಪ್ರಸಾದ ಯಾದವ್ ಅವರು ಕಳೆದ 25 ವರ್ಷಗಳಲ್ಲಿ ಯಶಸ್ವಿಯಾಗಿ ನಡೆಸಿದ ಹಿಂದುಳಿದ ವರ್ಗಗಳ ಐಡೆಂಟಿಟಿ ರಾಜಕಾರಣ ಇಂದು ಇತಿಹಾಸ ಸೇರಲಿದೆ. ಇವರ ಜಾತಿರಾಜಕಾರಣದ ಶಕ್ತಿ ಮತ್ತು ದೌರ್ಬಲ್ಯಗಳು ವ್ಯವಸ್ಥೆಯಲ್ಲಿ ಅಸಮಾನತೆಯನ್ನು ಸೃಷ್ಟಿಸಿರುವುದು ನಮ್ಮ ಕಣ್ಣ ಮುಂದಿದೆ. ಆದರೆ ಉತ್ತರ ಪ್ರದೇಶದ ಚುನಾವಣೆಯ ನಂತರ ಈ ಲಾಲೂ, ಮುಲಾಯಂ ಅವರ ಮಾದರಿಯ ಹಿಂದುಳಿದ ವರ್ಗಗಳ ಜಾತಿರಾಜಕಾರಣದ ಸ್ವರೂಪವು ತನ್ನ ಪ್ರಸ್ತುತತೆಯನ್ನೇ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಆದರೆ ಲಾಲೂ ಮತ್ತು ಮುಲಾಯಂ ಯಾದವ್ ಒಬ್ಬ ಸ್ಯೂಡೋ ಲೋಹಿಯಾವಾದಿಗಳಾಗಿದ್ದರು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಅತ್ಯಂತ ಖಚಿತವಾಗಿ ಜಾತಿವಿನಾಶದ ಆಶಯಗಳನ್ನೊಳಗೊ... ಲೋಹಿಯಾ ಅವರ ಓಬಿಸಿ ರಾಜಕಾರಣವನ್ನು ... ಮುಲಾಯಂ ಜೋಡಿಯು ಸಂಪೂರ್ಣ ... ಸಮುದಾಯದ ಜಾತಿರಾಜಕಾರಣದ, ... ರಾಜಕಾರಣದ ಮಟ್ಟಕ್ಕೆ ಹಾಳು ಮಾಡಿದರ... ಇಂದು ಮೋದಿ-ಶಾ ಜೋಡಿಗೆ 'ಜಾತಿರಹಿತ ರಾಜ... ಸೂಕ್ತ ವೇದಿಕೆಯನ್ನೇ ಕಲ್ಪಿಸಿಬಿಟ್ಟಿತು.

ಇಂದು ಸಾಮಾಜಿಕ ನ್ಯಾಯ ಎಂದರೆ ಅದು ಜಾ... ರಾಜಕಾರಣ ಎನ್ನುವ ಹೊಸ ಸಿದ್ಧಾಂತವನ್ನೇ ಅನುಷ... ಸುತ್ತಿರುವ ಮೋದಿ-ಶಾ ಜೋಡಿಯ ಈ ... ಅಖಿಲೇಶ್ ಮತ್ತು ಮಾಯಾವತಿಯವರ ... ಬೇಜವಾಬ್ದಾರಿ, ಎಳಸುತನದ ರಾಜಕಾರಣವು... ಕೊಡುಗೆಯನ್ನು ನೀಡಿದೆ. ವಿರೋಧ ಪಕ್ಷದಲ್ಲಿ... ಐದು ವರ್ಷಗಳ ಕಾಲ ಪಕ್ಷವನ್ನು ಸಂಘಟಿಸಿ ... ಜೀವ ತುಂಬಬೇಕಿದ್ದ ಮಾಯಾವತಿ ಸಂ... ನಿಷ್ಕ್ರಿಯರಾಗಿದ್ದು ಕೇವಲ ಚುನಾವಣೆಗೆ ಐದು ... ಮುಂಚೆ ಎಚ್ಚೆತ್ತು ತನ್ನ ಹಳೆದಾದ, ಎಲ್ಲಿಯೂ ಸ್ಫೂರ್ತಿ... ಹೊಸತನವನ್ನು ಹೊಮ್ಮಿಸದ 'ಬಹುಜನ-ಭಾಯಿ... ರಾಜಕಾರಣವನ್ನು ಯಾವುದೇ ಸಿದ್ಧತೆ ಇಲ್ಲದ... ಪ್ರಯೋಗಿಸಲು ಮುಂದಾಗಿ ಇಂದು ಸಂಪೂರ್ಣ... ಬದ್ದಿದ್ದಾರೆ. ದಲಿತ ಸಮುದಾಯದ ಸಬಲೀ... ರಾಜಕೀಯವಾಗಿ ಒಂದು ಪ್ರಬಲವಾದ ಹೋ... ವೇದಿಕೆಯಾಗಬಹುದಾಗಿದ್ದ ಸಾಮಾಜಿಕ ನ್ಯಾ... ಆಶಯಗಳು ಇಂದು ಮೋದಿ-ಶಾ ಅವರ ಪ್ರಭ... ಮೇಲ್ಜಾತಿ ರಾಜಕಾರಣಕ್ಕೆ ಸಿಕ್ಕಿ ನೆಲಕಚ್ಚಿದೆ. ಮಾಯಾ... ಯವರ ನಿರ್ಲಕ್ಷ ಮತ್ತು ಮುನ್ನೋಟಗಳಿಲ್ಲದ ದೃಷ್ಟಿ... ದಿಂದಾಗಿ ದಲಿತರು ಅಲ್ಲಿ ಜಾತಿಯ ಚದುರಂಗದ... ಬಿಜೆಪಿಯ ಹಿಂದೂತ್ವದ ಮತೀಯ ರಾಜಕಾ... ದಾಳಗಳಾಗಿ ಬಳಕೆಯಾಗಿದ್ದು ಮಾತ್ರ ದೊಡ್ಡ ... 2014ರ ಫಲಿತಾಂಶದಿಂದ ಮಾಯಾವತಿ... ಯಾವುದೇ ಪಾಠವನ್ನು ಕಲಿಯಲಿಲ್ಲ ಎನ್ನವುದನ್ನು... ಸಾಬೀತುಪಡಿಸುತ್ತದೆ. ಕಳೆದ ವರ್ಷ ರೋಹಿತ್ ವೇ... ಆತ್ಮಹತ್ಯೆ, ಗುಜರಾತ್‌ನ ಊನದಲ್ಲಿ ದಲಿತ ಯು... ಮೇಲೆ ನಡೆದ ಹಲ್ಲೆಗಳು, ದೇಶದ ಇತರೆ ಭಾ... ದಲಿತರ ಮೇಲೆ ನಡೆದ ಅತ್ಯಾಚಾರ ಮತ್ತು ಕೊ... ಉತ್ತರ ಪ್ರದೇಶದ ದಲಿತ ಸಮುದಾಯದ ಮ... ಮೇಲೆ ಯಾವುದೇ ಪರಿಣಾಮ ಬೀರಲಿಲ್ಲವೇ? ... ಕಾಂಗ್ರೆಸ್ ಮತ್ತು ಬಿಎಸ್‌ಪಿ ಪಕ್ಷಗಳಿಗೆ ಇದನ್ನು... ರಾಜಕೀಯ ಅನುಕೂಲವಾಗಿ ಪರಿವರ್ತನೆ ... ಹೋಗಿದ್ದು ಆ ಪಕ್ಷಗಳ ಅನೈತಿಕ ಅವಕಾ... ರಾಜಕಾರಣವನ್ನು ಬಿಚ್ಚಿಡುತ್ತದೆ.

ಉತ್ತರ ಪ್ರದೇಶದ ಸಂಕೀರ್ಣವಾದ ಜಾತಿರಾಜ... ಮೇಲಾಟದಲ್ಲಿ ತಮ್ಮ ಕುಟುಂಬ ರಾಜಕಾರಣದ ಪ... ಭ್ರಷ್ಟ ರಾಜಕಾರಣದ ಮೂಲಕ ಮೋದಿ-ಶಾ ಜ... ಸೂಕ್ತವಾದ, ವಿಫುಲವಾದ ಅವಕಾಶಗಳನ್ನು ಕಲ್ಪಿ... ಎಸ್‌ಪಿ ಪಕ್ಷದ ಅಖಿಲೇಶ್ ಇಂದು ಬೇಯುವ ಪ... ದ್ದಾರೆ. ಅಲ್ಲದೆ ಉದ್ರೇಕದ, ಹಗೆತನದ ರಾಜಕಾರ... ಅಲ್ಲಿನ ಮತದಾರ ಸಂಪೂರ್ಣವಾಗಿ ಬೇಸತ್ತಿದ್ದಾ... ಹಿನ್ನೆಲೆಯಲ್ಲಿ ತನ್ನ ಕುಟುಂಬದ ಗೂಂಡಾ ರಾಜ... ಬೇಸತ್ತು ಹೊರಬಂದಂತೆ ಕಂಡುಬರುವ ಅಖಿಲೇಶ್... ಲೋಹಿಯಾ ಅವರ ಹಿಂದುಳಿದ ರಾಜಕಾರಣ... ವಿನಾಶದ ಪರಿಕಲ್ಪನೆಯನ್ನು ಕೆಳಮಟ್ಟದಿಂದ ಅ... ಕೊಳ್ಳಲು ಪ್ರಯತ್ನಿಸಿದರೂ ಸಾಕಾಗಿತ್ತು ಎಸ್‌ಪಿ... ಇಂದಿನ ದುರಂತ ಸ್ಥಿತಿ ಬಂದೊದಗುತ್ತಿರಲಿಲ್ಲ. ... ಸಾಮಾಜಿಕ ಚಾಂಪಿಯನ್‌ಗಳೆಂದು ಕರೆದುಕೊ... ಮಾಯಾವತಿ ಮತ್ತು ಅಖಿಲೇಶ್ ಯಾದವ್‌ಗ... ಕಣ್ಣಳತೆ ಯಲ್ಲಿ ಮೋದಿ-ಶಾ ಜೋಡಿಯು ಉತ್ತರ ಪ... ದಲ್ಲಿ ಅಂಬೇಡ್ಕರ್- ಲೋಹಿಯಾ ಅವರ ಕನಸಿನ ಸಾ... ನ್ಯಾಯದ ಎಲ್ಲಾ ಆಶಯಗಳನ್ನು ಕಳಚಿಡುತ್ತ... ಅಖಾಡವನ್ನೇ ಬ್ರಾಹ್ಮಣ್ಯ-ಫ್ಯೂಡಲಿಸಂನ ಆಡೊ... ವನ್ನಾಗಿಸಿರುವುದು ಸಹ ಅರಿವಿಗೆ ಬಂದಂತಿಲ್ಲ. ... ರಾಜ್ಯದ ಜಾತಿರಾಜಕಾರಣದ ಎಲ್ಲಾ ವಲಯ... ಮೋದಿ-ಶಾ ಜೋಡಿ ಹೈಜಾಕ್ ಮಾಡಿರುವ ... ಸ್ಥಿತಿಗೆ ಮಾಯಾವತಿ ಮತ್ತು ಅಖಿಲೇಶ್ ಯಾದವ್ ... ಪ್ರಮುಖ ಕಾರಣ.

2014ರ ಲೋಕಸಭಾ ಚುನಾವಣೆಯಂತೆ ಈ ... ಚುನಾವಣೆಯಲ್ಲಿಯೂ ಬಿಜೆಪಿ ಪಕ್ಷ ಒಬ್ಬ ಮುಸ್ಲಿ... ಟಿಕೆಟ್ ನೀಡಿಲ್ಲ, ಮೋದಿ 'ಖಬರಸ್ತಾನ ವರ್ಸಸ್ ... ಎಂದು ಉದ್ರೇಕಕಾರಿಯಾಗಿ ಮಾತನಾಡುತ್ತ ಧ... ಆಧಾರದ ಮೇಲೆ ಧ್ರುವೀಕರಣ ಮಾಡುತ್ತಿದ್ದರೆ, ... ಶಾ ವಿರೋಧ ಪಕ್ಷಗಳನ್ನು ಭಯೋತ್ಪಾದಕ ... ಹೋಲಿಸಿದರು. ಮತ್ತೊಂದೆಡೆ ಯೋಗಿ ಆದಿ... ಮುಸ್ಲಿಂರ ವಿರುದ್ಧ ಬೆಂಕಿಯುಗುಳುತ್ತಿದ್ದರು. ಆದ... ಪಕ್ಷಕ್ಕೆ ಸುಮಾರು ಶೇಕಡಾ 15 ಪ್ರಮಾಣದಲ್ಲಿ...

▶▶

ವ್ಯಾಘ್ರನ ಕರೆ

ದರ್ಬಾರಿ ಮತ್ತು ಶಕ್ಕು

ಇಂಗ್ಲಿಷ್ ಮೂಲ: ಆರ್ಥರ್ ಫ್ರೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ

...ನೊಮ್ಮೆ ಗೊಂಡಾ ಮತ್ತು ಜಬಲ್ಪುರದ ಮಧ್ಯದ ...ಗೇಜ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ಆಗ ...ದ ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ಪ್ರಿಯ ...ಟೆಯ ತಾಣಗಳ ವಿವರಗಳನ್ನು ನನಗೆ ನೀಡಿದ್ದರು. ...ವಾರಾಂತ್ಯದ ರಜವನ್ನು ಹೊಂದಿಸಿಕೊಂಡು ...ನಿಂದ ರೈಲಿನಲ್ಲಿ ಲಮ್ಟಾ ನಿಲ್ದಾಣವನ್ನು ತಲುಪಿ ... ಕಾಲುನಡಿಗೆಯಲ್ಲಿ ಏಳು ಮೈಲು ದೂರವಿದ್ದ ... ಎಂಬ ಹಳ್ಳಿಯನ್ನು ತಲುಪಿದೆ. ಊರಿನಿಂದ ...ಡಿ ದೂರವಿದ್ದ ಒಂದುದೊಡ್ಡ ಮರದ ಬಳಿ ...ಬಾಲುವಿನ ಜೊತೆ ನನ್ನ ಕ್ಯಾಂಪ್ ಹೂಡಿದೆ. ...ಪ್ರಮುಖ ಜಿರ್ರೋ ನನ್ನನ್ನು ನೋಡಲು ಬಂದ. ...ಗಮನ ಅವನಿಗೆ ಇಷ್ಟವಾದಂತಿರಲಿಲ್ಲ. ನನಗೆ ... ಸೀಮಿತ ಮಾಹಿತಿಗಳ ಪ್ರಕಾರ ಹೆಣ್ಣು ...ಂದು ಮಧ್ಯರಾತ್ರಿಯಲ್ಲಿ ಊರಿನಲ್ಲಿ ಹಾಯ್ದು ...ತ್ತಿದ್ದರೂ ಇಲ್ಲಿಯವರೆಗೆ ಯಾರಿಗೂ ತೊಂದರೆ ...ಲ್ಲ. ಇಡೀ ರಾತ್ರಿ ಟೆಂಟ್ ಕೂಡ ಇಲ್ಲದೆ ಬೆಂಕಿ ...ಡು ಆ ಮರದ ಕೆಳಗೆ ಹುಲಿಯ ಸ್ನೇಹದಲ್ಲಿ ...ಬೇಕೆಂಬ ಯೋಚನೆಯಿಂದ ನನಗೆ ಒಳಗೊಳಗೇ ...ದರೂ ತೋರಿಸಿಕೊಳ್ಳಲಿಲ್ಲ!

...ಬೇಟೆಗಾರರು ಯಶಸ್ವಿಯಾಗಬೇಕಾದರೆ ಹಳ್ಳಿಗರ ... ಮೊದಲು ಗೆಲ್ಲಬೇಕಾಗಿತ್ತು. ನಾನು ಜಿಂಕೆಯ ... ಆಸೆ ತೋರಿಸಿ ಜಿರ್ರೋನಿಗೆ ಕೆಲವು ಅಟ್ಟಾಳುಗಳ ...ಡಲು ಕೇಳಿದೆ. ಹೀಗೆ ಸೋವುಗೆ ಮಾಡುವಾಗ ...ದುರಾಗಬಹುದೇ ಎನ್ನುವ ಆಸೆ ನನ್ನದಾಗಿತ್ತು. ... ಮೂವತ್ತು ಜನರೊಂದಿಗೆ ಹತ್ತಿರದ ಬೆಟ್ಟದಲ್ಲಿ ...ಗೆ ಮಾಡುವಾಗ ಸುಂದರ ಸಾಂಬಾರ್ ...ಂದನ್ನು ಬೇಟೆಯಾಡಿದೆ. ಸುಮಾರು 300 ಕಿಲೋ ...ಅದರ ಮಾಂಸ ಊರಿನವರಿಗೆಲ್ಲಾ ಸಾಕಾಗುವಷ್ಟಿತ್ತು. ...ಂಸದ ಹಂಚಿಕೆಯಾಗಿ ಊರಜನರೆಲ್ಲಾ ...ಲೂ ಇಬ್ಬರು ಬುಡಕಟ್ಟು ಜನಾಂಗದವರು ...ದ್ದರು. ಅವರು ಹತ್ತಿರದಲ್ಲೇ ಒಂದು ದೈತ್ಯ ...ಣವನ್ನು ನೋಡಿದ್ದರೆಂಬ ಮಾಹಿತಿ ನನ್ನ ಆಸಕ್ತಿ ...ವರನ್ನು ಕೂರಿಸಿಕೊಂಡೆ. ಹೀಗೆ ಬೈಗ ಜನಾಂಗದ ... ಮತ್ತು ಗೊಂಡ್ ಜನಾಂಗದ ಶಕ್ಕು ಅವರ ...ವಾಯಿತು. ಸಣ್ಣ ಆಕೃತಿಯ ಇಬ್ಬರಲ್ಲಿ ಶಕ್ಕು ...ಂತೆ ಕಂಡರೂ ದರ್ಬಾರಿಯೇ ಹಿರಿಯನಾಗಿದ್ದು ...ವೂ ಆಗಿದ್ದ.

...ಬರ್ ಚಳಿಯ ಆವತ್ತಿನ ರಾತ್ರಿಯನ್ನು ...ದು ಕಷ್ಟವಾಯಿತು. ಪಕ್ಕದಲ್ಲಿ ಬಾಲು ಗೊರಕೆ ...ತ್ತಿದ್ದ! ಜಿಂಕೆಯ ಚರ್ಮವನ್ನು ಬಿಡಿಸಿ ಎತ್ತರದಲ್ಲಿ ...ದಕ್ಕೆ ಕಟ್ಟಲಾಗಿತ್ತು. ಬೆಂಕಿಯ ಬೆಳಕಿನಲ್ಲಿ ಅದರ ...ಯಾನಕ ದೆವ್ವದಂತೆ ಕಾಣುತ್ತಿತ್ತು. ಮಧ್ಯಭಾರತ ... ಹುಲಿಗಳಿಗಾಗಿ ಪ್ರಸಿದ್ಧಿಯಾಗಿತ್ತು. ಊರಿನಲ್ಲಿ ... ಹುಲಿ ನನ್ನ ಬಳಿಬಂದು, ಹೇಗಿದ್ದೀಯಾ ...ಳಿ ಇಲಿಯಂತೆ ನನ್ನನ್ನು ಹೊತ್ತುಕೊಂಡು ...ದೆಂಬ ಭಯದಲ್ಲಿ ನಿದ್ದೆಯಿಲ್ಲದೆ ಹೊರಳಾಡು ...ವಿನ ಗೊರಕೆಯ ಮಧ್ಯೆ ಆಗಾಗ ಸಾಂಬಾರ್ ... ಕೂಗು ಮತ್ತು ಚಿರತೆಯೊಂದರ ಘರ್ಜನೆ ...ತ್ತು!

... ಬೇಗನೆ ದರ್ಬಾರಿ ಮತ್ತು ಶಕ್ಕುವಿನೊಡಗೂಡಿ ...ಕಡೆ ಹೋದೆ. ಹಳ್ಳಿಯ ಹತ್ತಿರದಲ್ಲಿ ಹೆಣ್ಣು ... ಹೆಜ್ಜೆಗುರುತುಗಳು ಕಂಡುಬಂದವು. ಮುಂದೆ ...ಳು ದಟ್ಟಕಾಡು ಎದುರಾಯಿತು. ಮಧ್ಯೆಮಧ್ಯೆ ...ಮೆಳೆಗಳು ಕಾಡುಕೋಣಕ್ಕೆ ಸ್ವರ್ಗಸದೃಶವಾಗಿತ್ತು,

ಇಲ್ಲೇ ಹಿಂದಿನ ಸಾಯಂಕಾಲ ಕಾಡುಕೋಣವನ್ನು ನೋಡಿದ್ದಾಗಿ ನನ್ನ ಮಾರ್ಗದರ್ಶಕರು ಹೇಳಿದರು. ನಾವು ಅದರ ಹೆಜ್ಜೆಗುರುತುಗಳನ್ನು ಹಿಂಬಾಲಿಸದೆ ಹತ್ತಿರದ ಹಳ್ಳವೊಂದರ ಬಳಿ ಹೋದೆವು. ಅಲ್ಲಲ್ಲಿ ಒಣಗಿಹೋಗಿದ್ದ ಅದೇ ಜಲಮಾರ್ಗವನ್ನು ಅನುಸರಿಸಿಕೊಂಡು ನೀರು ಇರುವಲ್ಲೆಲ್ಲಾ ಹೆಜ್ಜೆಗುರುತುಗಳನ್ನು ಹುಡುಕಿದೆವು. ಕೊನೆಗೆ ಒಂದು ಹಳ್ಳದ ಬಳಿ ಊರಿನ ಕೋಣದ ಹೆಜ್ಜೆಗಳಿಗಿಂತ ಸ್ವಲ್ಪ ದೊಡ್ಡದಾದ ಗುರುತುಗಳು ಕಂಡವು. ಕಾಡುಕೋಣ ಹಸು ಎಮ್ಮೆಗಳ ಜಾತಿಯ ಪ್ರಾಣಿಗಳಲ್ಲೇ ಅತಿದೊಡ್ಡದೆಂದು ತಿಳಿದಿದ್ದ ನನಗೆ ಅಷ್ಟು ಸಣ್ಣ ಹೆಜ್ಜೆಗುರುತುಗಳನ್ನು ನೋಡಿ ಆಶ್ಚರ್ಯವಾಯಿತು. ಪ್ರಾಣಿಶಾಸ್ತ್ರಜ್ಞರ ಪ್ರಕಾರ ಭುಜದ ಅಗಲ ಆರೇಳು ಅಡಿಗಳು ಇರುವ ಇಂತಹ ದೈತ್ಯ ಪ್ರಾಣಿಗಳ ಪಾದ ಸಣ್ಣದಾಗಿರುವುದಕ್ಕೆ ಕಾರಣ ಗುಡ್ಡಬೆಟ್ಟಗಳಲ್ಲಿ ಸರಾಗವಾಗಿ ತಿರುಗಾಡಲು ಅನುಕೂಲ ಮಾಡಿಕೊಡುವುದಾಗಿತ್ತು. ದರ್ಬಾರಿ ಮತ್ತು ಶಕ್ಕುವಿಗೆ ಇದು ಕಾಡುಕೋಣದ ಹೆಜ್ಜೆಗುರುತು ಎನ್ನುವುದರಲ್ಲಿ ಅನುಮಾನವಿರಲಿಲ್ಲ.

ನಾವು ಹೆಜ್ಜೆಗುರುತುಗಳನ್ನು ಹಿಂಬಾಲಿಸಿಕೊಂಡು ಬೆಟ್ಟದ ಬುಡದಲ್ಲಿನ ದಟ್ಟ ಕಾನನಕ್ಕೆ ಹೋದೆವು. ಅಲ್ಲಿನ ನೆಲ ಗಟ್ಟಿಯಾಗಿದ್ದು ಹೆಜ್ಜೆಗುರುತುಗಳು ಸ್ಪಷ್ಟವಾಗಿ ಮೂಡಿರಲಿಲ್ಲ. ಇಂತಹ ಸ್ಥಳದಲ್ಲೂ ನೆಲದ ಮೇಲೆ ಪುಡಿಯಾದ ಎಲೆ, ಬಾಗಿದ ಹುಲ್ಲು, ಮುರಿದ ರೆಂಬೆಗಳು, ಸರಿದಾಡಿದ





ಕಲ್ಲುಗಳು, ಪೊದೆಗಳಲ್ಲಿ ಬಾಗಿದ ಎಲೆಗಳು ಮುಂತಾದವುಗಳ ಮೂಲಕ ಕಾಡುಕೋಣದ ಜಾಡು ಹಿಡಿಯುತ್ತಿದ್ದ ದರ್ಬಾರಿ ಮತ್ತು ಶಕ್ಕುರ ಕಲೆಗಾರಿಕೆಗೆ ನಾನು ಮೂಕವಿಸ್ಮಿತನಾಗಿದ್ದೆ. ಅನುಮಾನಗಳಿದ್ದಾಗ ಇಬ್ಬರೂ ಬೇರೆಬೇರೆ ದಾರಿಗಳಲ್ಲಿ ಹೋಗಿ ಕುರುಹುಗಳನ್ನು ಹುಡುಕುತ್ತಿದ್ದರು. ನಾವೆಲ್ಲಾ ಸಂಜ್ಞೆಗಳ ಮೂಲಕ ಮಾತನಾಡುತ್ತಾ ಮೌನವಾಗಿ ಚಲಿಸುತ್ತಿದ್ದೆವು. ಬರಿಗಾಲುಗಳಲ್ಲಿ ನಡೆಯುತ್ತಿದ್ದ ಅವರಿಬ್ಬರೂ ಸದ್ದಿಲ್ಲದ ಬೆಕ್ಕಿನ ಹೆಜ್ಜೆಯನ್ನಿಡುತ್ತಿದ್ದರೆ, ಬೂಟುಕಾಲಿನಲ್ಲಿ ನಾನು ಪರದಾಡುತ್ತಿದ್ದೆ. ಕೊನೆಗೆ ದೊಡ್ಡ ಸಗಣಿಯ ರಾಶಿಯೊಂದು ನಮಗೆ ಕಂಡುಬಂದಿತು. ದರ್ಬಾರಿ ತಕ್ಷಣ ಅದರಲ್ಲಿ ತನ್ನ ಕಾಲುಬೆರಳನ್ನು ತೂರಿಸಿ ಹೆಮ್ಮೆಯ ನಗೆನಕ್ಕ!



ಬಿಸಿಯಾಗಿದ್ದ ಸಗಣಿ ಕಾಡುಕೋಣ ಹತ್ತಿರದಲ್ಲೇ ಇರುವ ಸೂಚನೆ ನೀಡಿತ್ತು. ದರ್ಬಾರಿ ನನಗೆ ಬಂದೂಕನ್ನು ಸಿದ್ಧಮಾಡಿಕೊಳ್ಳಲು ಸೂಚಿಸಿದ.

ಅಷ್ಟರಲ್ಲಿ ನಾವು ಬೆಟ್ಟವನ್ನು ಏರಿ ಚಿಕ್ಕ ಸಮತಟ್ಟಾದ ಸ್ಥಳಕ್ಕೆ ಬಂದಿದ್ದೆವು. ಸುತ್ತಲಿನ ಪರಿಸರವನ್ನು ಗಮನಿಸುತ್ತಿರುವಾಗ ಎದುರಿನಿಂದ ಎಲೆಗಳನ್ನು ಮುರಿದ ಸದ್ದು ಕೇಳಿಸಿತು. ನಾವು ನಿಧಾನವಾಗಿ ಆ ಪೊದೆಯ ಹತ್ತಿರಕ್ಕೆ ನಡೆದೆವು. ಪ್ರಾಣಿಯೊಂದು ಎಲೆಯನ್ನು ಮೂಸುವ ಶಬ್ದ ಪೊದೆಯೊಳಗಿನಿಂದ ಬರುತ್ತಿತ್ತು. ನನ್ನ ಸ್ನೇಹಿತರು ಮರವೊಂದರ ಮರೆಯಲ್ಲಿ ಅಡಗಿಕೊಂಡರು. ಕೆಲವೇ ಕ್ಷಣಗಳಲ್ಲಿ ದೈತ್ಯಗಾತ್ರದ ಕಾಡುಕೋಣವೊಂದು ಮರೆಯಿಂದ ಹೊರಬಂದಿತು. ಜೀವನದಲ್ಲಿ ಪ್ರಥಮ ಬಾರಿಗೆ ಇದರ ಗಾತ್ರವನ್ನು ನೋಡಿದ್ದ ನಾನು ಗುಂಡುಹಾರಿಸಲು ಭಯಪಟ್ಟೆ. ಇದು ದನಕರುಗಳ ಜಾತಿಯಲ್ಲೇ ಅದ್ಭುತ ಪ್ರಾಣಿ ಎನ್ನುವ ತಜ್ಞರ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಸಹಮತ ಮೂಡಿತು.

ಆಗ ಜೀವನದಲ್ಲಿ ಮಾಡಿರಬಹುದಾದ ಅತ್ಯಂತ ಮೂರ್ಖ ಕೆಲಸಗಳಲ್ಲೊಂದನ್ನು ಮಾಡಿದೆ. ಕಾಡುಕೋಣ ಕೇವಲ 50 ಅಡಿ ದೂರವಿದ್ದು ನನ್ನ ಕಡೆಯೇ ದೃಷ್ಟಿಯನ್ನು ನೆಟ್ಟಿತ್ತು. ನನ್ನ ಡಬಲ್‌ಬ್ಯಾರಲ್ ಬಂದೂಕಿನಿಂದ ಅದರ ಭುಜಕ್ಕೆ ಗುರಿಹಿಡಿದು ಟ್ರಿಗರ್ ಚಲಾಯಿಸಿದೆ. ನನ್ನೆದುರಿಗೆ ಭಾರೀ ಹೊಗೆಯೆದ್ದು ನಾನು ಹಿಂದಕ್ಕೆ ನೂಕಲ್ಪಟ್ಟೆ. ಕಾಡುಕೋಣ ಒಮ್ಮೆ ಗುಟುರು ಹಾಕಿ ಅಲ್ಲಿಂದ ಮಾಯವಾಗಿತ್ತು. ಸುಧಾರಿಸಿಕೊಂಡು ಬಂದೂಕನ್ನು ಪರೀಕ್ಷಿಸಿದಾಗ ನಾನು ಎರಡೂ ಗುಂಡುಗಳನ್ನು ಒಟ್ಟಿಗೇ ಹಾರಿಸಿದ್ದು ಗಮನಕ್ಕೆ ಬಂತು. ಎರಡು ಗುಂಡೇಟನ್ನು ತಿಂದ ಕಾಡುಕೋಣ ಸತ್ತಿರಲೇಬೇಕು ಎಂದು ನನಗೆ ಖುಷಿಯಾಯಿತು.

ಕೆಲವು ನಿಮಿಷಗಳ ನಂತರ ನಾವು ಹುಡುಕಾಡಿದಾಗ ಒಂದು ಹನಿ ರಕ್ತ ಕೂಡ ಕಾಣದಿರುವುದನ್ನು ನೋಡಿ ನನಗೆ ನಾಚಿಕೆ ಮತ್ತು ನಿರಾಸೆಯಾಯಿತು. ಮೊದಲನೆ ಗುಂಡು ಬ್ಯಾರಲ್‌ನಿಂದ ಹೋಗುವ ಮೊದಲೇ ನಾನು ಮತ್ತೊಂದು ಬೆರಳಿನಿಂದ ಎರಡನೇ ಟ್ರಿಗರ್ ಒತ್ತಿರುವ ಸಾಧ್ಯತೆ ಇತ್ತು. ಆಗ ಬಂದೂಕು ಅಲುಗಾಡಿ ಎರಡೂ ಗುಂಡುಗಳೂ ಗಾಳಿಯಲ್ಲಿ ಹಾರಿಹೋಗಿರಬೇಕು ಎನ್ನುವುದು ಮಾತ್ರ ನನಗೆ ಆಗ ಹೊಳೆದ ವಿವರಣೆಯಾಗಿತ್ತು.

ದರ್ಬಾರಿ ಮತ್ತು ಶಕ್ಕು ಪ್ರಕಾರ ಕಾಡುಕೋಣ ಈಗಾಗಲೇ ಮೂರು ಮೈಲು ದೂರ ಹೋಗಿರಬಹುದಾದ್ದರಿಂದ ಮತ್ತೆ ಆ ದಿನವೇ ಹುಡುಕಲು ಸಾಧ್ಯವಿರಲಿಲ್ಲ. ಜೊತೆಗೆ ಒಮ್ಮೆ ಎದುರಿಸಿದ ಆಘಾತದಿಂದ ಅದು ತುಂಬಾ ಎಚ್ಚರವಾಗಿರುತ್ತದೆ. ಆದರೆ ಸೋಲಿನಿಂದ ಹುಚ್ಚನಾಗಿದ್ದ ನಾನು ಮತ್ತೊಮ್ಮೆ ಸಹಾಯ ಮಾಡಲು ಅವರನ್ನು ಕೇಳಿಕೊಂಡೆ. ಬೀಡಿ ಸೇದುತ್ತಾ ತಮ್ಮಲ್ಲೇ ಮಾತನಾಡಿಕೊಂಡ ಅವರು, ನೋಡೋಣ ಸಾಹೇಬ್ರೆ ಎನ್ನುತ್ತ ಹೊರಡಲು ಅನುವಾದರು. ಇದು ಮೂರ್ಖತನದ ಪ್ರಯತ್ನವಾದರೂ ಆ ಕ್ಷಣದಲ್ಲಿ ನನಗೆ ಪ್ರಮುಖವೆನ್ನಿಸಿತ್ತು.

ಬೆಟ್ಟಗಳ ಏರಿಳಿತಗಳ ದಟ್ಟವಾದ ಕಾಡಿನ ಪೊದೆಗಳಲ್ಲಿ ಸುಮಾರು ಐದಾರು ಗಂಟೆ ನಾವು ಕಾಡುಕೋಣದ ಜಾಡು ಹಿಡಿದು ಅಲೆದೆವು. ಹೆಚ್ಚೇನನ್ನೂ ತಿನ್ನದಿದ್ದ ನನಗೆ ಹಸಿವಾಗತೊಡಗಿತ್ತು. ಈ ವ್ಯರ್ಥ ಪ್ರಯತ್ನವನ್ನು ನಿಲ್ಲಿಸಬೇಕೆಂದು ನಾವೆಲ್ಲ ಒಂದು ತಂಪಾದ ಜಾಗದಲ್ಲಿ ವಿಶ್ರಮಿಸಲು ಕುಳಿತೆವು. ಆಗ ನಮಗೆ ಏನೋ ಸದ್ದು ಕೇಳಿದಂತಾಯಿತು. ನಾವು ಕುಳಿತಿದ್ದ ಜಾಗದ ಹತ್ತಿರ ನೀರಿನ ಸೆಲೆಯೊಂದು ಇದ್ದುದರಿಂದ ಕಾಡುಕೋಣ ಇಲ್ಲೆಲ್ಲೋ ನಮ್ಮಂತೆ ವಿಶ್ರಮಿಸಿರಲು ಸಾಧ್ಯ ಎನ್ನಿಸಿತು. ಮಾರ್ಗದರ್ಶಿಗಳು ನನ್ನನ್ನು ಹಿಂಬಾಲಿಸಲು ಸೂಚಿಸುತ್ತಾ ಮುನ್ನಡೆದರು. ನಮ್ಮಿಂದ ನೂರು ಅಡಿ ದೂರದಲ್ಲಿ ಏನೋ ಇದೆ ಅನ್ನಿಸಿತು. ಆದರೆ ಸಣ್ಣ ದಿಬ್ಬವೊಂದು ನಮ್ಮ ದೃಷ್ಟಿಗೆ ಅಡ್ಡವಾಗಿತ್ತು. ನಾನೊಬ್ಬನೇ ತೆವಳಿಕೊಂಡು ದಿಬ್ಬದ ಮೇಲೆ ಹೋಗಿ ಆಚೆಗೆ ಇಣುಕಿದೆ. ಕೇವಲ ಇಪ್ಪತ್ತು ಅಡಿ ದೂರದಲ್ಲಿ ಕಾಡುಕೋಣದ ಹಿಂಭಾಗ ಕಾಣಿಸಿತು. ಅದರ ಮುಖ ಗಿಡಗಳಲ್ಲಿ ಮರೆಯಾಗಿತ್ತು. ನನ್ನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಅದರ ಬೆನ್ನುಮೂಳೆಗೆ ಗುರಿಯಿಡುತ್ತಾ ಒಂದೇ ಬೆರಳಿನಲ್ಲಿ ಒಂದಾದಮೇಲೆ ಒಂದರಂತೆ ಎರಡು ಗುಂಡುಗಳನ್ನು ಹಾರಿಸಿದೆ. ಅಲ್ಲಿ ಹೊಗೆಯೆದ್ದಿದ್ದರಿಂದ ಪ್ರಾಣಿಯ ಕೂಗು ಮಾತ್ರ ಕೇಳಿಸಿತು.

ನಿಧಾನವಾಗಿ ದೂರದಿಂದ ಗಮನಿಸಿ ನಾನು ಭಾರೀ ಗಾತ್ರದ ಕಪ್ಪುಕರಡಿಯೊಂದನ್ನು ಬೇಟೆಯಾಡಿದ್ದೆ ಎಂದುಕೊಂಡೆ!

ಹಿಗ್ಗಿನಿಂದ ಬೀಗುತ್ತಿದ್ದ ದರ್ಬಾರಿ, ಇದೊಂದು ಹಂದಿ ಎಂದು ನಾವು ಹೇಳಿದ್ದು ನಿಮಗೆ ಕೇಳಿಸಲಿಲ್ಲವೇ ಎಂದ. ಕೋಪದಿಂದ ನಾನು ಸಾಧ್ಯವಿಲ್ಲವೆಂದು ಉತ್ತರಿಸಿದೆ. ನಾನು ನೋಡಿದ ಕಾಡುಹಂದಿಗಳು ಸ್ವಲ್ಪ ಬೂದು ಬಣ್ಣದ್ದಾಗಿರುತ್ತಿತ್ತು. ಆದರೆ ಇದು ಮಾತ್ರ ಕಡುಗಪ್ಪಾಗಿದ್ದು ನನಗೆ ಕರಡಿ ಎನ್ನುವ ಭ್ರಮೆ ಹುಟ್ಟಿಸಿತ್ತು. ಈ ದೈತ್ಯ ಹಂದಿಯನ್ನು ಹೊರಲು ಆರು ಜನರ ಆಗತ್ಯವಿದ್ದುದರಿಂದ ನಾವು ಅದನ್ನು ಹದ್ದುಗಳ ಕಣ್ಣಿನಿಂದ ಮರೆಮಾಡಿ ಹಿಂತಿರುಗಿದೆವು. ನಂತರ ಜನರ ಗುಂಪೊಂದನ್ನು ಕಳಿಸಿ ಹಂದಿಯನ್ನು ತರಿಸಿದೆವು. ಆವತ್ತು ನನಗೆ ತೀರಾ ನಿರಾಸೆಯ ದಿನವಾಗಿದ್ದರೂ ದರ್ಬಾರಿ, ಶಕ್ಕು ಮತ್ತು ಹಳ್ಳಿಗರಿಗೆ ಅತ್ಯಂತ ಸಂತೋಷವಾಗಿತ್ತು. ಇಲ್ಲಿನ ಮೂಲನಿವಾಸಿಗಳಿಗೆ ಹಂದಿಯ ಮಾಂಸ ಬಹಳ ಪ್ರಿಯವಾಗಿತ್ತು. ಹಾಗಾಗಿ ನಾನು ಇವರ ನಡುವೆ ಭಾರೀ ಜನಪ್ರಿಯತೆ ಗಳಿಸಿದೆ. ಆದೇ ದಿನ ಮಧ್ಯಾಹ್ನ ಮತ್ತೆ ಬರಬೇಕೆಂಬ ಪ್ರೀತಿಯ ಆಹ್ವಾನದೊಂದಿಗೆ ನಾನು ಹಿಂತಿರುಗಿದೆ!

(ಮುಂದುವರೆಯುವುದು)


... ದೊರಕಿದೆ. ಇದು ಏನನ್ನು ಸೂಚಿಸುತ್ತದೆ? ...ಾಂಗ್ರೆಸ್ ಪಕ್ಷದ ಅವಕಾಶವಾದಿ ರಾಜಕಾರಣ ... ಸಮುದಾಯ ಭ್ರಮನಿರಸನಗೊಂಡಿರುವುದು ...ಷ್ಟವಾಗುತ್ತದೆ. ಸಂಘ ಪರಿವಾರದ ಕೋಮುವಾದಿ ...ಕ್ಕೆ ಪ್ರತಿರೋಧವಾಗಿ ಒಂದು ನಿರ್ದಿಷ್ಟ ...ತ್ವವನ್ನಾಗಲಿ, ಸಮರ್ಥನೆಯನ್ನಾಗಲಿ ನೀಡದ ...ಲ್ಲ ಸೆಕ್ಯುಲರ್ ಪಕ್ಷಗಳಿಗಿಂತ ಮುಸ್ಲಿಂರಿಗೆ ...ದಿ ಬಿಜೆಪಿ ಪಕ್ಷವೇ ಹೆಚ್ಚು ಸುರಕ್ಷಿತ ಎನಿಸಿತೇ? ...ಸ್ಪಷ್ಟಪಡಿಸುತ್ತೇವೆಯೋ ಅಥವಾ ತಿರಸ್ಕರಿಸುತ್ತೇವೆಯೋ. ಆದರೆ ನಾವು ಪ್ರಜಾಪ್ರಭುತ್ವದ ಕುರಿತಾಗಿ ಮರುಚಿಂತನೆ ನಡೆಸುವಂತೆ ಮಾಡಿದ ಕೀರ್ತಿ ಬಿಜೆಪಿ ಪಕ್ಷಕ್ಕೆ ಸಲ್ಲಬೇಕು. ಈ ಕ್ಷಣದ ದೃಶ್ಯಾವಳಿಗಳನ್ನು ಎಮರ್ಜೆನ್ಸಿಯೊಂದಿಗೆ ಎದುರುಬದುರಾಗಿಟ್ಟು ನೋಡಿದಾಗ ಎಲ್ಲವೂ ನಿಚ್ಚಳವಾಗಿ ಗೊತ್ತಾಗುತ್ತದೆ. ಕಟ್ಟಳೆ ಮತ್ತು ಭಯದ ವಾತಾವರಣ ಎರಡೂ ಇಂದು ವಾಸ್ತವದ ಲಕ್ಷಣಗಳಾಗಿ ನಮ್ಮೆದುರು ನಿಂತಿದೆ. ಆರಂಭದಲ್ಲಿ ಲಗಾಟ ಹೊಡೆಯುವ ಪ್ರಜಾಪ್ರಭುತ್ವ ಇಂದು ಬಸವಳಿದು ನೆಲಕಚ್ಚುತ್ತಿದೆ. ನರೇಂದ್ರ ಮೋದಿ ಅಧಿಕಾರ ರಾಜಕಾರಣದಲ್ಲಿ ಮೇಲ್ಮುಖವಾಗಿ ಚಲಿಸುತ್ತಲೇ ಇರುವುದು ಮತ್ತು ಆ ಅಧಿಕಾರವು ಏಕವ್ಯಕ್ತಿ ಕೇಂದ್ರಿತ, ಏಕಪಕ್ಷ ಕೇಂದ್ರಿತ ವ್ಯವಸ್ಥೆಯ ಕಡೆಗೆ ನೆಲೆಗೊಳ್ಳತೊಡಗಿರುವುದರ ಕುರಿತಾಗಿ ಇಂದು ಸ್ಪಷ್ಟತೆ ದೊರಕಿದೆ. ಹಿಂದೂತ್ವ ರಾಷ್ಟ್ರೀಯತೆಯ ನಗಾರಿ ಬಡಿತ ಮತ್ತಷ್ಟು ತೀವ್ರವಾಗಲಿದ್ದು ಇದುವರೆಗಿನ ಸೆಕ್ಯುಲರಿಸಂ ರಾಜಕಾರಣದ ಎಲ್ಲಾ ಹತಾರಗಳು ತಮ್ಮ ಆಯಸ್ಸನ್ನು ಕಳೆದುಕೊಂಡು ಇನ್ನು ಮುಂದೆ ಹಿಂದೂತ್ವದ ಮತೀಯವಾದವನ್ನು, ಫೆಸಿಸಂ ಅನ್ನು ಟೀಕಿಸಿದಷ್ಟೂ ಅದು ದೃಢವಾಗುತ್ತಲೇ ಹೋಗುತ್ತದೆ ಎನಿಸಿಕೊಳ್ಳುತ್ತದೆ.


ಸನ್ ಟಿವಿಯಲಿ ಕಳೆದ 19 ವರ್ಷಗಳಿಂದ ಜನಪ್ರಿಯ ಕಾರ್ಯಕ್ರಮ 'ವಿಭಾದ ಮೇಧೈ'ದ ಅಂಕರ್ ಆಗಿದ್ದ ತಿರು ವೀರಪಾಂಡ್ಯನ್ ಎರಡು ವರ್ಷಗಳ ಹಿಂದೆ ತನ್ನ ಕಾರ್ಯಕ್ರಮದ ಚರ್ಚೆಯ ಸಂದರ್ಭದಲ್ಲಿ "ಜನರು ಯೋಚಿಸಿ ಮತದಾನ ಮಾಡಬೇಕು. ಮೋದಿ ಅಲೆ ಇದೆ ಎಂದು ಮಾತ್ರಕ್ಕೆ ಮೋದಿಗೆ ಮತ ಹಾಕಬಾರದು. ಇಂದು ಮೋದಿಯನ್ನು ಆರಿಸಿದರೆ ತಮ್ಮ ಈ ನಿರ್ಧಾರದೊಂದಿಗೆ ಮುಂದಿನ 15 ವರ್ಷಗಳ ಕಾಲ ಬದುಕಬೇಕಾಗುತ್ತದೆ" ಎಂದು ಹೇಳಿದ್ದರು. ಹೀಗೆ ಹೇಳಿದ್ದಕ್ಕಾಗಿ ಅವರು ನಂತರ ತನ್ನ ಕೆಲಸ ಕಳೆದುಕೊಂಡರು.


ಏನು ಹೇಳೀರಿ?


■ ಬಿ. ಶ್ರೀಪಾದ ಭಟ್

ಅಯೋಧ್ಯಾಸುತರ ಆಳ್ವಿಕೆಯಲ್ಲಿ ಚಿಂತನೆಯೇ ಮಹಾಪರಾ









ಪನ್ಸಾರೆ, ದಾಬೋಲ್ಕರ್, ಕಲಬುರ್ಗಿ ಹತ್ಯೆಯ ನಂತರ ಈಗ ಮತ್ತೊಮ್ಮೆ ಕರ್ನಾಟಕದಲ್ಲಿ ಚಿಂತನೆಯ ಮೇಲೆ ಹಲ್ಲೆ ನಡೆದಿದೆ. ವೈಚಾರಿಕತೆಯ ಮೇಲೆ ಆಕ್ರಮಣ ನಡೆದಿದೆ. ಯೋಗೇಶ್ ಮಾಸ್ಟರ್ ಅವರ ಮೇಲೆ ಸಂಘಪರಿವಾರದ ಕಾರ್ಯಕರ್ತರು ಕಪ್ಪು ಮಸಿ ಎಸೆಯುವ ಮೂಲಕ ತಮ್ಮ ವಿಕೃತ ಧೋರಣೆಯನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಊನ, ದಾದ್ರಿಯನ್ನು ಆಸ್ವಾದಿಸುವ ವಿಕೃತ ಮನಸುಗಳಿಗೆ ಒಬ್ಬ ವ್ಯಕ್ತಿಯ ಮೇಲೆ ಕಪ್ಪು ಮಸಿ ಸುರಿಯುವುದು ಅಪರಾಧ ಎನಿಸುವುದೇ? ಇದು ಅಚ್ಚರಿಯ ವಿಷಯವೂ ಅಲ್ಲ ಅಥವಾ ಸಂಘಪರಿವಾರದ ಗೂಂಡಾಗಿರಿ ಎಂದು ಹೀಗಳೆದು ತೆಪ್ಪಗಾಗುವ ವಿದ್ಯಮಾನವೂ ಅಲ್ಲ. ಇದು ದೇಶದ ಸಾಂಸ್ಕೃತಿಕ ಪರಿಸರದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಅಯೋಧ್ಯೆಯ ಕೂಸುಗಳ ವಿಕೃತ ರಾಜಕಾರಣದ ಒಂದು ರೂಪ ಅಷ್ಟೆ. ಅತ್ತ ದೆಹಲಿಯಲ್ಲಿ ಒಬ್ಬ ವಿಕಲಾಂಗ ಅಧ್ಯಾಪಕರನ್ನು ಭಯೋತ್ಪಾದಕ ಎಂದು ಬಿಂಬಿಸಲಾಗುತ್ತಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯದ ಮೇಲೆ ಈ ರೀತಿ ಹಲ್ಲೆ ನಡೆಯುತ್ತಿರುವುದು ಮೊದಲ ಸಲವೇನಲ್ಲ. ಯೋಗೇಶ್ ಈ ವಿಕೃತಿಯ ಸಾಮಾಜಿಕ ಆಯಾಮಕ್ಕೆ ಸಾಕ್ಷಿಯಾಗಿದ್ದಾರೆ, ಪ್ರೊ. ಸಾಯಿಬಾಬಾ ಇದೇ ವಿಕೃತಿಯ ಪ್ರಭುತ್ವದ ಆಯಾಮಕ್ಕೆ ಸಾಕ್ಷಿಯಾಗಿದ್ದಾರೆ. ಒಂದೆಡೆ ಕರಾಳ ಮನಸುಗಳು ಮತ್ತೊಂದೆಡೆ ಕರಾಳ ಶಾಸನಗಳು.

ಇಲ್ಲಿ ಚುನಾವಣಾ ಗೆಲ್ಲುವ ಸೋಲುಗಳು ನಿಮಿತ್ತ ಮಾತ್ರ. ಬಿಜೆಪಿ ಗೆಲ್ಲಲಿ ಅಥವಾ ಸೋಲಲಿ, ಅಧಿಕಾರದಲ್ಲಿರಲಿ ಇಲ್ಲದಿರಲಿ, ಸಂಘಪರಿವಾರದ ಕಾರ್ಯಸೂಚಿ ಎಂದಿಗೂ ನಿಷ್ಕ್ರಿಯವಾಗಿಲ್ಲ. ನಿಷ್ಕ್ರಿಯವಾಗಿರುವುದು ಪ್ರತಿರೋಧದ ದನಿಗಳು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನ ಮಾನ್ಯ ಮಾಡುತ್ತದೆ. ಆದರೆ ಸಂವಿಧಾನಕ್ಕೆ ಬದ್ಧರಾಗಿ ಅಧಿಕಾರದ ಗದ್ದುಗೆ ಹಿಡಿಯುವ ರಾಜಕೀಯ ಪಕ್ಷಗಳು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ತಮ್ಮದೇ ಆದ ಚೌಕಟ್ಟುಗಳನ್ನು ನಿರ್ಮಿಸುತ್ತವೆ. ಈ ನಿಟ್ಟಿನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳು. ಕನಿಷ್ಠ ಪಕ್ಷ ಇಲ್ಲಿಯವರೆಗೂ ಅಧಿಪತ್ಯ ರಾಜಕಾರಣವನ್ನು ಮತ್ತು ಸ್ಥಾಪಿತ ವ್ಯವಸ್ಥೆಯನ್ನು ಪ್ರಶ್ನಿಸುವ ವ್ಯಕ್ತಿಗಳನ್ನು ಅಪರಾಧಿಗಳೆಂದು ಪರಿಗಣಿಸಲಾಗುತ್ತಿತ್ತು. ಆದರೆ ಅಯೋಧ್ಯೆಯ ಕೂಸೊಂದು ಅಧಿಕಾರದ ಗದ್ದುಗೆ ಏರಿದ ನಂತರದಲ್ಲಿ ಪ್ರತಿರೋಧದ ಚಿಂತನೆಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ. ಸಾಯಿಬಾಬಾ ಪ್ರಕರಣ ಒಂದು ಸ್ಪಷ್ಟ ನಿದರ್ಶನ. ವ್ಯಕ್ತಿಗತ ನಿಲುವುಗಳಿಗೆ ಪಂಜರಗಳನ್ನು ನಿರ್ಮಿಸುವ ಹಂತದಿಂದ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಭಾರತೀಯ ಪ್ರಭುತ್ವ ಈಗ ಚಿಂತನೆಗೇ ಬೇಲಿ ನಿರ್ಮಿಸುತ್ತಿದೆ. ಬೇಲಿ ಹಾರಿದವರು ದೇಶದ್ರೋಹಿಗಳಾಗಿಬಿಡುತ್ತಾರೆ. ಇದು ಪ್ರವರ್ಧಮಾನಕ್ಕೆ ಬರುತ್ತಿರುವ ಅಯೋಧ್ಯೆಯ ಕೂಸುಗಳ ಫ್ಯಾಸಿಸ್ಟ್ ರಾಜಕಾರಣದ ಒಂದು ಝಲಕ್.

ಫ್ಯಾಸಿಸಂ ಎನ್ನುವುದು ಕೇವಲ ಒಂದು ರಾಜಕೀಯ ಅಥವಾ ಆಡಳಿತಾತ್ಮಕ ಸ್ವರೂಪದ ವಿದ್ಯಮಾನವಲ್ಲ. ಒಂದು ದೇಶದ ರಾಜಕಾರಣವನ್ನು ಬೌದ್ಧಿಕವಾಗಿ, ಭೌತಿಕವಾಗಿ, ಮಾನಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಿಯಂತ್ರಿಸುವ ಎಲ್ಲ ಸಮಾಜೋ ಆರ್ಥಿಕ, ಸಾಂಸ್ಕೃತಿಕ ಆಯಾಮಗಳನ್ನೂ ಆಕ್ರಮಿಸಿಕೊಳ್ಳುತ್ತಾ ಸಮಾಜದ ಬುನಾದಿಯನ್ನೇ ಬುಡಮೇಲು ಮಾಡಿ ಒಂದು ಹೊಸ ವಿಕೃತ ಸಮಾಜವನ್ನು ನಿರ್ಮಿಸುವುದು ಫ್ಯಾಸಿಸ್ಟ್ ಧೋರಣೆಯ ಮೂಲ ಲಕ್ಷಣ. ಜರ್ಮನಿಯ ಹಿಟ್ಲರ್, ಇಟಲಿಯ ಮುಸೋಲಿನಿ ಈ ವಿಕೃತ ರಾಜಕಾರಣಕ್ಕೆ ಒಂದು ಸ್ಪಷ್ಟ ಸ್ವರೂಪ ಮತ್ತು ವ್ಯಾಖ್ಯಾನವನ್ನು ನೀಡಿದ್ದೇ ಅಲ್ಲದೆ ಪ್ರಜಾತಂತ್ರ ಮೌಲ್ಯಗಳು ಎಷ್ಟೇ ಗಟ್ಟಿಯಾಗಿದ್ದರೂ ಫ್ಯಾಸಿಸಂ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಸಾಧ್ಯ ಎಂದು ನಿರೂಪಿಸಿದ್ದರು. ಆದರೆ ಈ ಇಬ್ಬರು ಸರ್ವಾಧಿಕಾರಿಗಳು ವಿಶ್ವ ರಾಜಕಾರಣಕ್ಕೆ ಫ್ಯಾಸಿಸಂನ ನೀಲಿನಕ್ಷೆಯನ್ನೇನೂ ಸಿದ್ಧಪಡಿಸಲಿಲ್ಲ. ಇಂದು ಭಾರತದಲ್ಲಿ ಮೋದಿ ಆಳ್ವಿಕೆಯಲ್ಲಿ ತನ್ನ ನೆಲೆ ಕಂಡುಕೊಳ್ಳುತ್ತಿರುವ ಫ್ಯಾಸಿಸ್ಟ್ ಧೋರಣೆಗೂ ಹಿಟ್ಲರ್‌ನ ನೀಲಿ ನಕ್ಷೆ ಬೇಕಿಲ್ಲ. ಏಕೆಂದರೆ 25 ವರ್ಷಗಳ ನಂತರ ರಥಯಾತ್ರೆಯ ಚಕ್ರಗಳು ಮತ್ತೊಮ್ಮೆ ಸದ್ದುಮಾಡುತ್ತಿವೆ. ಅಯೋಧ್ಯೆಯ ಕೂಸುಗಳು ಪ್ರವರ್ಧಮಾನಕ್ಕೆ ಬಂದಿದ್ದಾರೆ. ಇಟ್ಟಿಗೆ ಹೊತ್ತ ಕೈಗಳು ಇಂದು ಬಂದೂಕು ಹಿಡಿಯುತ್ತಿವೆ. ದನಿಯಡಗಿಸಲು ಧಣಿಗಳ ಅಪ್ಪಣೆ ಬೇಕಿಲ್ಲ, ಮುಕ್ತ ಮಾರುಕಟ್ಟೆಯಲ್ಲಿ ಮುಕ್ತ ಅವಕಾಶ ನೀಡಲಾಗಿದೆ. ಈ ಎಲ್ಲ ವಿಕೃತಿಗಳಿಗೆ ರಕ್ಷಣೆ ನೀಡಲು ಅಯೋಧ್ಯಾಕಾಂಡದ ಅಧಿಕಾರ ಪರ್ವ ದೆಹಲಿಯಲ್ಲಿ ಸಾಕಾರಗೊಂಡಿದೆ.

ಪ್ರೊ. ಸಾಯಿಬಾಬಾ ಮಾಡಿರುವ ಅಪರಾಧವಾದರೂ ಏನು? ಕೈಯ್ಯಲ್ಲಿ ಪೆನ್ನು ಹಿಡಿದಿದ್ದಾರೆಯೇ ಹೊರತು ಗನ್ ಹಿಡಿದಿಲ್ಲ. ಆದಿವಾಸಿಗಳ ಬವಣೆ ಮತ್ತು ಕಾರ್ಪೋರೇಟ್ ಉದ್ಯಮಿಗಳಿಂದ ಆದಿವಾಸಿಗಳ ಶೋಷಣೆಯನ್ನು ವಿರೋಧಿಸುವ ಪ್ರತಿಯೊಬ್ಬ ವ್ಯಕ್ತಿಯೂ ದೇಶದ್ರೋಹಿಯಾಗಿಬಿಟ್ಟರೆ, ಮಾವೋವಾದದ ಹಣೆಪಟ್ಟಿ ಹೊತ್ತು ಜೀವಾವಧಿ ಅಥವಾ ಗಲ್ಲು ಶಿಕ್ಷೆಗೆ ಗುರಿಯಾಗಿಬಿಟ್ಟರೆ ಭಾರತ ತನ್ನ ಪ್ರಜಾತಂತ್ರದ ಪೊರೆಯನ್ನು ಕಳಚಿದೆ ಎಂದೇ ಹೇಳಬೇಕಾಗುತ್ತದೆ. ನಿಜ, ಮಾವೋವಾದಿಗಳ ಸಶಸ್ತ್ರ ಹೋರಾಟ ಪ್ರಭುತ್ವದ ದೃಷ್ಟಿಯಲ್ಲಿ ವಿಧ್ವಂಸಕ ಎನಿಸುತ್ತದೆ. ಒಂದು ಪ್ರಜಾಸತ್ತಾತ್ಮಕ ದೇಶದಲ್ಲಿ ಹಿಂಸಾತ್ಮಕ ಚಳವಳಿಗೆ ಅವಕಾಶ ಇರಕೂಡದು ಎಂದೇನೂ ಇಲ್ಲ. ಹಾಗೊಮ್ಮೆ ಸಂವಿಧಾನ ಕಟ್ಟಪ್ಪಣೆ ಮಾಡಿದ್ದರೂ ಈ ಹಿ[…] ಮಾರ್ಗವನ್ನು ಈ ದೇಶದ ಯುವಕರು ಏಕೆ […] ಮಾಡುತ್ತಾರೆ ಎಂದು ಪ್ರಬುದ್ಧತೆಯಿಂದ ಆಲೋ[…] ಮಾಡುವ ವಿವೇಚನೆ ಆಳುವ ವರ್ಗಗಳಿಗೆ ಇರ[…] ಬಂದೂಕಿನ ನಳಿಗೆಯಿಂದಲೇ ಶೋಷಿತ ಜನರ ಆ[…]ಗಳಿಗೆ ಪ್ರತ್ಯುತ್ತರ ನೀಡುವ ಧೋರಣೆ ಹಿಂಸೆ[…] ಪ್ರಚೋದಿಸುತ್ತದೆಯೇ ಹೊರತು ಅಂತ್ಯಗೊಳಿಸುತ[…]

ಇಷ್ಟಕ್ಕೂ ಸಾಯಿಬಾಬಾ ಮಾವೋವಾದಿ[…] ಬಿನಾಯಕ್ ಸೇನ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಸ್ಪ[…] ಹೇಳಿದೆ "ಯಾವುದೇ ಒಂದು ಸಿದ್ಧಾಂತವನ್ನು […] ಸಾಹಿತ್ಯ ಓದುವುದು ಅಥವಾ ಹೊಂದಿರುವುದು ಅ[…]ವಾಗುವುದಿಲ್ಲ". ಸಾಯಿಬಾಬಾ ಅವರ ಸಾಮಾಜಿ[…] ಮತ್ತು ಜನಪರ ಕಾಳಜಿಯನ್ನು ಗೌರವಿಸಬೇಕಾದ ಪ[…] ಅವರ ವಿಕಲಾಂಗತೆಯನ್ನೂ ಲೆಕ್ಕಿಸದೆ ಜೀವಾವಧಿ[…] ವಿಧಿಸುವುದು ಪ್ರಜಾತಂತ್ರದ ವಿಡಂಬನೆಯಷ್ಟೆ. ಈ […] ರಾಜಕೀಯ ಇತಿಹಾಸದಲ್ಲಿ ಸಾಮಾಜಿಕ-ಸಾಂ[…] ಚರಿತ್ರೆಯಲ್ಲಿ ಸಾವಿರಾರು ಕಗ್ಗೊಲೆಗಳನ್ನು ಮಾಡಿರು[…] ಅಧಿಕಾರ ರಾಜಕಾರಣದ ಪರಾಕಾಷ್ಠೆ ತಲುಪಿದ್ದಾರೆ, ಇ[…] ರಾರಾಜಿಸುತ್ತಿದ್ದಾರೆ. ಆದರೆ ಒಂದು ಸೊಳ್ಳೆಯನ್ನೂ ಕೊ[…] ವಿಕಲಾಂಗ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸಲಾ[…] ಇದು ನ್ಯಾಯ ವ್ಯವಸ್ಥೆಯ ಊನವೋ ಅಥವಾ […] ವ್ಯವಸ್ಥೆಯ ಊನವೋ? ಜಂಗಲ್ ರಾಜ್ ಎಂಬ […] ಪದವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಇ[…] ಯಾವುದೇ ವಿವೇಚನೆ ಇಲ್ಲದೆ ಪ್ರಬಲ ಶಕ್ತಿಗಳು […] ಅಧಿಪತ್ಯ ಸಾಧಿಸಿ ದುರ್ಬಲರನ್ನು ದಮನಿಸುವ ವ್ಯವಸ್[…] ಜಂಗಲ್ ರಾಜ್ ಅಥವಾ ಅರಣ್ಯ ನ್ಯಾಯ […] ಹೇಳಲಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಭಾರತದ ಶೋ[…] ಸಮುದಾಯಗಳು ಮತ್ತು ಸ್ಥಾಪಿತ ವ್ಯವಸ್ಥೆಗೆ ಪ್ರತಿ[…] ಒಡ್ಡುವ ದನಿಗಳು ಈ ಅರಣ್ಯ ನ್ಯಾಯ[…] ಎದುರಿಸಬೇಕಿದೆ.

ಅತ್ತ ನ್ಯಾಯವ್ಯವಸ್ಥೆ ಪ್ರಜಾತಂತ್ರ ಮೌಲ್ಯಗಳನ್ನು ಹ[…] ಹಾಕುತ್ತಿದ್ದರೆ ಇತ್ತ ಸ್ವಘೋಷಿತ ಆರಕ್ಷಕರು ಪ್ರತಿರೋ[…] ದನಿಗಳನ್ನು, ವ್ಯತಿರಿಕ್ತ ಚಿಂತನೆಗಳನ್ನು ದಮ[…] ಸಜ್ಜಾಗುತ್ತಿವೆ. ಯೋಗೇಶ್ ಮಾಸ್ಟರ್ ಇಂತಹ […] ನ್ಯಾಯಕ್ಕೆ ಗುರಿಯಾಗಿದ್ದಾರೆ. ಸ್ಥಾಪಿತ ವ್ಯವಸ್ಥೆಯನ್ನು […] ಮನಸುಗಳಿಗೆ ಅಯೋಧ್ಯಾಸುತರ ಆಳ್ವಿಕೆಯಲ್ಲಿ ಸಾ[…] ಎಂಬ ಘೋಷಣೆ ವ್ಯವಸ್ಥಿತವಾಗಿ ಮೊಳಗ[…] ಪ್ರತಿರೋಧದ ದನಿಗಳನ್ನು ಅಡಗಿಸಲು ಪ್ರಭುತ್ವ[…] ಬತ್ತಳಿಕೆಯ ಅಸ್ತ್ರಗಳನ್ನು ಮಾತ್ರ ಬಳಸದೆ ಅ[…]ಕ್ಷಿಪ್ರ ಕಾರ್ಯಪಡೆಗಳನ್ನೂ ಬಳಸುತ್ತಿರುವುದನ್ನು […] ಊನ, ಜೆಎನ್‌ಯು, ಹೈದರಾಬಾದ್ ವಿಶ್ವವಿದ್ಯಾ[…] ರಾಮಜಾಸ್ ಕಾಲೇಜುಗಳಲ್ಲಿ ಕಾಣಬಹುದು. ಗುರ್‌ಮ[…] ಕೌರ್, ಯೋಗೇಶ್ ಮಾಸ್ಟರ್ ಈ ವಿಕೃತಿಗೆ ಗುರಿಯಾ[…] ಪ್ರವರ್ಧಮಾನಕ್ಕೆ ಬರುತ್ತಿರುವ ಫ್ಯಾಸಿಸ್ಟ್ ಆಡಳಿತ ವ್ಯವ[…] ಚಿಂತನೆಯೇ ಅಪರಾಧವಾಗಿರುವುದು ಪ್ರಜಾತಂತ್ರ ವ್ಯ[…] ಅವಸಾನಕ್ಕೆ ಮುನ್ನುಡಿಯಾದೀತು.

■ ನಾ. ದಿವಾ[…]

ನೀವೇನ ಮಾಡಬಲ್ಲಿರಿ ಕುನ್ನಿಗಳೇ...

ಹಾಡು ಹಕ್ಕಿಯ ಕೊರಳು ಕತ್ತರಿಸಬಹುದು
ಹಾರುವ ಹಕ್ಕಿಯ ರೆಕ್ಕೆ ಕತ್ತರಿಸಬಹುದು
ನುಡಿವ ನಾಲಿಗೆಯನ್ನು ತುಂಡರಿಸಬಹುದು
ದುಡಿವ ಕರಗಳನ್ನು ತುಂಡರಿಸಬಹುದು
ಚಿಂತಿಸುವ ಮನಸುಗಳನ್ನು ದಮನಿಸಬಹುದು
ಸ್ಪಂದಿಸುವ ದನಿಗಳನ್ನು ದಮನಿಸಬಹುದು!

ಎಲೈ ವಿಕೃತ ಮನಸಿನ ಕೂಸುಗಳೇ
ಇಟ್ಟಿಗೆಗಳ ಹೊತ್ತ ನಿಮ್ಮ ಕೈಗಳು
ರಕ್ತಸಿಕ್ತವಾಗಿವೆ; ದಾದ್ರಿಯ ತುಂಡುಗಳು
ಊನಾದ ಮಾಸದ ಗಾಯಗಳು
ನಿಮ್ಮ ದುಷ್ಟ ಕಂಗಳಲಿ ಕಾಣುತ್ತಿವೆ;


ಇನ್ನೇನು ಮಾಡಬಲ್ಲಿರಿ
ಬಡಿಯುವಿರಿ ಹೊಡೆಯುವಿರಿ ಸದೆಬಡಿಯುವಿರಿ
ದಮನಿಸುವಿರಿ, ದಹಿಸುವಿರಿ
ಧ್ವಂಸ ಮಾಡುವಿರಿ ಶವಗಳ ರಾಶಿಗಳ
ಮೇಲೆ ರುದ್ರ ನರ್ತನ ಮಾಡುವಿರಿ
ಎಷ್ಟಾದರೂ ಸಾವಿನ ದಲ್ಲಾಳಿಗಳಲ್ಲವೇ?

ಇನ್ನೆಷ್ಟು ಪನ್ಸಾರೆಗಳು ಇನ್ನೆಷ್ಟು ಧಬೋಲ್ಕರುಗಳು
ಇನ್ನೆಷ್ಟು ಕಲಬುರ್ಗಿಗಳು ಇನ್ನೆಷ್ಟು ಯೋಗೀಶರು?
ನೀವು ವಿಜೃಂಭಿಸಿ ಮಜ್ಜನಕೆ ಬಳಸಿದ್ದು
ಕಪ್ಪು ಮಸಿಯಲ್ಲ; ನಿಮ್ಮ ಕೊಳೆತ
ಮನಸಿನೊಳಗಿನ ಕಲುಷಿತ ಚಿಂತನೆಗಳು;
ಹಾಡನು ಕೊಲ್ಲಲಾಗುವುದಿಲ್ಲ,
ಹಾರುವುದನು ತಡೆಯಲಾಗುವುದಿಲ್ಲ,
ನುಡಿಯ ಕೊನೆಗೊಳಿಸುವುದು ಸಲ್ಲ,
ದುಡಿವ ಕರಗಳು ನಿಷ್ಕ್ರಿಯವಾಗುವುದಿಲ್ಲ!

ಚಿಂತಕರನು ಕೊಂದಿರಿ ಚಿಂತನೆಗಳನ್ನೂ
ಕೊಲ್ಲಲೆಣಿಸಿದ್ದೀರಿ;
ಚಿಂತನೆಗಳಿಗೆ ಸಾವಿಲ್ಲ
ನೀವೆಷ್ಟೇ ನುರಿತ ದಲ್ಲಾಳಿಗಳಾಗಿರಬಹುದು
ಸಾವು ಚಿಂತನೆಯ ಬಳಿ ಸುಳಿಯದು
ಜೀವ ನಶ್ವರ ಜೀವಸತ್ವದ ಚಿಂತನೆ ಅಮರ
ವಿಚಾರಗಳು ಜಂಗಮ ನಿಮ್ಮೊಳಗಿನ ವಿಕೃತಿ ಸ್ಥಾವರ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ!

■ ನಾ. ದಿವಾಕರ

ಮಂಗಗಳ ಉಪದ್ರ.....!



ಸಹಬಾಳ್ವೆಯ ತೋಟದ ಪಕ್ಕದ ಕಾಡಲಿ
ಮೂಸುತಲಿದ್ದವು ಮಂಗಗಳು
ಮಂಗಗಳೆಲ್ಲವೂ ಒಂದೆಡೆ ಸೇರಿ
ಒಂದುಪದ್ರವ ಮಾಡಿದವು

ಏನೂ ಓದದೆ ತಕತಕ ಕುಣಿಯುತ
ಇದ್ದವು ಕತ್ತಲ ಮನೆಯಲ್ಲಿ
ಬೀದಿಯ ಬದಿಯೇ ಅಂಡಲೆಯುತ್ತಾ
ವ್ಯಾಧಿಯ ಭಕ್ತರ ಜೊತೆಯಲ್ಲಿ

ನಾಳೆಯ ಬದುಕಿಗೆ ಕೊಳ್ಳಿಯ ಇಡಲು
ಹೊರಟವು ಕೇಸರಿನ ದಾರಿಯಲಿ
ಬಾಳಿಗೆ ಬೆಳಕನು ನೀಡುವ ಗುರುಗಳು
ಕಾಣರು ಕಣ್ಣಿನ ಮಸಿಯಲ್ಲಿ

ಸಗಣಿಯ ತಲೆಯಲಿ ಜಿಗಣೆಯ ಹುಳುಗಳು
ನೆತ್ತರ ಹೀರಲು ಕಾದಿಹವು
ಬತ್ತದ ಕನಸನು ಹೊತ್ತಿಹ ಗುರುಗಳು
ಮೆತ್ತನೆ ಪ್ರಭೆಯನು ಬೀರಿಹರು


ಬಾಲವು ಸುಟ್ಟ ಮಂಗನ ಮುಸುಡಿ
ಕಾರಿನ ಕಿಟಕಿಯ ಗಾಜಲ್ಲಿ
ಮಾನವು ಸತ್ತ ವಾನರ ಪಡೆಯು
ಕಾರಿತು ವಿಷವ ಮಸಿಯಲ್ಲಿ

ಮಂಗಗಳಿಂದ ಮಾನವನಾದ
ಅಂದಿಹ ವಿಜ್ಞಾನಿ ಈಗಿಲ್ಲ
ಮಾನವನಿಂದ ಮಂಗಗಳಾಗೋ
ಸೃಷ್ಟಿ ವಿಚಿತ್ರಕೆ ಬರವಿಲ್ಲ

ನೀತಿಯ ದಾರಿಗೆ ಪ್ರೀತಿಯ ಕನಸಿಗೆ
ಜೀವದ ಬದುಕು ನಿಂತಿಹುದು
ಸತ್ಯವ ಹುಡುಕುವ ಗುರುಗಳ ಲೇಖನಿ
ಅಸತ್ಯವ ಕಂಡು ನಗುತಿಹುದು...!

■ ವ[…]


ತಿಂಮನ ಅಪ್ರಬುದ್ಧತೆ?



ರಾಜಕೀಯವೆನ್ನುವುದು ಸಾಧಕರಲ್ಲದ ಕೆಲವರ ...ಗೆ ಸೈಕಲ್ ಸವಾರಿಯಂತೆ ಸವಾರಿ ಸಮಯದಲ್ಲಿ ...ದಿರಬಾರದೆಂದರೆ ಅದನ್ನು ತೊಡಿತಾನೇ ಇರಬೇಕಾ...ದೆ. ಹೌದು, ಏನೋ ಹೆಸರುವಾಸಿ ಹಿನ್ನೆಲೆ ಅಥವ ...ಕ್ಷದಲ್ಲೋ ಇಲ್ಲಾ ರಾಜಕೀಯದಲ್ಲಿ ಮಾಡಿ ತೋರಿಸಿ...ಹ ಗಟ್ಟಿ ಸಾಧನೆಗಳುಳ್ಳ ವ್ಯಕ್ತಿಗಳಿಗೆ ತಮ್ಮ ಅಸ್ತಿತ್ವ...ಗ ಅಧ್ವಾರಿಯ ಮೂಲಕ ತೋರಿಸಿಕೊಳ್ಳುವಂತಹ ...ರ್ಭಗಳು ಎದುರಾಗಲಾರವು. ಆದರೆ ಸದ್ಯದ (ಸಮೂಹ) ...ವೇಶದಲ್ಲಿ ಭಾರೀ ಬೇಡಿಕೆಯಲ್ಲಿರುವ ವಿಷಕಾರುವ ...ೇದನಾತ್ಮಕ ಬರಹಗಳ ಮೂಲಕ ಮುಂಚೂಣಿಗೆ ... ವ್ಯಕ್ತಿಯೊಬ್ಬ ಯಾವ ಸೇವಾ ಮನೋಭಾವಗಳ ...ತೆಯಿಲ್ಲದಿದ್ದರೂ ಈ ಋಣ ಸಂದಾಯದ ...ಗೋಸ್ಕರವೇ ಅಥವ ಇಂತಹ ಶೂದ್ರ ಪಿಂಡಗಳನ್ನು ...ಲು ಇರುವ ವಿಶೇಷ ಸವಲತ್ತಿನಿಂದಾಗಿ ಟಿಕೆಟ್ ...ಕೊಂಡು ಸಂಸದನಾಗಿಯೂ ಬಿಟ್ಟ. ಸಂಸದನಾಗಿ ...ಗಳು ಕಳೆದರೂ ಹೇಳಿಕೊಳ್ಳುವಂತಹ ಯಾವ ...ಪಯೋಗಿ ಕೆಲಸಕಾರ್ಯಗಳನ್ನೂ ಕೈಗೆತ್ತಿಕೊಳ್ಳದ ...ಗೀಗ ಅಸ್ತಿತ್ವ ತೋರಿಸಿಕೊಳ್ಳುವ ಅನಿವಾರ್ಯ ಚಪಲ.

...ಂಘ ಪರಿವಾರದ ಮಂದಿಗೆ ಅಥವ ಆ ಕುರಿತ ...ಳ್ಳ ವಿಷಭಟ್ಟನಂತಹ ವ್ಯಕ್ತಿಗಳಿಗೆ ವಿಷಕಾರುವ ...ಣ ವ್ಯಕ್ತಿಗಳಿಗಿಂತ ಕೊಳಕು ಮನಸ್ಸಿನ ಶೂದ್ರವ್ಯಕ್ತಿಗಳೇ ... ಬ್ರಾಹ್ಮಣರು ಕೊರೆದರೆ ಅದನ್ನು ಬೇರೆ ಆಯಾಮ ... ನೋಡುವವರಿದ್ದಾರೆ. ಆದರೆ ಇದನ್ನೇ ಶೂದ್ರ ವ್ಯಕ್ತಿ ...ರ ಹೇಳಿಸಿದರೆ ಅದರ ಪ್ರಭಾವವೇ ಬೇರೆಯದಾಗಿ ...ೆ. ತಿಂಮನಂತ ಅನೇಕರ ಲಕ್ ಕುದುರಿದ್ದೇ ಈ ...ತದ ಲೆಕ್ಕಾಚಾರದಿಂದ. ಈ ರೀತಿಯಾಗಿ ಜನಿವಾರಿಗಳ ... ಸಿಕ್ಕಿ ಸಖತ್ತಾಗಿ ಬೆಳಕಿಗೆ ಬಂದಂತವನೇ ನಮ್ಮ ... ಹುಟ್ಟುಗುಣ ಸುಟ್ಟರೂ ಬಿಡದು ಎನ್ನುವಂತೆ ...ಬ್ದಾರಿಯುತ ಸ್ಥಾನದಲ್ಲಿದ್ದೂ ಕೂಡ ವಿಚಿತ್ರ ವಿಚಿತ್ರವಾಗಿ ...ವ ಈತನ ಇತ್ತೀಚಿಗಿನ ಮತಿಗೆಟ್ಟ ಹೇಳಿಕೆಗಳೆಂದರೆ ...ಗುರ್‌ಮೆಹರ್ ಕೌರ್ ಹಾಗು ಸಾಗರದ ಹಾಡುಗಾರ್ತಿ ...ನಾ ಕುರಿತದ್ದು.

...ಂದರ್ಭಕ್ಕನುಗುಣವಾಗಿ ಬೇಳೆ ಬೇಯಿಸಿಕೊಳ್ಳಲು ...ರನ್ನು ಆಗಾಗ ಹೊಗಳುವ ಈ ಸಮಯಸಾಧಕ ...ಕೊಳಕು ಮನಸ್ಸನ್ನು ಹೊರಹಾಕಿದ್ದು ಇತ್ತೀಚೆಗೆ ...ಮೆಹರ್ ಕೌರ್ ವಿಚಾರದಲ್ಲಿ. ಇದೇ ವಿಚಾರ ಒಂದು ...ಬಿಜೆಪಿ ಬದಲು ಕಾಂಗ್ರೆಸ್ ವಿರುದ್ಧವಾಗಿ ಬಂದಿದ್ದರೆ ... ತಿಂಮ ಗುರ್‌ಮೆಹರಳನ್ನು ಬೆಂಬಲಿಸಿ ಒಂದು ...ನನ್ನೇ ಬರೆದು ಬಿಸಾಕುತ್ತಿದ್ದ. ಈ ಬಗ್ಗೆ ಈತ ಟ್ವೀಟ್ ...ದ ಚಿತ್ರವೇ ಈತನ ಕೊಳಕು ಮನಸ್ಸು ...ದೆಂಬುದನ್ನು ಸ್ಪಷ್ಟವಾಗಿ ತೋರಿಸುವಂತಿದೆ. ...ಮೆಹರಳನ್ನು ದಾವೂದ್‌ನಿಗೆ ಹೋಲಿಸಿಕೊಂಡು ...ನ್ ಮಗಳು ಹಾಗು ಪೊಲೀಸನ ಮಗ ಎಂದು ...ಕೊಂಡ ಚಿತ್ರದಲ್ಲಿ "ನೀನು ದೇಶ ಕಾಯೋ ಸೈನಿಕನ ...ದರೇನು? ದಾವೂದ್‌ನನ್ನು ಸಾರ್ವಜನಿಕರನ್ನು ...ೇ ಪೊಲೀಸನ ಮಗನೆಂಬ ಕಾರಣಕ್ಕೆ ಕೊಂಡಾಡ ...ತೇ?" ಎಂಬ ವ್ಯಂಗ್ಯ ಇದರಲ್ಲಿದೆ. ದೇಶವನ್ನು ...ಸುವ ಒಬ್ಬ ಜವಾಬ್ದಾರಿಯುತ ಸಂಸದನಾಗಿ ...ೊಬ್ಬನ ಮಗಳು ತನ್ನ ತಂದೆ ದೇಶಕ್ಕಾಗಿ ನಡೆದ ...ಟದಲ್ಲಿ ಸತ್ತ ದುಃಖವನ್ನು ತನ್ನದೇ ಆದ ರೀತಿಯಲ್ಲಿ ...ಸಿದ್ದನ್ನು ಈತ ಕುಖ್ಯಾತ ದಾವೂದನ ಲೆವೆಲ್ಲಿಗೆ ...ಳ್ಳುತ್ತಾನೆಂದರೆ ಈತನ ನೀಚತನ ಎಂಥಾದ್ದಿರಬೇಕು? ...ಗ್ಗೆ ತೀವ್ರ ವಿರೋಧ ವ್ಯಕ್ತವಾದಾಗ ತನ್ನ ಮಾತಿನ ...ನ್ನು ತಿರುಚಿ ಆತ "ನಾನು ಕಮೆಂಟಿಸಿದ್ದು ಆಕೆಯ



ಅಪ್ರಬುದ್ಧತೆಯನ್ನಷ್ಟೇ" ಎಂದು ತೇಪೆ ಹಾಕಿ ತನ್ನ ಅಪ್ರಬುದ್ಧತೆ ಹಾಗು ಮೂಢತೆಯನ್ನು ಮತ್ತಷ್ಟು ಹೊರಗೆಡಹಿಕೊಂಡ.

ತನ್ನ ಸಹಚರರ ಮೇಲಿನ ದಾಳಿಯೋ ಕೊಲೆಯೋ ಅಥವ ಹಿಂದೂತ್ವವಾದಿಗಳ ಹೋರಾಟಕ್ಕೆ ಇಂಬು ನೀಡುವಂತಹ ಘಟನೆಗಳಿಗೆ ತನ್ನನ್ನು ತೊಡಗಿಸಿಕೊಳ್ಳಲು ಚಾತಕಪಕ್ಷಿಯಂತೆ ಅದಕ್ಕಾಗೇ ಕಾಯುವ ಈತನಿಗೆ ಮೊನ್ನೆ ಕಾಣಿಸಿದ್ದು ಜೀ ಕನ್ನಡ ಕಾರ್ಯಕ್ರಮದಲ್ಲಿ ಹಾಡಿದ ಸುಹಾನಾ ಹಾಡುಗಾರಿಕೆ. ಯಾವುದೋ ತಿಕ್ಕಲು ತಲೆಯ ಗುಂಪೊಂದು ಸುಹಾನಾ ಹಾಡಿನ ಕುರಿತಾಗಿ ಅಪಸ್ವರ ತೆಗೆದದ್ದನ್ನೇ ನೆಪವನ್ನಾಗಿಸಿ ಈ ತಿಂಮ್ಮನೂ ಫೀಲ್ಡಿಗಿಳಿದು ಪೋಸ್ ಕೊಡಲು ನೋಡಿದ. ಹುಚ್ಚು ಮಾಧ್ಯಮಗಳೆಲ್ಲ ಈ ವಿಚಾರಕ್ಕೆ ಇನ್ನಿಲ್ಲದಂತೆ ಪ್ರಚಾರಕೊಟ್ಟು, ಇಡೀ ಮುಸ್ಲಿಮ್ ಸಮುದಾಯವೇ ಸುಹಾನಾ ಭಕ್ತಿ ಗೀತೆಯ ವಿರುದ್ಧವಿದೆ ಎಂಬಂತೆ ಬಿಂಬಿಸಿದ್ದರೂ ವಾಸ್ತವವಾಗಿ ಯಾವ ಮುಸ್ಲಿಮ್ ಧಾರ್ಮಿಕ ನಾಯಕರಾಗಲೀ ಸಂಘಟನೆಗಳಾಗಲೀ ಈ ಬಗ್ಗೆ ತಕರಾರೆತ್ತಿರಲಿಲ್ಲ ಬದಲಿಗೆ ಅವರುಗಳೆಲ್ಲ ಆಕೆಯನ್ನು ಬೆಂಬಲಿಸಿ ಹೇಳಿಕೆ ಕೊಟ್ಟದ್ದು ತಿಮ್ಮನಂತವರ ಬಿಡೆ ಕಾವನ್ನು ಸರ್ರನೆ ಇಳಿಸಿಬಿಟ್ಟಿತ್ತು. ಯಾರೂ ಕರೆಯದಿದ್ದರೂ ಕೊಚ್ಚೆಯಲ್ಲಿ ಮೀನು ಹಿಡಿಯೋ ದುಸ್ಸಾಹಸಕ್ಕೆ ಹೊರಟ ತಿಂಮ ಸುಹಾನಾಳಿಗೆ ಬೇಜಾನಾಗಿ ಬೆಂಬಲ ಘೋಷಿಸಿದ. ವಾಸ್ತವವಾಗಿ ಮುಸಲ್ಮಾನರು ಮೂಲಭೂತವಾದಿಗಳು ಹಾಗೆ ಹೀಗೆ ಎಂದು ಬಿಂಬಿಸುವ ಇವನಂತವರಿಗೆ ಇದನ್ನು ಸಾಕ್ಷೀಕರಿಸಲು ಇಂಥವೊಂದು ನೆಪ ಬೇಕಿತ್ತೇ ಹೊರತು ಸುಹಾನಾ ಸಂಗೀತದ ಕುರಿತ ಪ್ರಾಮಾಣಿಕ ಕಳಕಳಿಯಂತೂ ಇದ್ದಿರಲೇ ಇಲ್ಲ. ಈ ಬಗ್ಗೆ ಈತನೇ ಆಡಿದ ಮಾತುಗಳನ್ನೇ ಯಥಾವತ್ ಆಗಿ ನೋಡಿ - "ಅನ್ಯಧರ್ಮದ ದೇವರನ್ನು ಸ್ತುತಿಸುವಂತಹ ಗೀತೆಯನ್ನು ಹಾಡಿದ್ರೇನೇ ಸಹಿಸಿಕೊಳ್ಳ ದಂತಹ ಇಂತಹ ವ್ಯಕ್ತಿಗಳಿಂದ ನಾವು ಸಹಿಷ್ಣುತೆ ಸಹಬಾಳ್ವೆಯ ಅಂತವನ್ನು ನಿರೀಕ್ಷೆ ಮಾಡಲು ಸಾಧ್ಯವೇ?" ಎಂದು ಮಾಧ್ಯಮದೆದುರು ಈತ ಹಿಂದೂ ಭಕ್ತಿಗೀತೆ ಹಾಡಿದ್ದಕ್ಕೆ ಮುಸಲ್ಮಾನರು ತಕಾರಾರು ತೆಗೆದಿದ್ದಾರೆಂಬಂತೆ ಒದರಿದ್ದ.

ಅಲ್ಲಯ್ಯ ತಿಂಮ ಕಲೆಗೂ ಧರ್ಮಕ್ಕೂ ಯಾವುದೇ ತಕರಾರುಗಳು ಯಾವತ್ತಿಗೂ ಬಂದಿಲ್ಲ ಕಣಯ್ಯ. ಅದೇನಾದರೂ ಬಂದಿದ್ದರೆ ನಿನ್ನಂತಹ ಮನೆಮುರುಕರಿಂದಲೇ ಹೊರತು ಇನ್ನಾರಿಂದಲ್ಲವೇ ಅಲ್ಲ.

ಆವತ್ತು ಹಿಂದೂ ಮುಸ್ಲಿಮರೆನ್ನದೇ ಮುಗಿಬಿದ್ದು ನೋಡುತ್ತಿದ್ದ ದೂರದರ್ಶನದ ಹಿಂದಿ 'ಮಹಾಭಾರತ' ಸೀರಿಯಲ್ಲಿನ ಸಂಭಾಷಣೆ ಬರೆದಂತವರು ಓರ್ವ ಮುಸಲ್ಮಾನನೇ. ಅವರು ರಾಹಿ ಮಾಸೂಮ್ ರಾಝಾ. ಸೀರಿಯಲ್ ಶುರುವಾಗುವ ಮೊದಲೇ ಅವರ ಹೆಸರು ಟಿವಿ ಪರದೆಯಲ್ಲಿ ಕಾಣಿಸಿಕೊಳ್ಳಲೇ ಬೇಕು ಸಂತರದಷ್ಟೇ ನಿನ್ನ ಧರ್ಮರಾಯ, ಭೀಮ, ಶ್ರೀಕೃಷ್ಣರ ಮುಖದರ್ಶನ ಭಾಗ್ಯ. ಹಿಂದೆ ನಾಟಕಗಳಲ್ಲಿ ಕಡ್ಡಾಯವಾಗಿ ಹಾಡುತ್ತಿದ್ದ "ನಟವರ ಗಂಗಾಧರ ಉಮಾ ಶಂಕರಾ.." ಬರೆದವರು ಜನಪದ ವಿದ್ವಾಂಸ ಕರೀಮ್ ಖಾನ್ ಸಾಹೇಬರು ಕಣಯ್ಯ.

ಬಹಳ ಹಿಂದೆ ವಾಟ್ಸಪ್‌ನಲ್ಲಿ ಹಾಸ್ಯ ತುಣುಕೊಂದು ಹರಿದಾಡುತಿತ್ತು, ಅದು ಗಂಟಲು ಕಟ್ಟಿದ ಹಾಡುಗಾರನ ಬದಲು ಆತನ ಮುಸಲ್ಮಾನ ಶಿಷ್ಯ ಭಾಗ್ಯದ ಲಕ್ಷ್ಮಿ ಹಾಡನ್ನು ಮುಂದುವರೆಸುವ ಸನ್ನಿವೇಶ. ಆತ ಅದನ್ನು ಹಾಡುತ್ತಾ "ಭಾಗ್ಯಂದು ಲಕ್ಷ್ಮಿಗೆ ಬಾರಮ್ಮ, ಶುಕ್ರವಾರದ ನಮಾಜು ಟೈಮಿಗೆ" ಎಂದು ವಿಚಿತ್ರವಾಗಿ ಹಾಡೋ ಹಾಡದು (ಇದೇರೀತಿ ಭಯಂಕರ ಪಾಪ್ಯುಲರ್ ಆದ 'ಪ್ಯಾರ್‌ಗೆ ಆಗ್ಬಿಟ್ಟೈತೆ' ಹಾಡು ಗೊತ್ತಲ್ಲ). ಇಂತಹ ವ್ಯಂಗ್ಯಗಳೇನೇ ಇದ್ದರೂ ಇಲ್ಲಿನ ಮುಸಲ್ಮಾನರಿಗೂ ಹಿಂದೂ ಧಾರ್ಮಿಕ ಸಂಬಂಧಿತ ಕಲೆಗೂ ಹಾಡುಗಳಿಗೂ ಯಾವ ಕಟ್ಟುಪಾಡುಗಳು ಇಲ್ಲ. ಕಣಯ್ಯ..

ಎರಡು ಮೂರು ದಶಕಗಳಿಂದ ಕರಾವಳಿಯಲ್ಲಿ ಮಹಮ್ಮದ್ ಗೌಸ್ ಎಂಬ ಯಕ್ಷಗಾನ ಕಲಾವಿದರು ಯಾವ ತಕರಾರುಗಳಿಲ್ಲದೇ ಖ್ಯಾತರಾಗಿದ್ದಾರೆ. ಇದೇ ರೀತಿ ಜಬ್ಬಾರ್ ಸಮೋ ಎನ್ನುವ ಯಕ್ಷಗಾನ ಕಲಾವಿದರ ಕಲಾವಂತಿಕೆಯನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ತಾಳಮದ್ದಲೆಯಲ್ಲಿನ ಅವರ ಸ್ಪಷ್ಟ ಮಾತುಗಾರಿಕೆ ಅದ್ಯಾವನೋ ಅಂದ "ಭಾಗ್ಯಂದು ಲಕ್ಷ್ಮಿಗೆ" ಎನ್ನುವ ಹಾಸ್ಯವನ್ನು ಕಸದಬುಟ್ಟಿಗೆ ಸೇರಿಸುವಂತಿತ್ತು. ಸುಮಾರು ಹದಿನೈದು ವರ್ಷಗಳ ಹಿಂದೆ ಕರ್ಣನ ಮುಖ್ಯ ಪಾತ್ರದಲ್ಲಿ ಅವರ ಮಾತುಗಾರಿಕೆಯನ್ನು ನಾನು ಕಂಡಿದ್ದೆ.

ಸುಹಾನಾರಂತವರು ಬರ್ತಾರೆ, ಪ್ರತಿಭೆಯಿದ್ದರೆ ಗೆದ್ದೂ ಮುಂದುವರೆಯುತ್ತಾರೆ. ಆದರೆ ನಿಮ್ಮಂಥವರು ಮಾತ್ರ ಅವರು ಎಡವುದನ್ನೇ ಹೊಂಚಿ ಕಾಯುತ್ತಿರುವಿರಿ. ಇದು ಸತ್ಯ. ಶಾರೂಖ್ ದೇವರ ಕೋಣೆಯಲ್ಲಿ ಚಪ್ಪಲಿ ಹಾಕಿದ, ಅಮೀರ್ ಖಾನ್ ಇನ್ನೊಂದು ಮಾಡಿದ ಎಂದೆಲ್ಲ ಎತ್ತಿಕಟ್ಟಿ ಹೋಗುವವರು ಕಲಾಪ್ರೇಮಿಗಳಲ್ಲ. ನಿಮ್ಮಂಥ ಬರಡು ವ್ಯಕ್ತಿಗಳು ಮಾತ್ರ.


ಅದಕ್ಕೇ ಶಬನಾ ಆಜ್ಮಿ ಹೇಳಿದ್ದು "ನಾನು ಬುರ್ಖಾ ಹಾಕಬೇಕು ಅಂದರೆ ಹಾಕುವುದಿಲ್ಲ. ಇನ್ನ್ಯಾರೋ ಹಾಕಬಾರದು ಎಂದರೆ ಹಾಕುತ್ತೇನೆ. ಇವೆಲ್ಲ ನಮ್ಮ ಸ್ವತಂತ್ರ ನಿರ್ಧಾರಗಳು. ಮೂರನೆಯ ವ್ಯಕ್ತಿ ಇವನ್ನು ನಿರ್ದೇಶಿಸು ವಂತಿಲ್ಲ" ಎಂದು.

ಮೀನಾಕುಮಾರಿ, ನರ್ಗಿಸ್, ಖುಷ್ಬೂ, ಪರ್ವೀನ್ ಬಾಬಿ, ಜೀನತ್ ಅಮಾನ್, ಶಬನಾ ಆಜ್ಮಿ... ಅಷ್ಟೇ ಯಾಕೆ ಮಾಜಿ ಅಯ್ಯಂಗಾರಿ ಬಿಜೆಪಿಯ ಹೇಮಮಾಲಿನಿ (ಧರ್ಮೇಂದ್ರ ಕಾನೂನಿನ ಪ್ರಕಾರ ಎರಡನೇ ಮದುವೆಗಾಗಿ ಮುಸಲ್ಮಾನನಾಗಿದ್ದ) ಯಂತಹ ಅನೇಕ ಮುಸಲ್ಮಾನ ಕಲಾವಿದರು ಯಾವ ತಕರಾರುಗಳಿಲ್ಲದೇ ಚಲನ ಚಿತ್ರಜಗತ್ತನ್ನೇ ಆಳಿದಂತವರು. ಈ ಸುಹಾನಾ ವಿರೋಧ ಕೆಲಸವಿಲ್ಲದವರ ಕೈವಾಡವೇ ಹೊರತು ನಿಮ್ಮಂತವರಿಗೆ ಯಾವ ಟಾನಿಕ್ಕಿನ ಶಕ್ತಿಯನ್ನೂ ಕೊಡಲಾರದಯ್ಯ. ಅಷ್ಟಕ್ಕೂ ನಿನ್ನದೇ ಪಕ್ಷದ ಮನುವಾದಿಗಳು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಕೀಳಾಗಿ ಮಾತನಾಡಿದ ಸಂದರ್ಭಗಳು ನೂರಾರಿವೆ. ಸುಹಾನಾಳಿಗೆ ನೀನು ಬೆಂಬಲ ಕೊಡುವ ಮೊದಲು ಅವನ್ನೆಲ್ಲ ಸುಧಾರಿಸಿ ಕೊಂಡು ಬರುವಂತವನಾಗುವುದೊಳ್ಳೆಯ ದಲ್ಲವೇ..!!

- ಓದುಗ, ಬೆಂಗಳೂರು

ಮಸಿ ಬಳಿದವರ ಮುಖಕ್ಕಿಷ್ಟು...

...ೀವು ಮುಟ್ಟಿದ್ದೆಲ್ಲಾ ಕಪ್ಪು
...ಂದಹಾಗೆ
...ಚಟ್ಟಿಗಳನ್ನು ಹಿಡಿಯುವ ಉಸಾಬರಿ
...ಮಗೇತಕೆ ಸ್ವಾಮಿ?
*****
...ಮಸಿ ತಾಗುವುದೇ
...ಅವಮಾನವೆಂದಾದರೆ
...ಅದು ಮೊದಲು ತಾಗಿದ್ದು
...ಬಳಿದವರ ಕೈಗಳಿಗೆ!
*****
...ೋಳಿಯಂದು
...ಮಸಿ ಬಳಿದರೆಂದು
...ೀಸರಿಸಬೇಡಿಯಣ್ಣಾ...
...ಳ್ಳಿ ಗಂಡಂದಿರಿಗೆ
...ಬಿದಿರುವುದು
...ದೊಂದೇ ಬಣ್ಣ!
*****
...ಸಿ ಹಚ್ಚುವವರದೇ ಮಾತು




ಮಸಿ ಹಚ್ಚುವವರದೇ ಕ್ರಿಯೆ
ಈ ಊರಿನಲ್ಲಿ...
ಬೆಳಕು ಹಂಚುವವರಿಗೆ
ದಾರಿ ಕಾಣದಾಗಿದೆ!
*****
ಮಸಿ ಬಳಿದ ಪುಂಡರಿಂದ
ಒದ್ದೆ ಇದ್ದಿಲನ್ನಷ್ಟೇ
ಹಿಂಡಲಾದೀತು...
ಸುಡು ಕೆಂಡವನ್ನಲ್ಲ!
*****
ಸುಡು ಬಿಸಿಲ ಸೂರ್ಯನೇ...
ಮಸಿ ಬಳಿದವರ ಮುಖಕ್ಕಿಷ್ಟು
ಬೆಂಕಿ ಹಾಕ...
ಬೆಳಕೆಂದರೆ ಅವರಿಗಾಗದು!

(ಮಾರ್ಚ್ 12 ರಂದು ದಾವಣಗೆರೆಯಲ್ಲಿ 'ಗೌರಿ ಲಂಕೇಶ್' ಪತ್ರಿಕೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಯೋಗೇಶ್ ಮಾಸ್ಟರ್ ಅವರಿಗೆ ಮಸಿ ಬಳಿದ ಘಟನೆಯನ್ನು ಖಂಡಿಸಿ..)

■ ವಿಲ್ಸನ್ ಕಟೀಲ್


ಸುಹಾನಾ ಪ್ರಕರಣ: ಟೀಆರ್‌ಪಿಗಾಗಿ ಚಾನೆಲ್ಲಿನವರು ಹುಟ್ಟುಹಾಕುವ ಕೃತ್ರಿಮ ವಿವಾ



ಜೀ ಟಿವಿಯಲ್ಲಿ ಸುಹಾನಾ ಎಂಬ ಮುಸ್ಲಿಂ ಹುಡುಗಿಯ ಹಿಂದೂ ಭಜನೆಯ ಬಗ್ಗೆ ಎದ್ದಿರುವ ವಿವಾದ ಅದೇ ಟಿವಿಯವರು ಟಿಆರ್‌ಪಿಗಾಗಿ ಎಬ್ಬಿಸಿರುವ ಧೂಳು ಮಾತ್ರ. ವಿನಾಕಾರಣ ಮುಸ್ಲಿಮರ ಮೇಲೆ ಗೂಬೆ ಕೂರಿಸ ಲಾಗುತ್ತಿದೆ. ಸುಹಾನಾ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲಿಮರ ನಕಲಿ ಐಡಿಯಲ್ಲಿ ಬರೆದವರೂ ಟಿವಿಯವರೇ ಹಾಗೂ ಅದರ ಬಗ್ಗೆ ಪ್ಯಾನೆಲ್ ಚರ್ಚೆ ಹುಟ್ಟುಹಾಕಿದವರೂ ಅವರೇ. ಮೂರ್ಖರಾಗಿದ್ದು ಮಾತ್ರ ಸಾಮಾನ್ಯ ಕನ್ನಡಿಗರು.

1940 ರ ದಶಕಗಳಿಂದಲೂ ಮುಸ್ಲಿಂ ಗಾಯಕಿಯರು ಹಾಗೂ ನಾಯಕಿಯರು ಹಿಂದೂ ದೇವರ ಭಜನೆ ಹಾಡುವುದು ಹಾಗೂ ಹಿಂದೂ ದೇವರ ಪೂಜೆ ಮಾಡುವ ದೃಶ್ಯಗಳು ಸಾವಿರಾರು ಹಿಂದಿ ಸಿನಿಮಾಗಳಲ್ಲಿ ಬಂದಿದೆ. ಆದರೆ ಯಾರೂ ಆಕ್ಷೇಪ ಎತ್ತಿಲ್ಲ. ಶಂಶಾದ್ ಬೇಗಮ್ ಮತ್ತು ಸುರೈಯ್ಯ ಎಂಬ ಮುಸ್ಲಿಂ ಗಾಯಕಿಯರು 1940-50 ರ ದಶಕದಲ್ಲಿಯೇ ಅನೇಕ ಹಿಂದೂ ಭಜನೆ ಹಾಡಿದ್ದಾರೆ. ಮೀನಾಕುಮಾರಿ, ವಹೀದಾ ರೆಹಮಾನ್, ನರ್ಗೀಸ್, ಮಧುಬಾಲ, ಮುಮತಾಜ್, ತಬ್ಬು, ಶಬಾನಾ ಅಜ್ಮೀ ಮುಂತಾದ ಪ್ರಸಿದ್ಧ ನಾಯಕಿಯರು ಹಿಂದೂ ದೇವರ ಭಜನೆ ಅಥವಾ ಪೂಜೆ ಮಾಡುವ ದೃಶ್ಯಗಳಲ್ಲಿ ಅನೇಕ ಬಾರಿ ನಟಿಸಿದ್ದಾರೆ. ಅವಕ್ಕೆ ಯಾರೂ ಆಕ್ಷೇಪ ಎತ್ತಿಲ್ಲ. ದಕ್ಷಿಣ ಭಾರತದಲ್ಲೂ ಖುಷ್ಬೂರಂತಹ ಮುಸ್ಲಿಂ ನಾಯಕಿಯರು ಅನೇಕ ಹಿಂದೂ ದೇವರ ಭಜನೆ ಮತ್ತು ಹಿಂದೂ ದೇವರ ಪೂಜೆಯ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದಾರೆ. ದಕ್ಷಿಣದಲ್ಲಿಯೂ ಯಾರೂ ಆಕ್ಷೇಪಣೆ ಎತ್ತಿಲ್ಲ.

ಹಿಂದಿ ಟಿವಿಯ ಅತ್ತೆ-ಸೊಸೆ ಸಿರಿಯಲ್ಲುಗಳಲ್ಲಿ ನೂರಾರು ಮುಸ್ಲಿಂ ನಟ-ನಟಿಯರು ಇದ್ದಾರೆ. ಪ್ರತಿ ಹತ್ತು ಎಪಿಸೋಡ್‌ಗಳಲ್ಲಿ ಒಂದರಲ್ಲಿಯಾದರೂ ಈ ಮುಸ್ಲಿಂ ನಟಿಯರು ಹಿಂದೂ ದೇವರೆದುರು ನಿಂತು ದೇವರನಾಮ ಹಾಡಿ ಅಥವಾ ಪೂಜೆ ಮಾಡಿ ಅತ್ತೆಯನ್ನು ಖುಷಿಪಡಿಸುವ ದೃಶ್ಯಗಳು ಇದ್ದೇ ಇರುತ್ತವೆ. ಇದಕ್ಕೂ ಯಾರೂ ಆಕ್ಷೇಪ ಎತ್ತಿಲ್ಲ.



ಕನ್ನಡ ಅಥವಾ ಹಿಂದಿ ಬಿಗ್-ಬಾಸ್ ರಿಯಾಲಿಟಿ ಶೋ ನಡೆಯುವಾಗ ಅದರಲ್ಲಿಯ ಪಾತ್ರಧಾರಿಗಳು ಜೋರಾಗಿ ಜಗಳಾಡುವ, ಅಳುವ, ಕಿರುಚಾಡುವ ಹಸಿಬಿಸಿ ದೃಶ್ಯಗಳು ಇದ್ದೇ ಇರುತ್ತವೆ. ಅಷ್ಟೇ ಅಲ್ಲ ಈ ಜಗಳದ ಅಥವಾ ಅಳುವ ದೃಶ್ಯಗಳ ಬಗ್ಗೆ ದೊಡ್ಡದಾಗಿ ಬಿಗ್-ಬಾಸ್ ಶೋನವರೇ ಬೇರೆ ಟಿವಿ ಚಾನೆಲ್ಲುಗಳಲ್ಲಿ ಪ್ಯಾನೆಲ್ ಚರ್ಚೆ ಅಥವಾ ಪತ್ರಿಕೆಗಳಲ್ಲಿ ಓದುಗರ ಚರ್ಚೆ ಹುಟ್ಟು ಹಾಕುತ್ತಾರೆ. ಇದನ್ನು ನಿಜವಾದ ವಾದ-ವಿವಾದ ಎಂದು ಮುಗ್ಧ ಓದುಗರು ತಿಳಿದು ಆ ಬಿಗ್-ಬಾಸ್ ಶೋ ಬಗ್ಗೆ ಆಸಕ್ತಿ ತಳೆದು ಅದನ್ನು ನೋಡಲು ಶುರುಮಾಡುತ್ತಾರೆ. ಹೀಗೆ ಕೃತ್ರಿಮ ವಾದ-ವಿವಾದ ಹುಟ್ಟುಹಾಕಿ ವೀಕ್ಷಕರಲ್ಲಿ ಹೊಸದಾಗಿ ಆಸಕ್ತಿ ಹುಟ್ಟಿಸಿ ಟಿಆರ್‌ಪಿ ಏರಿಸುವ ತಂತ್ರ ತುಂಬಾ ಹಳೆಯದು.

ಈಗ ಸುಹಾನಾಳ ವಿಷಯದಲ್ಲಿಯೂ ಆ ಚಾನೆಲ್ಲಿನವರೇ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಹೆಸರಿನಲ್ಲಿ ವಾದ-ವಿವಾದ ಹುಟ್ಟಿಹಾಕಿ ಭರ್ಜರಿ ಟಿಆರ್‌ಪಿ ಏರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡತಿ ಸುಹಾನಾಳ ಜತೆ ಆ ಶೋನ ಒಬ್ಬ ಜಡ್ಜ್ ಹಿಂದಿ/ಉರ್ದು ಭಾಷೆಯಲ್ಲಿ ಮಾತನಾಡಿ ತನ್ನ ಮಹಾ ಮೂರ್ಖತನ ತೋರಿದನು. ಅನಗತ್ಯವಾಗಿ ಬುರ್ಖಾದ ವಿಷಯ ಶೋನಲ್ಲಿ ತೂರಿ ಬಿಡಲಾಯಿತು. ಸುಹಾನಾ ವಿವಾದದಲ್ಲಿ ಕೆಲವು ಸಂಕುಚಿತ ಹಿಂದೂತ್ವವಾದಿ ರಾಜಕಾರಣಿಗಳು ತೂರಿಕೊಂಡು ಇಲ್ಲಿಯೂ ತಮ್ಮ ಮುಸ್ಲಿಂ ದ್ವೇಷದ ಸಂಕುಚಿತ ಅಜೆಂಡಾ ಸೇರಿಸಿ ಬೇಳೆ ಬೇಯಿಸಿಕೊಳ್ಳಲು ಮರೆಯಲಿಲ್ಲ.

ವಿವಾದ ಹೆಚ್ಚಿದ ನಂತರ ಸುಹಾನಾ ಮತ್ತು ಅವಳ ಪಾಲಕರು ಹಾಗೂ ಸಂಬಂಧಿಕರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆ ಪ್ರಕಾರ, ಆ ಟಿವಿ ಚಾನೆಲ್ಲಿನವರು ತುಂಬಾ ಮುಂಚಿತವಾಗಿ ಸುಹಾನಾಳಿಗೆ ತರಬೇತಿ ಕೊಟ್ಟು, ಜಡ್ಜ್‌ಗಳು ಬರೆದು ಕೊಟ್ಟ ಶಬ್ದಗಳನ್ನೇ ಅವಳು ತನ್ನ ಬಾಯಿಂದ ಹೇಳಿ ವಿವಾದ ಸೃಷ್ಟಿಸಿದರೆ ಮಾತ್ರವೇ ಅವಳನ್ನು ಸ್ಪರ್ಧೆಯ ಅಂತಿಮ ಹಂತಕ್ಕೆ ಕಳುಹಿಸುವುದು ಎಂದು ಆಮಿಷ ಒಡ್ಡಿದ್ದಲ್ಲದೇ ಅವಳು ಸಹಕರಿಸದಿದ್ದರೆ ಅವಳನ್ನು ಸ್ಪರ್ಧೆಯಿಂದ ಹೊರಹಾಕುವುದಾಗಿ ಬೆದರಿಸಿದ್ದರಂತೆ. ಇದೇ ತರಹ ಬೇರೆ ಬೇರೆ ರಿಯಾಲಿಟಿ ಶೋಗಳಿಗೆ ಬರುವ ಸ್ಪರ್ಧಿಗಳಿಗೆ ಆಯಾ ಚಾನೆಲ್ಲಿನವರು ಇಂತಹದ್ದೇ ನಿಬಂಧನೆಗಳನ್ನು ಹಾಕಿ ಸ್ಪರ್ಧಿಗಳು ತಮ್ಮ ಜೀವನದಲ್ಲಿ ನಿಜವಾಗಿ ನಡೆಯದಿರುವ ಕಾಲ್ಪನಿಕ ಕಹಿ ಘಟನೆಯ ಕಟ್ಟುಕಥೆ ಹೇಳಿ ವೇದಿಕೆಯಲ್ಲಿಯೇ ಹೇಗೆ ಜೋರಾಗಿ ಅಳಬೇಕು ಎಂದು ಕಲಿಸಿಕೊಡುತ್ತಾರೆ ಎಂದು ಅನೇಕ ಸ್ಪರ್ಧಿಗಳೇ ಹೇಳುತ್ತಾರೆ. ಇದು ಹಿಂದಿ ಮತ್ತು ಇತರ ಭಾಷೆಯ ರಿಯಾಲಿಟಿ ಶೋಗಳಿಗೂ ಅನ್ವಯ. ಎಲ್ಲಾ ರಿಯಾಲಿಟಿ ಶೋಗಳಲ್ಲಿ ಸ್ಪರ್ಧಿಗಳು ವೇದಿಕೆಯಲ್ಲಿ ಭಾವುಕರಾದಂತೆ ನಟಿಸಿ ಬಿಕ್ಕಿಬಿಕ್ಕಿ ಅಳುವುದು ಎಲ್ಲವೂ ಕೃತ್ರಿಮ. ಹೀಗಾಗಿ ಸುಹಾನಾಳ ಹಾಡಿನ ವಿಷಯದಲ್ಲಿ ಹುಟ್ಟಿರುವ ವಿವಾದಗಳೆಲ್ಲಾ ಅದೇ ಚಾನೆಲ್ಲಿನವರು ಟಿಆರ್‌ಪಿಗಾಗಿ ಹುಟ್ಟು ಹಾಕಿರುವ ಕೃತ್ರಿಮ ವಿವಾದ ಅಷ್ಟೇ ಎಂದು ಪರಿಗಣಿಸಿ ಸಾಮಾನ್ಯ ಕನ್ನಡಿಗರು ಈ ವಿವಾದವನ್ನು ನಿರ್ಲಕ್ಷಿಸಬೇಕು.

- ರಾಮಕೃಷ್ಣ ಕುಲಾಲ್, ಬೆಂಗಳೂರು

ಇವತ್ತಿಗೂ ಕಾಡುವ ಪಿ.ಲಂಕೇಶ್

ಕೆ.ಎಸ್.ನಿಸಾರ್ ಅಹಮದ್ ಆದಿಯಾಗಿ ಸಮಾಜದ ಎಲ್ಲಾ ಮಾನವತಾವಾದಿಗಳು ಮೆಚ್ಚಿದ ಯುವ ಗಾಯಕಿ ಸುಹಾನಾ ಸೈಯದ್‌ರನ್ನು ಬೆಂಬಲಿಸಿ 'ಸುಮಧುರ ಸುಹಾನಾ' ಎಂದು ಗೌರಿ ಲಂಕೇಶರು ತಮ್ಮ 'ಕಂಡಹಾಗೆ' ಅಂಕಣದಲ್ಲಿ ಹಾಗು ಪಾಸುರವರು ತಮ್ಮ 'ಅಂಚಿನಿಂದ' ಅಂಕಣದಲ್ಲಿ ಹಲವು ಪ್ರಶ್ನೆಗಳನ್ನು ಎತ್ತುತ್ತ ಬರೆದದ್ದು ಸಮಯೋಚಿತವಾಗಿತು.

ಚಾನಲ್ ಒಂದರ ಆಡಿಷನ್‌ಗೆ ಬಂದ ನೂರಾರು ಗಾಯಕರಲ್ಲಿ ಮೂವತ್ತು ಜನರನ್ನು ಆಯ್ಕೆ ಮಾಡಿ, ವೇದಿಕೆಯಲ್ಲಿ ಹಾಡುವ ಅಂತಿಮ ಹದಿನೇಳು ಜನರ ಆಯ್ಕೆ ಪ್ರಕ್ರಿಯೆಯಲ್ಲಿ ಸುಹಾನಾ ಸೈಯದ್ ಹಾಡಿದ ಮೊದಲ ಹಾಡಿಗೆ ಧರ್ಮದ ಕಾರಣದಿಂದ ಇಷ್ಟೊಂದು ಚರ್ಚೆ ಆಗಿದ್ದು ವಿಪರ್ಯಾಸ. ಹಾಡಿನ ನಂತರ ಆಕೆ "ನನ್ನಂತಹ ಪ್ರತಿಭೆಗಳು ಧರ್ಮ, ಸಂಪ್ರದಾಯದ ಕಟ್ಟುಪಾಡುಗಳಿಂದ ಹೊರಬರಬೇಕು" ಎನ್ನುವ ನೇರ, ದಿಟ್ಟ, ಸ್ಪಷ್ಟ ಮಾತುಗಳನ್ನು ಕೇಳಿ ನಾನು ನನಗೆ ಅರಿವು ಇಲ್ಲದೆ ಎದ್ದು ನಿಂತು ಚಪ್ಪಾಳೆ ತಟ್ಟಿದೆ.

ದೀಪಕ್ ಕಲ್ಲೆರೆ ಅವರ ಪತ್ರ ನನ್ನದೇ ಅನಿಸಿಕೆಗಳನ್ನು ಬಿಂಬಿಸುವಂತೆ ಇತ್ತು, ತುಂಬಾ ಇಷ್ಟವಾಯಿತು. ಮಂಗಳೂರಿನ ಹಿರಿಯ ಗೆಳೆಯ ಮುನೀರ್ ಕಾಟಿಪಳ್ಳ ಅವರು ಮಾರ್ಚ್ ಎಂಟರಂದು "ನನ್ನನ್ನು ಜಾತ್ಯತೀತನ್ನಾಗಿ ಮಾಡಿದ್ದು, ಚಳವಳಿಗಳನ್ನು ಕಟ್ಟಲು ಕಾರಣವಾಗಿದ್ದು ಪಿ. ಲಂಕೇಶರು" ಎಂದು ಫೇಸ್‌ಬುಕ್‌ನ ತಮ್ಮ ವಾಲ್‌ನಲ್ಲಿ ಬರೆದುಕೊಂಡಿದ್ದರು. ಇದನ್ನು ನೋಡಿದಾಗ ಮುನೀರ್ ಕಾಟಿಪಳ್ಳರಂತಹ ಅದೆಷ್ಟೋ ಯುವ ಮನಸ್ಸುಗಳ ರೂಪಿಸಬೇಕಾದ ಲಂಕೇಶ್‌ರು ನಮ್ಮ ನಡುವೆ ಇಲ್ಲದಿರುವುದು ಬೇಸರ ಎನಿಸಿತು. ಪ್ರತಿ ಮಾರ್ಚ್‌ನಲ್ಲಿ ನಮ್ಮಲ್ಲಿ ಒಂದೇ ಪ್ರಶ್ನೆ 'ಲಂಕೇಶರು ಇದ್ದಿದ್ದರೆ?'

- ಮಂಜು ದಿ.ಎಲ್, ಬೆಂಗಳೂರು



ಬಲಪಂಥೀಯ ಉಗ್ರವಾದಿಗಳ ರಣಹೇಡಿ ಕುಚೇಷ್ಟೆ


ಮಾರ್ಚ್ 12ರಂದು ದಾವಣಗೆರೆಯಲ್ಲಿ ಲಂಕೇಶ್ ಅವರ 82ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಭಾಗವಹಿಸಿದ್ದ ಪ್ರಗತಿಪರ ಲೇಖಕ ಯೋಗೇಶ್ ಮಾಸ್ಟರ್ ಅವರ ಮೇಲೆ ಆಗಂತುಕರು ಮಸಿ ಎರಚಿರುವುದನ್ನು ಅಖಿಲ ಭಾರತ ಪ್ರಜಾ ವೇದಿಕೆ (ಎಐಪಿಎಫ್) ಉಗ್ರವಾಗಿ ಖಂಡಿಸುತ್ತದೆ.

ಕರ್ನಾಟಕದ ಅನೇಕ ಕಡೆ ಇಂತಹ ರಣಹೇಡಿ ಕುಚೇಷ್ಟೆಯನ್ನು ಬಲಪಂಥೀಯ ಉಗ್ರವಾದಿಗಳು ಮಾಡುತ್ತಲೇ ಬರುತ್ತಿದ್ದಾರೆ. ಮಾಸ್ಟರ್ ಅವರ ಮೇಲೆ ದಾಳಿ ಮಾಡುವ ವೇಳೆಯಲ್ಲಿ ಉಪಯೋಗಿಸಿದ ಅವಾಚ್ಯ ಶಬ್ದಗಳು ಮತ್ತು ಮಾಸ್ಟರ್ ಹಿಂದೂ ಧರ್ಮದ ವಿರೋಧಿ ಎಂದು ಆರೋಪಿಸಿರುವುದು, ಈ ಕೃತ್ಯವನ್ನು ಹಿಂದೂ ಫ್ಯಾಸಿಸ್ಟ್‌ರು ಎಸಗಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಇಂತಹ ಸಮಾಜ ವಿರೋಧಿಗಳನ್ನು ತಕ್ಷಣ ಬಂಧಿಸಬೇಕೆಂದು ಸರ್ಕಾರವನ್ನು ಅಖಿಲ ಭಾರತ ಪ್ರಜಾ ವೇದಿಕೆ ಒತ್ತಾಯಿಸುತ್ತದೆ.


- ಡಾ. ವಿ. ಲಕ್ಷ್ಮೀನಾರಾಯಣ (ರಾಜ್ಯ ಸಂಚಾಲಕ, ಎಐಪಿಎಫ್) ಮತ್ತು ಇ.ರತಿ ರಾವ್ (ಅಧ್ಯಕ್ಷರು, ಪಿಯುಸಿಎಲ್), ಮೈಸೂರು

ಬಿಜೆಪಿಯವರಿಗೆ ರಾಹುಲ್ ಗಾಂಧಿ ಮೇಲೆ ವಿಶ್ವಾಸ



ಮಾರ್ಚ್ 11 ರ ಸಂಜೆ ಗೋವಾ ಚುನಾವಣೆ ಫಲಿತಾಂಶ ಸ್ಪಷ್ಟವಾದ ಒಂದು ಗಂಟೆಯ ಒಳಗಾಗಿ ದಿಲ್ಲಿಯಿಂದ ವಿಶೇಷ ವಿಮಾನದಲ್ಲಿ ಗೋವಾಕ್ಕೆ ಕಳುಹಿಸಿ ಕೊಟ್ಟ ಹಣ ಎಷ್ಟು ಗೊತ್ತೇ? ಬರೋಬ್ಬರಿ 250 ಕೋಟಿ ರೂಪಾಯಿಗಳು. ಎಲ್ಲವೂ ಕರೆನ್ಸಿ ಆಗಿರಲಿಲ್ಲ, ಹೆಚ್ಚಿನ ಪಾಲು ಚಿನ್ನದ ಗಟ್ಟಿಗಳಾಗಿದ್ದವು (ಇವೆಲ್ಲಾ ಬಿಜೆಪಿಯವರು ನೋಟು ರದ್ದತಿಗೆ ಮುಂಚೆಯೇ ಚಿನ್ನದ ಗಟ್ಟಿಯಾಗಿ ಪರಿವರ್ತಿಸಿದ ತಮ್ಮ ಭ್ರಷ್ಟಾಚಾರದ ಹಣ). ಗೋವಾದ ಎಂಟು ಜನ ಇತರ ಪಕ್ಷಗಳ ಶಾಸಕರನ್ನು ಖರೀದಿಸಲು ಒಬ್ಬೊಬ್ಬನಿಗೆ ತಲಾ 30 ಕೋಟಿ ರೂಪಾಯಿ ಕೊಡಲು ಈ 250 ಕೋಟಿ ಹಣ ವಿಶೇಷ ವಿಮಾನದಲ್ಲಿ ಗೋವಾಕ್ಕೆ ಅಮಿತ್ ಶಾ ಕಳುಹಿಸಿದ್ದಂತೆ. ಭ್ರಷ್ಟಾಚಾರದ ವಿರುದ್ಧ ಸರ್ಜಿಕಲ್ ಸ್ಟ್ರೈಕ್ ಎಂದಿದ್ದ ಮೋದಿ ಸ್ವತಃ ತಾನೇ ಭ್ರಷ್ಟಾಚಾರವನ್ನು ಉಪಯೋಗಿಸಿ ಕುದುರೆ ವ್ಯಾಪಾರ ಮಾಡಿ ಗೋವಾ ಹಾಗೂ ಮಣಿಪುರದಲ್ಲಿ ಸರಕಾರ ರಚಿಸಿದ್ದು ವಿಪರ್ಯಾಸವಾಗಿಲ್ಲವೇ? ವ್ಯಾಪಾರಿ ಬುದ್ಧಿಯ ಗುಜರಾತಿಗಳು ಎಂದೂ ಭ್ರಷ್ಟಾಚಾರವಿಲ್ಲದೇ ಇರಲು ಸಾಧ್ಯವೇ ಇಲ್ಲ ಬಿಡಿ. ಅವರು ಆಡೋದು ಶಾಸ್ತ್ರ ಇಕ್ಕೋದು ಗಾಳ!!

ದಿಗ್ವಿಜಯ ಸಿಂಗ್, ಕಪಿಲ್ ಸಿಬಾಲ್, ಗುಲಾಂ ನಬಿ ಆಜಾದ್, ಮನಿಷ್ ತಿವಾರಿ, ಅಭಿಷೇಕ್ ಸಿಂಘ್ವಿ ಮುಂತಾದವರು ಕಾಂಗ್ರೆಸ್ಸನ್ನು ನಿರ್ನಾಮ ಮಾಡಲು ಬಿಜೆಪಿಯಿಂದ ಸುಪಾರಿ ಪಡೆದಿದ್ದಾರೆ ಎಂಬ ಸುದ್ದಿಯಿದೆ. ಆದ್ದಾಗಿ ಅವರು ರಾಹುಲ್ ಗಾಂಧಿ ಎಂಬ ಪೆದ್ದುಗುಂಡನನ್ನು ಮುಂದೆ ಇಟ್ಟುಕೊಂಡು ಚುನಾವಣೆಗೆ ಹೋಗುತ್ತಿದ್ದಾರೆ. ರಾಹುಲ್ ಗಾಂಧಿ ನಾಯಕ ಆಗಿರುವವರೆಗೆ ಕಾಂಗ್ರೆಸ್ ಮೇಲೆ ಏಳುವುದು ಸಾಧ್ಯವಿಲ್ಲ ಎಂದು ಈ ಎಲ್ಲಾ ಹಿರಿಯ ಕಾಂಗ್ರೆಸ್ ನಾಯಕರಿಗೆ ಗೊತ್ತಿದ್ದರೂ ಅವರು ರಾಹುಲ್‌ನನ್ನು ಮುಂದುವರಿಸಲು ಕಾರಣ ಈ ನಾಯಕರಿಗೆ ಹಾಗೂ ಬಿಜೆಪಿಯವರಿಗೆ ಒಳಗಿಂದೊಳಗೆ ಕಾಂಗ್ರೆಸ್ ಮುಗಿಸಲು ಒಪ್ಪಂದವಾಗಿದೆ ಎಂದು ಬಿಜೆಪಿಯವರೇ ಒಪ್ಪಿಕೊಳ್ಳುತ್ತಿದ್ದಾರೆ. ರಾಹುಲ್ ಗಾಂಧಿ ಕಾಂಗ್ರೆಸ್ ನಾಯಕ ಆಗಿರುವವರೆಗೆ ಬಿಜೆಪಿಗೆ ಯಾವುದೇ ಭಯವಿಲ್ಲ ಎಂದು ಬಿಜೆಪಿಯವರೆಲ್ಲಾ ಬಹಿರಂಗವಾಗಿ ಹೇಳುತ್ತಿದ್ದಾರೆ. ರಾಹುಲ್ ಗಾಂಧಿಯನ್ನೇ ಕಾಂಗ್ರೆಸ್ ಮುಖಂಡನಾಗಿ ಮುಂದುವರಿಸಿದರೆ ಬಿಜೆಪಿಯವರು ಕಾಂಗ್ರೆಸ್ ನೇತಾರರಿಗೆ ನೂರು ಕೋಟಿ



ರೂಪಾಯಿ ಭಕ್ಷೀಸ್ ಕೊಡಲು ಸಿದ್ಧರಿದ್ದಾರಂತೆ. ಎಷ್ಟೊಂದು ವಿಶ್ವಾಸ ಬಿಜೆಪಿಯವರಿಗೆ ರಾಹುಲ್ ಗಾ ಸ್ವಯಂ-ವಿಧ್ವಂಸಕ ಶಕ್ತಿಯ ಮೇಲೆ.

- ವೀರಪ್ಪ ದಿ.ಎಸ್, ಮ

ಕಾಂಗ್ರೆಸ್, ಜೆಡಿಎಸ್ ಕೈಜೋಡಿಸದಿ ಸೋಲು ಕಟ್ಟಿಟ್ಟ ಬುತ್ತಿ

ಮೋದಿ ಅಲೆಯಿಂದಾಗಿ ತಮ್ಮ ಪಕ್ಷ ಪ್ರದೇಶದಲ್ಲಿ ಗೆದ್ದಿದ್ದು ಎಂದು ಬಿಜೆಪಿಯವರು ಬ ಕೊಚ್ಚುತ್ತಿದ್ದರೆ ಮಾಯಾವತಿಯವರು ಓ ಮಷಿನಿನಲ್ಲಿಯ ಗೋಲ್ಮಾಲ್‌ನಿಂದಾಗಿ ಬಿಜೆಪಿ ಎಂದು ಆರೋಪಿಸುತ್ತಿದ್ದಾರೆ. ಆದರೆ ಈಗ ಬ ಅಂಕಿಅಂಶಗಳನ್ನು ವಿಶ್ಲೇಷಣೆ ಮಾಡಿದರೆ ಬಿಹ ಆಗಿದ್ದು ಉತ್ತರ ಪ್ರದೇಶದಲ್ಲಿಯೂ ಆಗುತ್ತಿತ್ತು, ಬಿಜೆಪಿ ಧೂಳೀಪಟವಾಗುತಿತ್ತು, ಯಾಕೆಂದರೆ ಪ್ರದೇಶದಲ್ಲೂ ಈಗ ಬಿಜೆಪಿಗೆ ಸಿಕ್ಕಿರುವ ಮತ 39% ಮಾತ್ರ. ಆದರೆ ಮಾಯಾವತಿಗೆ ಶೇ.22 ಸಿಕ್ಕಿದ್ದರೆ ಅಖಿಲೇಶ್-ಕಾಂಗ್ರೆ ಮೈತ್ರಿಗೆ ಶೇ.24 ಅಜಿತ್ ಸಿಂಗರ ಆರ್‌ಎಲ್‌ಡಿ ಪಕ್ಷಕ್ಕೂ 5% ವೋಟು ಸಿಕ್ಕಿದೆ. ಒಂದುವೇಳೆ ಬಿಹಾರಿನಲ್ಲಿ ನಾಲ್ಕು ಮಹಾಮೈತ್ರಿ ಮಾಡಿದಂತೆ ಉತ್ತರ ಪ್ರದೇ ಮಾಯಾವತಿ-ಅಖಿಲೇಶ್-ಕಾಂಗ್ರೆಸ್-ಆರ್‌ಎಲ್ ನಾಲ್ಕು ಪಕ್ಷಗಳು ಮಹಾಮೈತ್ರಿ ಮಾಡಿಕೊಂಡಿದ್ದರೆ ಒಟ್ಟು ಶೇ.50 ಕ್ಕಿಂತಲೂ ಹೆಚ್ಚು ಮತ ಸಿಕ್ಕಿ 3 ಹೆಚ್ಚು ಸೀಟುಗಳು ಲಭ್ಯವಾಗುತ್ತಿದ್ದವು ಹಾಗೂ ಬ ನೂರಕ್ಕಿಂತಲೂ ಕಡಿಮೆ ಸ್ಥಾನಗಳು ದಕ್ಕುತ್ತಿದ್ದವು.

ಕೆಲವರು ಹೇಳುವಂತೆ ನೋಟು ರದ್ದತಿಯಿಂದ ವೋಟು ನಷ್ಟ ಆಗಿಲ್ಲ ಎಂದು ಹೇಳುತ್ತಿರುವುದು ಜತೆಗೆ ತ್ರಿವಳಿ ತಲಾಖ್‌ನಿಂದಾಗಿ ಮುಸ್ಲಿಂ ಮಹಿ ಮತ ಬಿಜೆಪಿಯತ್ತ ಹೋಗಿದೆ ಎನ್ನುವುದೂ ಯಾಕೆಂದರೆ 2014ರ ಲೋಕಸಭೆಯಲ್ಲಿ ಬಿಜೆಪಿಗೆ ಶೇ.44 ಮತ, ಆದರೆ ಈಗ ಸಿಕ್ಕಿದ್ದು ಕೇವಲ ಮತ. ಅಂದರೆ ಈಗ ಸುಮಾರು ಶೇ.5 ಕಡಿಮೆಯಾಗಿದೆ. ಇದು ನೋಟು ರದ್ದತಿಯ ಪರಿ ಆಗಿದೆ.

ಮೇಲಿನ ಪಾಠವನ್ನು ಕರ್ನಾಟಕದಲ್ಲಿ ಕಾಂಗ್ರೆ ಜೆಡಿಎಸ್ ಪಕ್ಷಗಳು ಅರ್ಥಮಾಡಿಕೊಂಡು ಮಾಡಿಕೊಂಡರೆ ಮುಂದಿನ ವರ್ಷದ ವಿಧಾನ ಚುನಾವಣೆಯಲ್ಲಿ ಕಾಂಗ್ರೆ-ಜೆಡಿಎಸ್ ಮೈತ್ರಿಕೂಟ 1



ಹೆಚ್ಚು ಸೀಟು ಗೆಲ್ಲುವುದು ನಿಶ್ಚಿತ. ಮೋದಿ ಅಮಿತ್ ಶಾ ಎಷ್ಟೇ ತಿಪ್ಪರಲಾಗ ಹಾಕಿದರೂ ಕರ್ನಾ ಕಾಂಗ್ರೆಸ್-ದೇವೇಗೌಡರ ಮೈತ್ರಿಕೂಟವನ್ನು ಸೋ ಕೇಸರಿ ಪಕ್ಷಕ್ಕೆ ಸಾಧ್ಯವಾಗಲಿಕ್ಕಿಲ್ಲ.

- ಆರ್.ಬಿ.ಶೆಣಾವ, ಮಂಗ


ಮೋದಿಯ ಔರಂಗಜೇಬು ತ

ಬಾಬ್ರಿ ಮಸೀದಿ ಧ್ವಂಸದ ಸಂಚನ್ನು ರೂಪಿಸಿದ ಜೋಷಿ, ಉಮಾಭಾರತಿ ಮುಂತಾದ 13 ಮಂದಿ ನೇತಾರರ ಮೇಲೆ ಆರೋಪ ಕೈಬಿಡಲಾಗಿತ್ತು. ಈಗ ಸಿಬಿಐ ಹಾಗೂ ಹಾಜೀ ಮೆಹಬೂಬ್ ಅಹ ಎಂಬವರ ಮೇಲ್ಮನವಿಯ ಆಧಾರದಲ್ಲಿ ಉಚ್ಚ ನ್ಯಾಯ ಈ ಆರೋಪವನ್ನು ಪುನರೂರ್ಜಿತಗೊಳಿಸುವ ಬಗ್ಗೆ ಮಾಡಲು ಮಾರ್ಚ್ 22 ರಂದು ನಿಗದಿ ಇದು ಬಿಜೆಪಿಗೆ ಕೆಟ್ಟ ಸುದ್ದಿ ಹಾಗೂ ಇತರ ಪಕ್ಷಗಳಿಗೆ ಒಳ್ಳೆಯ ಸುದ್ದಿ ಎಂದು ಜನರು ಭಾವಿಸಬಾರದು. ಕಾರಣ ಈ ಮೇಲ್ಮನವಿ 2015 ದಾಖಲಾಗಿದ್ದರೂ, ಎರಡು ವರ್ಷ ಸುಮ್ಮನಿದ್ದು ಒಮ್ಮೆಲೇ ಸಿಬಿಐ ವಕೀಲರು ಸುಪ್ರೀಂಕೋರ್ಟ್‌ನಲ್ಲಿ ಹಾಕಿ ಅಡ್ವಾಣಿಯವರ ಮೇಲಿನ ಪ್ರಕರಣವನ್ನು ಊರ್ಜಿತಗೊಳಿಸಲು ಕಾರಣವೇನು ಎಂಬುದು ಕು ಕಾರಿಯಾಗಿದೆ.


ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕಿಷ್ಣೆರಾಜ್ 4

ಪ್ರಭುತ್ವದ ಬಲೆಯಲ್ಲಿ ಸಿಕ್ಕು ನರಳುವ ಬೆಸ್ತ



ದಿ ನೆಟ್ (2016)
ನಿರ್ದೇಶನ: ಕಿಮ್ ಕಿ ಡುಕ್
ದೇಶ: ದಕ್ಷಿಣ ಕೊರಿಯಾ



ಕಳೆದ ಇಪ್ಪತ್ತು ವರ್ಷಗಳಲ್ಲಿ ಸಿನಿಮೋತ್ಸಾಹಿಗಳ ನಡುವೆ ಕಿಮ್ ಕಿ ಡುಕ್(ವಯಸ್ಸು 56)ನಷ್ಟು ಖ್ಯಾತಿ ಪಡೆದಿರುವ ಮತ್ತೊಬ್ಬ ವಿಷಿಯಾದ ಸಿನಿಮಾ ನಿರ್ದೇಶಕನಿಲ್ಲ. 1996ರಿಂದ 20 ವರ್ಷಗಳಲ್ಲಿ 22 ಚಿತ್ರಗಳನ್ನು ನಿರ್ದೇಶಿಸಿರುವ ಕಿಮ್ ಕಿ ಡುಕ್, ಸಿನಿಮಾ ಜಗತ್ತಿನ ಮೂರು ಖ್ಯಾತ ಸಿನಿಮೋತ್ಸವಗಳಾದ ಕ್ಯಾನ್ಸ್, ವೆನಿಸ್ ಹಾಗು ಬರ್ಲಿನ್ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ದಕ್ಕಿಸಿಕೊಂಡಿದ್ದಾನೆ. 2004ರಲ್ಲಿ ಬರ್ಲಿನ್ (ಸಮರಾಟನ್ ಗರ್ಲ್) ಹಾಗು ವೆನಿಸ್ (3 ಐರನ್) ಪ್ರಶಸ್ತಿಗಳನ್ನು ಪಡೆದು ಬೆರಗುಗೊಳಿಸಿದ ವಿಲಕ್ಷಣ ಪ್ರತಿಭೆ ಅವನದು. ಅವನ ಹೆಸರು ಗೊತ್ತಿಲ್ಲದವರಿಗೂ ಅವನ 'ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್... ಅಂಡ್ ಸ್ಪ್ರಿಂಗ್' ಪರಿಚಿತ. ಅವನ 'ಪೀಟಾ', 'ಬ್ಯಾಡ್ ಬಾಯ್', 'ದಿ ಐಸ್ಲ್', 'ಒನ್ ಆನ್ ಒನ್'ನಂತ ಸಿನಿಮಾಗಳಲ್ಲಿನ ದೃಶ್ಯದಲ್ಲಿ ಹೆಪ್ಪುಗಟ್ಟುವ ಹಿಂಸೆಯನ್ನು ಕಂಡು 'ಇವನು ಮೆಂಟಲ್ ಕನ್ರೀ' ಎಂದು ವಾಕರಿಸುವವರಿಗೆ, ಅವನ ಅಭಿಮಾನಿಗಳು '3 ಐರನ್', 'ಟೈಮ್', 'ಡ್ರೀಮ್', 'ಮೋಬಿಯಸ್', 'ದಿ ಬೋ'ದಂತಹ ಸಿನಿಮಾಗಳನ್ನು ತೋರಿಸಿ, 'ಇವುಗಳಲ್ಲಿ ಅದೃಶ್ಯವಾಗಿರುವ ಹಿಂಸೆಯನ್ನು ಕಾಣದವರ ಕಣ್ಣಿಗೆ ಅವನ ದೃಶ್ಯಾತ್ಮಕ ಹಿಂಸೆಗಳ ಅರ್ಥವಾದರೂ ಹೇಗೆ ತಿಳಿದೀತು!' ಎಂದು ಸವಾಲು ಹಾಕುವರು. ತನ್ನ ಸಿನಿಮಾ ಬದುಕಿನ ಇಪ್ಪತ್ತೇ ವರ್ಷಗಳಲ್ಲಿ 'ಕಿಮ್ ಕಿ ಡುಕ್‌ನ ಹತ್ತು ಅತ್ಯುತ್ತಮ ಸಿನಿಮಾಗಳು' ಎಂಬ ಪಟ್ಟಿಗಳು ತಯಾರಾಗುವಷ್ಟು ಮಟ್ಟಿಗೆ ಅವನ ಖ್ಯಾತಿ ಸೊಕ್ಕಿದೆ! ಸರಾಸರಿ ವರ್ಷಕ್ಕೊಂದು ಸಿನಿಮಾ ಮಾಡುತ್ತಿರುವ ಕಿಮ್‌ನ ಸಿನಿಮಾಗಳಿಗೆ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ ಜನ ಮುಗಿಬೀಳುವುದು ಸಾಮಾನ್ಯ. 2012ರ 'ಪೀಟಾ'ದ ನಂತರ ಮನದಲ್ಲಚ್ಚೊತ್ತುವ ಸಿನಿಮಾವನ್ನು ಕಿಮ್ ಕೊಡದೇ ಇರುವುದು, ಈ ವರ್ಷ ಅವನ ಪ್ರಸ್ತುತ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಾಗಿತ್ತು.

ಸಿನಿಮಾದ ಕಥಾ ಸಾರಾಂಶ

ನಮ್ ಚುಲ್ ವೂ ಉತ್ತರ ಕೊರಿಯಾವನ್ನು ದಕ್ಷಿಣ ಕೊರಿಯಾದಿಂದ ವಿಭಜಿಸುವ ನದಿಯಂಚಿನ ಹಳ್ಳಿಯಲ್ಲಿ ಬದುಕು ಸಾಗಿಸುತ್ತಿರುವ ಒಬ್ಬ ಬೆಸ್ತ. ದಿನವೂ ತನ್ನ 'ರಾಷ್ಟ್ರ'ದ ನದಿಯ ಭಾಗದಲ್ಲಿ ಬಲೆಯನ್ನು ಬೀಸಿ, ಸಿಕ್ಕ ಮೀನುಗಳನ್ನು ತಂದು ಮಾರಾಟ ಮಾಡಿ, ಹೆಂಡತಿ ಹಾಗು ಪುಟ್ಟ ಮಗಳ ಸಂಸಾರವನ್ನು ಪರಿದೂಗಿಸುತ್ತಿರುತ್ತಾನೆ. ಅವನ ಬದುಕಿಗೆ ಆಧಾರವಾಗಿರುವ ವಿಭಜನೆಯ ಗಡಿಯಾದ ನದಿಯ ಇಕ್ಕೆಲಗಳೂ 'ರಾಷ್ಟ್ರ'ಗಳ ಸರಹದ್ದಾಗಿ, ಸೈನ್ಯದ ಕಾವಲು ಪ್ರದೇಶಗಳಾಗಿವೆ. ದೈನಂದಿನ ಮೀನುಗಾರಿಕೆ ಮಾಡುವ ವೂನ ಬದುಕಿನ ಕಾರ್ಪಣ್ಯ ಬಲ್ಲ ಸೈನಿಕರು, ಅವನನ್ನು ಹೆಚ್ಚಾಗಿ ಪೀಡಿಸುತ್ತಿರುವುದಿಲ್ಲ. ಒಂದು ದಿನ, ತಾನು ಹರಡಿದ್ದ ಬಲೆಯಲ್ಲಿ ಸಿಕ್ಕ ಮೀನುಗಳನ್ನು ತೆಗೆದುಕೊಂಡು ಬರಲು ವೂ ನದಿಗಿಳಿಯುತ್ತಾನೆ. ಅಂದು ಮಾರುತ ದಕ್ಷಿಣ ಕೊರಿಯಾದ ದಂಡೆಯ ಕಡೆ ಬೀಸುತ್ತಿದ್ದು, ಅವನ ಮೆಷಿನ್ ದೋಣಿ ನಿಯಂತ್ರಣ ತಪ್ಪಿದರೆ, ಶತ್ರು ರಾಷ್ಟ್ರದ ನೀರಗಡಿ ಪ್ರವೇಶಿಸಬಹುದಾಗಿರುತ್ತದೆ-ಹಾಗೆಂದು ಸೈನಿಕರೂ ಅವನಿಗೆ ಎಚ್ಚರಿಸುತ್ತಾರೆ. ಆದರೆ ಲಾಗಾಯ್ತಿನ ಬೆಸ್ತನಾದ ಅವನಿಗೆ ಅದು ಸಾಮಾನ್ಯ ವಿದ್ಯಮಾನವೆನಿಸುತ್ತದೆ. ಅವತ್ತು ಅವಘಡವಾಗುತ್ತದೆ. ಅವನೇ ಹೂಡಿದ ಬಲೆ, ಅವನದೇ ದೋಣಿಯ ಮೆಷಿನ್‌ಗೆ ಸಿಕ್ಕು, ಮೆಷಿನ್ ಕೈಕೊಡುತ್ತದೆ. ಹರಿವ ನೀರು ದೋಣಿಯನ್ನು ದಕ್ಷಿಣ ಕೊರಿಯಾದ ದಂಡೆಗೆ ದೂಡುತ್ತದೆ. ವೂ ದಕ್ಷಿಣ ಕೊರಿಯಾದ ಬೇಹುಗಾರ ಪೊಲೀಸರ ಕೈಗೆ ಸಿಕ್ಕಿ ಬೀಳುತ್ತಾನೆ. ಈ ರೀತಿಯಲ್ಲಿ ದಕ್ಷಿಣ ಕೊರಿಯಾದ ದಡ ಸೇರುವವರು ಒಂದೋ, ಉತ್ತರ ಕೊರಿಯಾದ ಕಮ್ಯುನಿಸ್ಟ್ ಸರ್ವಾಧಿಕಾರದಿಂದ ಮುಕ್ತಿ ಪಡೆಯಲು ದಕ್ಷಿಣ ಕೊರಿಯಾಕ್ಕೆ ನುಸುಳುವ ವಲಸಿಗರು ಅಥವ ಉತ್ತರ ಕೊರಿಯಾ ನಿಯೋಜಿತ ಗೂಢಚಾರರು ಎನ್ನುವುದು ದಕ್ಷಿಣ ಕೊರಿಯಾದ ಬೇಹುಗಾರ ಸಂಸ್ಥೆಯ ಸ್ಥಾಪಿತ ನಿಲುವು. ವೂನನ್ನು ಕಠಿಣವಾದ ಹಿಂಸಾತ್ಮಕ ತನಿಖೆಗೆ ಗುರಿಪಡಿಸಲಾಗುತ್ತದೆ. ವೂನನ್ನು ತನಿಖೆ ಮಾಡಲು ನಿಯೋಜಿತನಾದ ಬೇಹುಗಾರಿಕಾ ಅಧಿಕಾರಿ, ಉತ್ತರ ಕೊರಿಯಾದ ಪ್ರಭುತ್ವದ ಹಿಂಸೆಗೆ ತುತ್ತಾದ ಕುಟುಂಬದವನಾಗಿರುತ್ತಾನೆ. ಅವನಿಗೆ ವೂನಂಥ ಪ್ರತಿಯೊಬ್ಬನೂ ಉತ್ತರದ ಬೇಹುಗಾರ ಅಥವ 'ಭವಿಷ್ಯದಲ್ಲಿ ಬೇಹುಗಾರ'ನಾಗಬಲ್ಲವನು - ಅಷ್ಟೇ. ವೂ ತಾನೊಬ್ಬ ಸಾಮಾನ್ಯ ಬೆಸ್ತ, ತನ್ನ ಕುಟುಂಬ ತನಗಾಗಿ ಪರಿತಪಿಸುತ್ತಿರುತ್ತದೆ ಎಂದು ಪರಿಪರಿಯಾಗಿ ಬೇಡಿಕೊಂಡರೂ, ಅದು ತನಿಖಾಧಿಕಾರಿಗೆ ನಾಟದು. ವೂನನ್ನು ಬಾಧಿಸುವ ಮತ್ತೊಂದು ಭಯ: ಹೆಚ್ಚು ದಿನ ಉಳಿದರೆ, ಉತ್ತರ ಕೊರಿಯಾದ ಪ್ರಭುತ್ವ ತನ್ನನ್ನು 'ದೇಶದ್ರೋಹಿ ವಲಸಿಗ' ಎಂದು ನಿರ್ಧರಿಸಿ, ತನ್ನ ಸಂಸಾರದಿಂದ ತನ್ನನ್ನು ದೂರ ಮಾಡುತ್ತದೆ ಎನ್ನುವುದು. ಆ ತನಿಖಾ ತಂಡದಲ್ಲಿ ಚೂಲ್ ವೂನ ಆತಿಥ್ಯಕ್ಕಾಗಿ ನಿಯೋಜಿತನಾದ ಜಿನ್ ವೂ ಎಂಬ ತರುಣ ಅಧಿಕಾರಿಯೂ ಇದ್ದಾನೆ; ಜಿನ್‌ಗೆ ಚುಲ್‌ನ ಮಾತಿನ ಮೇಲೆ ನಂಬಿಕೆ ಇದೆ; ಅವನು ತನಿಖಾಧಿಕಾರಿಯ ಹಿಂಸೆಯನ್ನು ವಿರೋಧಿಸಿ ಮೇಲಧಿಕಾರಿಗಳಿಗೆ ಚುಲ್‌ನ ಮುಗ್ಧತೆಯ ಬಗ್ಗೆ ಮನವರಿಕೆ ಮಾಡಿಕೊಳ್ಳುವುದರಲ್ಲಿ ತೊಡಗಿದ್ದಾನೆ. ತನಿಖಾಧಿಕಾರಿ ಹೇಗಾದರೂ ಚುಲ್ ವೂನ ಅಪರಾಧ ಸಾಬೀತು ಮಾಡಿಯೇ ಸಿದ್ಧ ಎಂದು ಹಟ ಹಿಡಿದು ಹಿಂಸಾತ್ಮಕವಾಗಿ ಅವನಿಂದ ತಪ್ಪೊಪ್ಪಿಗೆ ಪಡೆಯುವ ಸಿದ್ಧ ಸೂತ್ರಗಳಲ್ಲಿ ತೊಡಗಿದ್ದಾನೆ. ಜಿನ್‌ನ ಪ್ರತಿರೋಧ ಹಾಗು ತನಿಖಾಧಿಕಾರಿ ಹಟಗಳ ನಡುವೆ ಸರಿದೂಗಿಸಲು, 'ಅವನು ನಿರಪರಾಧಿಯಾಗಿದ್ದರೂ, ಸ್ವತಂತ್ರಹೀನ ಸರ್ವಾಧಿಕಾರಿ ದೇಶಕ್ಕೆ ಅವನನ್ನು ವಾಪಾಸು ಕಳಿಸುವುದು, ಪ್ರಜಾಪ್ರಭುತ್ವದ ಮಾನವಾಧಿಕಾರತತ್ವಕ್ಕೆ ವಿರೋಧಿಯಾದದ್ದು. ಅವನ ಮನವೊಲಿಸಿ, ದಕ್ಷಿಣ ಕೊರಿಯಾದಲ್ಲಿ ಕಾಯಂ ಆಗಿ ಉಳಿಯುವಂತೆ ಪುಸಲಾಯಿಸು' ಎಂಬ ಜವಾಬ್ದಾರಿಯನ್ನು ಜಿನ್‌ಗೆ ಹೊರಿಸುತ್ತಾರೆ. ಜಿನ್‌ನ ಮನವೊಲಿಕೆಯ ಮಾತುಗಳಿಗೆ ಚುಲ್ ಬಗ್ಗುವುದಿಲ್ಲ, ದಕ್ಷಿಣ ಕೊರಿಯಾದ ಸಿಯೊಲ್ ನಗರದ ಅಂಗುಲವನ್ನೂ ತನ್ನ ಕಣ್ಣಲ್ಲಿ ಕಂಡು, ಮನಃಪಟಲದಲ್ಲಿ ದಾಖಲಿಸಿಕೊಳ್ಳಲಾರೆ ಎಂದು ಹಟ ಹಿಡಿದುಕೂತಿದ್ದಾನೆ - ಅವನ ಹಟಕ್ಕೆ ಕಾರಣವಿದೆ. ನಾಳೆ ಉತ್ತರ ಕೊರಿಯಾಕ್ಕೆ ವಾಪಾಸು ಹೋದಾಗ ಅಧಿಕಾರಸ್ಥರು 'ನೀನು ದಕ್ಷಿಣದ ಹುಸಿ ಸಿರಿಯ ವ್ಯಾಮೋಹಕ್ಕೆ ಬಿದ್ದು, ಆಸೆಯನ್ನು ಹೊತ್ತು ಮರಳಿಬಂದಿರುವೆ; ಉತ್ತರಕ್ಕೆ ನಿನ್ನ ನಿಷ್ಠೆ ಅನುಮಾನಾಸ್ಪದ...' ಎಂಬ ಅಪವಾದ ಜೀವನಪೂರ್ತಿ ಅನುಭವಿಸಬೇಕು ಎನ್ನುವುದಾಗಿದೆ. ಚುಲ್ ವೂಗೆ ಮುಖ್ಯವಾಗಿರುವುದು ತನ್ನ ಬಡ ಕುಟುಂಬಕ್ಕೆ ನಿರಾಳವಾಗಿ ಮರಳುವುದು ಮಾತ್ರವೇ.

ಇಂತಿರಲು, ಚುಲ್ ವೂನಂಥವನೇ ಮತ್ತೊಬ್ಬ 'ಅನುಮಾನಾಸ್ಪದ ಬೇಹುಗಾರ'ನು ತನಿಖಾಧಿಕಾರಿಗಳ ಹಿಂಸೆಗೆ ಸಿಕ್ಕುತ್ತಾನೆ. ಅವನ ಮಗಳು ಸಿಯೊಲಿನ ಒಂದು ಮೀನಿನ ಹೊಟೇಲಿನಲ್ಲಿದ್ದು, ಅವಳಿಗೆ ಚುಲ್ ಒಗಟಿನ ಸಂದೇಶವನ್ನು ತಲುಪಿಸಬೇಕೆಂಬ ಸಾಂಸಾರಿಕ ನೈತಿಕ ಹೊಣೆ ಹೊರಿಸಿ, ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಜಿನ್ ವೂನ ಪುಸಲಾಯಸುವಿಕೆ ಹಾಗು ಸಂಸಾರವಂದಿಗನ ನೈತಿಕ ಭಾರ ಹೊತ್ತು ಚುಲ್ ವೂ, ದಕ್ಷಿಣ ಕೊರಿಯಾದ ರಾಜಧಾನಿ ಸಿಯೊಲಿನಲ್ಲಿ ಕಣ್ಣು ಮುಚ್ಚಿಕೊಂಡು ಹೋಗುವ ಶರತ್ತಿನೊಂದಿಗೆ ಬೀದಿಗಿಳಿಯುತ್ತಾನೆ. ಆದರೆ ತನಿಖಾದಳದ ತಂತ್ರದಿಂದಾಗಿ, ಸಿಯೊಲಿನ ಮುಖ್ಯಬೀದಿಯಲ್ಲಿ ಕಣ್ಣು ಬಿಡುವಂತೆ ಮಾಡುತ್ತದೆ. ಆಗ ಚುಲ್ ವೂಗೆ ದಕ್ಷಿಣ ಕೊರಿಯಾದ ಮಾರುಕಟ್ಟೆ ಝಗಝಗ ಹಾಗು ಬಡತನದಿಂದ ಹುಟ್ಟುವ ಹಿಂಸೆ, ಎರಡರ ದರ್ಶನವೂ ಆಗುತ್ತದೆ. ಚುಲ್ ವೂ ಜಿನ್ ವೂಗೆ 'ಸಿರಿತನದ ನಡುವೆಯೂ ಬಡತನ ಹಾಗು ಹಿಂಸೆ ಇರುವುದು ಎಂಥಾ ಸ್ವಾತಂತ್ರ್ಯ' ಎಂಬ ಸವಾಲು ಹಾಕುತ್ತಾನೆ. ಕೊನೆಗೂ ಚುಲ್ ನಿರಪರಾಧಿಯೆಂದು ವಾಪಸು ಉತ್ತರಕ್ಕೆ ಹೋಗುತ್ತಾನೆ. ಅಲ್ಲಿ, ಬಹಿರಂಗದಲ್ಲಿ ಅವನನ್ನು ವೀರಯೋಧನೆಂಬಂತೆ ಬರಮಾಡಿಕೊಳ್ಳಲಾಗುತ್ತದೆ; ಆದರೆ, ಅವನು ದಕ್ಷಿಣದ ವ್ಯವಸ್ಥೆಯಿಂದ ಭ್ರಷ್ಟನಾಗಿರಬಹುದೆಂಬ ತನಿಖೆ ಶುರುವಿಟ್ಟುಕೊಳ್ಳುತ್ತದೆ- ಆ ತನಿಖೆ ದಕ್ಷಿಣದ ತನಿಖೆಯ ಪ್ರತಿರೂಪವಾಗಿರುತ್ತದೆ. ಅಲ್ಲೂ ಚುಲ್ ವೂ, ತನ್ನ ಸಂಸಾರಕ್ಕೆ ಮರಳಿ ಹೋಗುವ ತವಕದಲ್ಲಿ, ಸಕಲ ತನಿಖಾ ಹಿಂಸೆಗಳನ್ನೂ ಉಣ್ಣುತ್ತಾನೆ; ಕೊನೆಗೂ ಅನುಮಾನಾಸ್ಪದ ವ್ಯಕ್ತಿಯಾಗಿಯೇ ತನಿಖೆಯಿಂದ ಹೊರಬರುತ್ತಾನೆ. ಈಗ ಚುಲ್ ವೂಗೆ ಬಡತನ, ರಾಷ್ಟ್ರಾಧಿಕಾರಗಳ ಎದಿರು, ಹಲ್ಲುಕಚ್ಚಿಕೊಂಡು ಬದುಕು ತೂಗಿಸುವ ಸಂಸಾರವಂದಿಗನ ಸಹಜತೆ ಉಳಿದಿಲ್ಲ; ಅವನ ವ್ಯಕ್ತಿತ್ವ ಮಂಕಾಗಿ ಹೋಗಿದೆ. ತಲ್ಲಣಿತನ ಹಟದಲ್ಲಿ ಅವನು ಸೈನಿಕರ ಎಚ್ಚರಿಕೆ ಕಡೆಗಣಿಸಿ. ಮತ್ತೆ ತನ್ನ ಸಹಜ ಕಸುಬಿಗೆ ಇಳಿವ ಛಲ ತೋರಿ ದುರಂತ ಸಾವನ್ನಪ್ಪುತ್ತಾನೆ - ಕೊನೆಗೂ ಅವನ ಸಂಸಾರ 'ಅನಾಥ'ವಾಗುತ್ತದೆ.

ಈ ಸಿನಿಮಾ ಯಾಕೆ ಮುಖ್ಯ


ಈ ಸಿನಿಮಾದಲ್ಲಿ ಕಿಮ್, ವ್ಯವಸ್ಥೆಯ ನಿರೂಪಣೆಯಲ್ಲಿ, ತನ್ನ ಅಭಿಮಾನಿಗಳೂ ನಿರೀಕ್ಷಿಸದಂತಹ, ಒಂದು ಚಕ್ಕನೆಯ ತಿರುವು ಪಡೆದು ದಂಗು ಹೊಡಿಸಿದ್ದಾನೆ; ಅವನ ಅಭಿಮಾನಿಗಳೂ ಈ ತಿರುವನ್ನು ಅರಗಿಸಿಕೊಳ್ಳಲು ಮತ್ತೊಂದು ಸಿನಿಮಾಕ್ಕೆ ಕಾಯಬೇಕಾಗಿದೆ. ಕಿಮ್‌ನ ಸಿನಿಮಾದ ಭಾಷೆ, ಆಕ್ರೋಶಿತರ ಅಂತರಂಗದ ರೌದ್ರ ತಾಂಡವವಾಗಿ ಪ್ರೇಕ್ಷಕರನ್ನು ಇರಿಯುತ್ತಿತ್ತು; 'ದಿ ನೆಟ್'ನಲ್ಲಿ ಅದು ಕಟ್ಟೆಯೊಡೆದು, ವಿರುದನಿಯ ಬಹಿರಂಗ ಟೀಕಾಪ್ರಚಾರವಾಗಿದೆ; ಟೀಕಾಕಾರರು 'ಅಯ್ಯೋ ಎಂಥ ಒರಟು!' ಎಂದು ಮೂಗು ಮುರಿದು, ಸಿನಿಮಾವನ್ನು ಬದಿಗೊತ್ತಿದ್ದಾರೆ. ಕಿಮ್‌ನ ಈ 22ನೇ ಸಿನಿಮಾ, ಅವನ ಕಳೆದ 21 ಸಿನಿಮಾಗಳು ಹೊಮ್ಮಿಸಿದ ಮಾನವ ಬದುಕಿನ ಮೌಲ್ಯ ಪರಾಮರ್ಶೆಯನ್ನು ಮತ್ತೊಮ್ಮೆ ಪುನಃ ಅವಲೋಕಿಸುವ ಹಾಗೆ ಮಾಡುತ್ತದೆ.

ಈ ಮುನ್ನದ ಕಿಮ್‌ನ ಸಿನಿಮಾ ಸರಣಿಗಳನ್ನು ನೋಡಿದರೆ, ಆತ ಸತತವಾಗಿ ಒಂದು ವಿಶಿಷ್ಟ ಸಾಮಾಜಿಕ ಪ್ರಯೋಗದಲ್ಲಿ ತೊಡಗಿರುವುದು ಕಾಣುತ್ತದೆ: ಕಿಮ್, ಬಂಡವಾಳಶಾಹಿ ಉತ್ಪಾದನೆ ಪ್ರಣೀತ ರಾಜ್ಯಾಧಿಕಾರವು ಹಂತಹಂತದಲ್ಲಿ ಸೋಸಿಕೊಂಡು, ಸಮಾಜದ ಮೂಲ ಘಟಕವಾದ ಸಂಸಾರ ಅಥವ ವಿಘಟಿತ ಸಂಸಾರ ಅಥವ ವ್ಯಕ್ತಿ-ವ್ಯಕ್ತಿ ಸಂಬಂಧಗಳಲ್ಲಿ ತೆರೆದುಕೊಳ್ಳುವ ಹಿಂಸೆಯಲ್ಲಿ ಹೇಗೆ ಅನಾವರಣಗೊಳ್ಳುತ್ತವೆ ಎಂದು ಪ್ರಸ್ತುತಪಡಿಸುವನು; ನಂತರದಲ್ಲಿ ತಳಮಟ್ಟದ ಮನುಷ್ಯ ಸಂಬಂಧಗಳ ತಾತ್ವಿಕ-ನೈತಿಕ ಜವಾಬ್ದಾರಿ ನಿಭಾವಣೆಗೆ, ಅಧಿಕಾರ ವಿರೋಧಿ ಬೌದ್ಧ ಆಧ್ಯಾತ್ಮ ನಿರೂಪಣೆ ಸಾಧ್ಯವೇ? ಎಂದು ಪರಿಶೀಲಿಸುವನು; ಆ ಆಧ್ಯಾತ್ಮದನ್ವಯ ವ್ಯಕ್ತಿಗತ ನೈತಿಕ ಜವಾಬುದಾರಿ ನಿರ್ವಹಿಸುವ ಮೂಲಕ ಬಂಡವಾಳಶಾಹಿ ಪ್ರಣೀತ ಹಿಂಸೆಗೆ ಪರ್ಯಾಯ ಪ್ರತಿರೋಧ ನಿರ್ಮಿಸುವುದಕ್ಕೆ ಸಾಧ್ಯವಿದೆಯೇ? ಎಂದು ಪರಿಶೀಲಿಸುವವನು. ಅವನ 'ಪೀಟಾ', 'ಮೋಬಿಸ್' ಈ ಬಗೆಯ ಅಂತಿಕ ಪ್ರಯೋಗಗಳು. ಆ ನಂತರದಲ್ಲಿ 'ಒನ್ ಆನ್ ಒನ್' ಮತ್ತು 'ಸ್ಟಾಫ್' ಪ್ರಯೋಗಗಳ ಮೂಲಕ ಕಿಮ್ ವ್ಯವಸ್ಥೆಯ ವಿರುದ್ಧ ವಿರುದನಿಯಲ್ಲಿ ಮಾತನಾಡಲು ತಿಣುಕಿದ್ದ; 'ದಿ ನೆಟ್'ನಲ್ಲಿ 'ರಾಷ್ಟ್ರಪ್ರಭುತ್ವ'ದ ವೈಚಾರಿಕತೆಯಲ್ಲೇ ಅಡಕವಾಗಿರುವ ಹಿಂಸೆಗೆ ಸಾಫ್ ಸೀದಾ ಧಿಕ್ಕಾರ ಹೇಳಿದ್ದಾನೆ.

ಹೌದು, ಪಶ್ಚಿಮದ ಎಲ್ಲ ವಿಮರ್ಶಕರೂ ಟೀಕಿಸಿದಂತೆ, ಪಾತ್ರ, ದೃಶ್ಯ ಹಾಗು ಕಥನವನ್ನು ಪದರುಗಳಲ್ಲಿ ಪ್ರಸ್ತುತಪಡಿಸುವ 'ಕಿಮ್‌ತನ' ಈ ಸಿನಿಮಾದಲ್ಲಿಲ್ಲ, ಆತ ಬೃಹತ್ ಪ್ರಭುತ್ವ ಹಿಂಸೆಯ ಕಥನವನ್ನು ಹೆಣೆಯುವ ಅವಸರದಲ್ಲಿ ಪ್ರಭುತ್ವಾಧಿಕಾರ ಪ್ರಣೀತ ವಿಚಾರಧಾರೆಗಳ ಕುರಿತು ವಿರುದನಿಯಲ್ಲಿ ಪ್ರತಿಕ್ರಿಯಿಸಿದ್ದಾನೆ. ವಿರಾಟ್ ವ್ಯವಸ್ಥೆಗಳು ಉಂಟುಮಾಡುವ ಹಿಂಸೆಗಳ ರೂಪವನ್ನು ಕಟ್ಟಿಕೊಡುವಲ್ಲಿ ಅಂದ್ರೆ ವಾಜ್ಡ, ಕೋಸ್ತಾ ಗೆವ್ರಾಸ್‌ನಂಥವರು ಸಿದ್ಧಹಸ್ತರು - ಅವರು ತಮ್ಮ ಸಿನಿಮಾ ಕಲೆಯನ್ನು ಕಟ್ಟುತ್ತಾಹೋದದ್ದೇ ಆ ಬಗೆಯ ಪ್ರತಿರೋಧ ಮಾದರಿಯಲ್ಲಿ, ಕಿಮ್ ಇದುವರೆವಿಗೂ ಆ ಬಗೆಯ ಪ್ರತಿರೋಧಿ ಸಿನಿಮಾ ಕಟ್ಟಿದವನಲ್ಲ; ಈಗ ಗೇರ್ ಬದಲಾಯಿಸಿದ್ದಾನೆ; ತನ್ನ ಸಮಕಾಲೀನನಾಗಿರುವ ಚೀನಾದ ಜಿಯಾ ಝಾಂಕೆಯ ಹಾಗೆ ವಿಶಿಷ್ಟವಾದ ವ್ಯವಸ್ಥೆ ವಿರೋಧಿ ಸಿನಿಮಾ ಕಲೆಯನ್ನು ಕಟ್ಟುವತ್ತ ಕಿಮ್ ಹೊರಳಿದ್ದಾನೋ ಎಂಬ ಕುತೂಹಲವನ್ನು ಪ್ರಸ್ತುತ ಸಿನಿಮಾ ಹುಟ್ಟಿಸಿದೆ. ■

ಅಡ್ವಾಣಿಯವರು ಬಿಜೆಪಿಯಲ್ಲಿ ಅತೀಹೆಚ್ಚು ಅಸಮಾಧಾನಗೊಂಡಿರುವ ಹಿರಿಯ ನೇತಾರ. ಮೋದಿ ಹಾಗೂ ಅಡ್ವಾಣಿಯ ಸಂಬಂಧ ಹಳಸಿರುವುದು ದೇಶಕ್ಕೆಲ್ಲಾ ಗೊತ್ತಿದೆ. ಅಡ್ವಾಣಿ ಎಂಬ ಮುದಿ ಹುಲಿಯನ್ನು ಪಂಜರದಲ್ಲಿ ಹಾಕಿ ತನ್ನ ಜೀವ ಉಳಿಸಿಕೊಳ್ಳಲು ಮೋದಿಗೆ ಇದುವೇ ಸರಿಯಾದ ಸಮಯ. ಜತೆಗೆ ಯುಪಿ ಚುನಾವಣೆಯ ಮೇಲೂ ರಾಮಮಂದಿರದ ಛಾಯೆ ಹರಡಿ ಅದನ್ನು ಮತವಾಗಿ ಪರಿವರ್ತಿಸಲು ಸಹ ಮೋದಿಗೆ ಇದುವೇ ಕೊನೆಯ ಅವಕಾಶವಾಗಿತ್ತು, ನೆಲಕಚ್ಚಿದ್ದ ಬಿಜೆಪಿ ಪಕ್ಷವನ್ನು ಎಬ್ಬಿಸಿ ಕಟ್ಟಿ ಬೆಳೆಸಿದ ತನಗೆ ನ್ಯಾಯವಾಗಿ ಸಿಗಬೇಕಾಗಿದ್ದ ಪ್ರಧಾನ ಮಂತ್ರಿ ಸ್ಥಾನವನ್ನು ಕಬಳಿಸಿದ ಮೋದಿಯ ಗುಜರಾತಿ ಗ್ಯಾಂಗ್ ಬಗ್ಗೆ ಸಿಂಧೀ ಅಡ್ವಾಣಿಯವರು ಒಳಗಿಂದೊಳಗೆ ಕುದಿಯುತ್ತಿರುವುದು ಎಲ್ಲರಿಗೂ ಗೊತ್ತಿದೆ.

ಇನ್ನು ಕೆಲವೇ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಬಿಜೆಪಿಯಿಂದ ಅಡ್ವಾಣಿಯವರ ಹೆಸರು ಬಲವಾಗಿ ಕೇಳಿಬರುತ್ತಿದ್ದರೂ ಮೋದಿ ನಿಜವಾಗಿ ಅಡ್ವಾಣಿ ರಾಷ್ಟ್ರಪತಿ ಆಗುವುದು ಬೇಡವಾಗಿದೆ. ಯಾಕೆಂದರೆ ಹಿಡುಭರಿತ ಅಡ್ವಾಣಿಯವರ ಕೈಯಲ್ಲಿ ರಾಷ್ಟ್ರಪತಿ ಹುದ್ದೆ ಸಿಕ್ಕಿಬಿಟ್ಟರೆ ಅದರ ಬಲದಿಂದ ಅವರು ತಮ್ಮದೇ ಪಕ್ಷದ ಕಡುವೈರಿ ಮೋದಿಯ ವಿರುದ್ಧ ಸೇಡು ತೀರಿಸಲು 2019 ಲೋಕಸಭಾ ಚುನಾವಣೆಯಲ್ಲಿ ಮೋದಿಗೆ ಭಾರಿ ಕಂಟಕಗಳನ್ನು ಸೃಷ್ಟಿಸಿ ಬೇರೊಬ್ಬ ಬಿಜೆಪಿ ನಾಯಕ ಪ್ರಧಾನಿ ಪದಕ್ಕೆ ಸ್ಪರ್ಧಿಯಾಗುವಂತೆ ಮಾಡಬಹುದು ಎಂಬ ಭಯ ಮೋದಿ ಗುಂಪಿಗೆ ಆವರಿಸಿರುವುದರಿಂದ, ಈಗ ಅಡ್ವಾಣಿ ಮತ್ತು ಜೋಷಿ ವಿರುದ್ಧ ಸುಪ್ರೀಂಕೋರ್ಟಿನ ಕೊಲ್ಡ್-ಸ್ಟೋರೇಜಿನಲ್ಲಿ ಪೆಂಡಿಂಗ್ ಇದ್ದ ಮೇಲ್ಮನವಿಗೆ ಒಮ್ಮೆಲೇ ಜೀವ ಬರುವಂತೆ ಮಾಡಿ ಅಡ್ವಾಣಿಯವರು ರಾಷ್ಟ್ರಪತಿ ಪದಕ್ಕೆ ಸ್ಪರ್ಧಿಸದಂತೆ ಕಾನೂನಾತ್ಮಕ ಕಂಟಕ ಸೃಷ್ಟಿಸಲಾಗುತ್ತಿದೆ ಎಂಬುದು ಬಿಜೆಪಿಯೊಳಗಿನ ಅಡ್ವಾಣಿ ಹಿತೈಷಿಗಳ



ಅಂಬೋಣ. ಅಷ್ಟೇ ಅಲ್ಲ, ಉತ್ತರ ಪ್ರದೇಶದ ಜನರಿಗೆ ಅತ್ಯಂತ ಭಾವನಾತ್ಮಕ ರಾಮಮಂದಿರದ ವಿಷಯವನ್ನು ಈಗ ಮೇಲೆಬ್ಬಿಸಿ ಭಾವುಕ ಹಿಂದೂಗಳ ಹಳೇ ಹುಣ್ಣನ್ನು ತಿವಿದು ಮರೆತಿದ್ದ ನೋವನ್ನು ತಾಜಾಗೊಳಿಸಿ ಅದನ್ನು ಈಗಿನ ಉತ್ತರ ಪ್ರದೇಶದ ಚುನಾವಣೆಯಲ್ಲಿ ಮತವಾಗಿ ಪರಿವರ್ತಿಸುವ ಲೆಕ್ಕಾಚಾರ ಸಹ ಮೋದಿ ಗುಂಪಿಗೆ ಇದ್ದುದರಿಂದ ಅಡ್ವಾಣಿಯವರ ಮೇಲಿನ ಬಾಬ್ರಿ ಧ್ವಂಸದ ಆರೋಪವನ್ನು ಪುನರ್ ಊರ್ಜಿತಗೊಳಿಸಲಾಯಿತು ಎನ್ನಲಾಗುತ್ತಿದೆ. ಶಶಿಕಲಾ ತಮಿಳುನಾಡು ಮುಖ್ಯಮಂತ್ರಿ ಕುರ್ಚಿಗೆ ಲಗ್ಗೆ ಇಟ್ಟ ಸಮಯಕ್ಕೆ ಸರಿಯಾಗಿ ಅವರ ವಿರುದ್ಧದ ಭ್ರಷ್ಟಾಚಾರ ಪ್ರಕರಣದಲ್ಲಿ ಅವಸರದ ತೀರ್ಪು ಬಂದಾಗಲೂ ಸುಪ್ರೀಂಕೋರ್ಟಿನಲ್ಲೂ ಕೆಲವರು ಮೋದಿಯ ತಾಳಕ್ಕೆ ತಕ್ಕಂತೆ ಕುಣಿಯುವವರು ಇದ್ದಾರೆ ಎಂಬ ಸಂಶಯ ಮೂಡಿತ್ತು. ಈಗ ಉತ್ತರ ಪ್ರದೇಶದ ಚುನಾವಣೆಯ ಸಮಯಕ್ಕೆ ಸರಿಯಾಗಿ ಅಡ್ವಾಣಿ, ಜೋಷಿ ಮೇಲೆ ಬಾಬ್ರಿ ಧ್ವಂಸದ ಪ್ರಕರಣದಲ್ಲಿ [illegible] ಮೇಲ್ಮನವಿಯನ್ನು ಎರಡು ವರ್ಷದ ನಂತರ ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿರುವುದು ಯುಪಿ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಇಟ್ಟುಕೊಂಡು ಮೋದಿ ಗ್ಯಾಂಗ್ ಆಡಿರುವ ಆಟ ಎಂಬುದರಲ್ಲಿ ಸಂದೇಹವಿಲ್ಲ. ಅಂದರೆ ಒಂದೇ ಕಲ್ಲಿಗೆ ಅಡ್ವಾಣಿ ಫಿನಿಷ್ ಹಾಗೂ ಉತ್ತರಪ್ರದೇಶದ ಹಿಂದೂಗಳ ಮತ ಸೂರೆ, ಹೀಗೆ ಎರಡೆರಡು ಹಣ್ಣು ಉದುರಿಸುವ ಬಿಜೆಪಿ ಯೋಜನೆ ಇದಾಗಿತ್ತು ಹಾಗೂ ಅದು ಯಶಸ್ವಿಯಾಗಿದೆ ಎಂಬುದನ್ನೂ ಯುಪಿ ಚುನಾವಣಾ ಫಲಿತಾಂಶ ಸಮರ್ಥಿಸಿದೆ. ಅಂದರೆ ಅಧಿಕಾರ ಉಳಿಸಿಕೊಳ್ಳಲು ತಮ್ಮವರನ್ನೇ ಬಲಿಕೊಡುವ ಈ ಪರಿ ಔರಂಗಜೇಬನು ಸಿಂಹಾಸನಕ್ಕಾಗಿ ತನ್ನ ಹೆತ್ತ ತಂದೆ ಹಾಗೂ ಒಡಹುಟ್ಟಿದ ಸಹೋದರರನ್ನೇ ಮುಗಿಸಿದ ಅಮಾನುಷ ಕಥೆಯನ್ನು ಮೋದಿ ಗ್ಯಾಂಗ್ ಮತ್ತೆ ಅನುಕರಿಸಿದೆ. 2003 ರಲ್ಲಿ ಮೋದಿಯ ಗುಜರಾತ್ ಮುಖ್ಯಮಂತ್ರಿ ಪದಕ್ಕೆ ಪ್ರತಿಸ್ಪರ್ಧಿಯಾಗಿದ್ದ ಅವರದೇ ಪಕ್ಷದ ಹರೇನ್ ಪಾಂಡ್ಯಾರನ್ನು ಅವರ ಪಕ್ಷದವರು ಸುಪಾರಿ ಹಂತಕರ ಮೂಲಕ ಮುಗಿಸಿದ್ದು ಈಗ ಬೇರೆ ರೀತಿಯಲ್ಲಿ ಮರುಕಳಿಸಿದಂತಿದೆ.

- ಜಿ. ರವಿಕಿರಣ, ಮೈಸೂರು

ಪ್ರಿಯ ಓದುಗರೇ, ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇ-ಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಟೈಪ್ ಮಾಡಿ ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಸ್ಪಷ್ಟವಾಗಿ SMS ಕಳುಹಿಸಬಹುದು


Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 29-03-2017 RNI No. KARKAN2005/1

ಗುರು ವಿರುದ್ಧ ಶಿಷ್ಯನೇ ತಿರುಗಿ ಬಿದ್ದಾಗ



ಇಂಥದ್ದೊಂದು ಸನ್ನಿವೇಶ ತಮ್ಮಿಬ್ಬರ ಮಧ್ಯೆ ನಡೆಯುತ್ತದೆ ಅಂತ ಸ್ವತಃ ಅವರಿಗೂ ಗೊತ್ತಿರಲಿಕ್ಕಿಲ್ಲ. ಆದರೂ ನಡೆದುಬಿಟ್ಟಿದೆ. ಸಿನಿಮಾ ರಂಗಕ್ಕೆ ತಮ್ಮನ್ನು ಪರಿಚಯಿಸಿದ ಗುರು ವಿರುದ್ಧ ಶಿಷ್ಯನು ತಿರುಗಿ ನಿಂತಿದ್ದಾನೆ. ನೀನ್ಯಾವ ಗುರು ಹೋಗಯ್ಯೋ ಅನ್ನುವ ಅರ್ಥದಲ್ಲಿ ಮಾತಾಡಿದ್ದಾನೆ. ಹಾಗಾಗಿ ಶಿಷ್ಯನಿಗಾಗಿ ಮಾಡಿದ್ದ ಸಿನಿಮಾವನ್ನೇ ಗುರು ಕೊಂದಿದ್ದಾನೆ. ನಾವೀಗ ಹೇಳಲು ಹೊರಟಿರುವ ಸ್ಟೋರಿ ನಿರ್ದೇಶಕ ಗುರುಪ್ರಸಾದ್ ಮತ್ತು ನಟ ಧನಂಜಯ್ ಕುರಿತಾದದ್ದು. ತಮಗೆಲ್ಲ ಗೊತ್ತಿರುವಂತೆ 'ಡೈರೆಕ್ಟರ್ ಸ್ಪೆಷಲ್' ಸಿನಿಮಾದ ಮೂಲಕ ಧನಂಜಯ್‌ನನ್ನು ಸಿನಿಮಾ ರಂಗಕ್ಕೆ ಪರಿಚಯಿಸಿದ್ದೇ ಗುರುಪ್ರಸಾದ್. ಶಿಷ್ಯನ ಚೊಚ್ಚಲು ಸಿನಿಮಾ ಮಕಾಡೆ ಮಲಗಿತು ಅನ್ನುವ ಕಾರಣಕ್ಕಾಗಿ 'ಎರಡನೇ ಸಲ' ಎಂಬ ಮತ್ತೊಂದು ಚಿತ್ರ ನಿರ್ದೇಶನ ಮಾಡಿದರು ಗುರು. ಮೂರು ವರ್ಷ ಡಬ್ಬಾದಲ್ಲೇ ಇದ್ದ ಚಿತ್ರ ಎರಡು ವಾರಗಳ ಹಿಂದೆ ಬಿಡುಗಡೆ ಆಗಿದೆ. ಚಿತ್ರದ ನಿರ್ಮಾಪಕ ಯೋಗೀಶ್ ಮತ್ತು ಗುರುಪ್ರಸಾದ್ ನಡುವಿನ ಗಲಾಟೆಯಿಂದಾಗಿ ಈ ಸಿನಿಮಾ ಕೂಡ ಸೋಲಿನ ದಡದಲ್ಲಿದೆ. ತಮ್ಮ ಸಿನಿಮಾವನ್ನೇ ನಿರ್ದೇಶಕರು ಕೊಂದರು ಎಂದು ನಿರ್ಮಾಪಕರು ಗಲಾಟೆ ಮಾಡುತ್ತಿದ್ದಂತೆಯೇ ಕಾಣೆಯಾಗಿದ್ದ ಗುರು, ಮೀಡಿಯಾ ಮುಂದೆ ಕಾಣಿಸಿಕೊಂಡರು. ತಮ್ಮ ವೃತ್ತಿ ಜೀವನಕ್ಕೆ ಯೋಗೀಶ್ ಮಾತು ಹೊಡೆತ ಕೊಡಲಿದೆ ಎಂದು ಗೊತ್ತಾಗುತ್ತಿದ್ದಂತೆಯೇ, ಗಲಾಟೆಗೆ ಬೇರೆ ತಿರುವು ನೀಡಿದರು. ಸಿನಿಮಾದ ಹೀರೋ ಧನಂಜಯ್ ಕುರಿತು ಇಲ್ಲಸಲ್ಲದ ಆರೋಪ ಮಾಡಿದರು. ಗುರು ಮಾತು ಕೇಳಿಸಿಕೊಂಡ ಧನಂಜಯ್ ಕೂಡ, ಗುರುವಿಗೆ ಗುರ್ರ ಅಂದಿದ್ದಾರೆ. ಇವರ ಜಗಳ ಈಗ ಪ್ರೇಕ್ಷಕರಿಗೆ ಉಚಿತ ಮನರಂಜನೆ ನೀಡುತ್ತಿದೆ. ಹಾಗಾಗಿ ಪ್ರೇಕ್ಷಕ ಥಿಯೇಟರ್‌ಗೆ ಹೋಗಿ 'ಎರಡನೇ ಸಲ' ಸಿನಿಮಾ ನೋಡುವುದನ್ನು ನಿಲ್ಲಿಸಿದ್ದಾನೆ.

ಭೂಗತ ಜಗತ್ತಿಗೆ ಆದಿತ್ಯ ಗುಡ್‌ಬೈ



ತಾವು ಭೂಗತ ಜಗತ್ತಿಗೆ ಗುಡ್ ಬೈ ಹೇಳುವುದಾಗಿ ನಟ ಆದಿತ್ಯ ಹೇಳಿದ್ದಾರೆ. ಏನಪ್ಪ ಇದು, ಆದಿತ್ಯಗೂ ಮತ್ತು ರೌಡಿಸಂಗೂ ಏನ್ ಸಂಬಂಧ ಅಂತ ಆಲೋಚನೆಯಾ? ಅವರು ಹೇಳಿದ್ದು ರಿಯಲ್ ರೌಡಿಸಂ ಬಗ್ಗೆ ಅಲ್ಲ, ರೀಲ್ ರೌಡಿಸಂ ಬಗ್ಗೆ. ಈವರೆಗೂ ಆದಿತ್ಯ ಬಹುತೇಕವಾಗಿ ರೌಡಿಸಂ ಹಿನ್ನೆಲೆಯ ಸಿನಿಮಾಗಳನ್ನೇ ಮಾಡಿಕೊಂಡು ಬಂದಿದ್ದಾರೆ. ಹಾಗಾಗಿ ಭೂಗತ ಜಗತ್ತಿನ ಚಿತ್ರಗಳು ಅಂದಾಕ್ಷಣ ಥಟ್ಟನೆ ನೆನಪಾಗುವ ಹೆಸರೇ ಆದಿತ್ಯ ಅವರದ್ದು. ಅಂಥದ್ದೇ ಪಾತ್ರ ಮಾಡಿ ಮಾಡಿ ಅವರಿಗೂ ಬೋರ್ ಆಗಿದೆಯಂತೆ. ಈ ಕತೆಗಳಿಗೆ ಬ್ರ್ಯಾಂಡ್ ಆಗುತ್ತೇನೆಂಬ ಆತಂಕ ಶುರುವಾಗಿದೆಯಂತೆ. ಹಾಗಾಗಿ ಇನ್ಮುಂದೆ ಆ ರೀತಿಯ ಕತೆಗಳನ್ನು ಒಪ್ಪಿಕೊಳ್ಳುವುದಿಲ್ಲ ಅಂದಿದ್ದಾರೆ. ಕನಿಷ್ಠ ನಾಲ್ಕು ವರ್ಷಗಳ ಕಾಲ ರೌಡಿಸಂ ಹಿನ್ನೆಲೆಯ ಸಿನಿಮಾಗಳಿಂದ ದೂರ ಇರುವುದಾಗಿ ಹೇಳಿದ್ದಾರೆ. ಮೊನ್ನೆಯಷ್ಟೇ ಇವರ ನಟನೆಯ 'ಬೆಂಗಳೂರು ಅಂಡರ್‌ವರ್ಲ್ಡ್' ಚಿತ್ರ ರಿಲೀಸ್ ಆಗಿದೆ. ಉತ್ತಮ ಪ್ರತಿಕ್ರಿಯೆ ಕೂಡ ವ್ಯಕ್ತವಾಗಿದೆಯಂತೆ. ಆದರೂ, ಆದಿತ್ಯ ಇಂಥದ್ದೊಂದು ನಿರ್ಧಾರ ತೆಗೆದುಕೊಂಡಿದ್ದು ಅವರ ಅಭಿಮಾನಿಗಳಿಗೆ ಅಚ್ಚರಿ ಮೂಡಿಸಿದೆ.

ಹಲೋ.. ನಾನಿಲ್ಲೇ ಇದ್ದೇನೆ

ದೀಪಾ ಸನ್ನಿಧಿ ಎಲ್ಲಿದ್ದಾರೆಂಬ ಪ್ರಶ್ನೆ ಹಲವು ತಿಂಗಳಿನಿಂದ ಕೇಳಿಬರುತ್ತಿತ್ತು. 'ಚಕ್ರವರ್ತಿ' ಸಿನಿಮಾದ ನಂತರ ಅವರು ಯಾವೆಲ್ಲ ಸಿನಿಮಾ ಮಾಡುತ್ತಿದ್ದಾರೆಂದು ಕೇಳಲಾಗಿತ್ತು. ಈ ಪ್ರಶ್ನೆಗಳಿಗೆ ಸ್ವತಃ ದೀಪಾ ಉತ್ತರ ನೀಡಿದ್ದಾರೆ. "ನಾನು ಎಲ್ಲಿಗೂ ಹೋಗಿಲ್ಲ, ಸಿನಿಮಾ ರಂಗವನ್ನೂ ಬಿಟ್ಟಿಲ್ಲ. ಮೀಡಿಯಾದವರ ಕಣ್ಣಿಗೆ ಬಿದ್ದಿಲ್ಲ ಅಂದರೆ ಸಿನಿಮಾ ರಂಗ ಬಿಟ್ಟುಹೋಗಿದ್ದೇನೆ ಅಂತಲ್ಲ" ಎಂದು ಖಡಕ್ಕಾಗಿಯೇ ಉತ್ತರಿಸಿದ್ದಾರಂತೆ.

ಸದ್ಯ ಅವರು ಎರಡು ಕನ್ನಡ ಚಿತ್ರಗಳಲ್ಲಿ ನಟಿಸುತ್ತಿದ್ದಾರಂತೆ. ಆದರಲ್ಲಿ 'ಅಕಿರಾ' ಚಿತ್ರ ಖ್ಯಾತಿಯ ಮಾಂಜಾ ಸಿನಿಮಾ ಕೂಡ ಒಂದು. ಮತ್ತೊಂದು ಹೊಸ ಹುಡುಗರ ಚಿತ್ರದಲ್ಲಿ ದೀಪಾ ಪಾತ್ರ ನಿರ್ವಹಿಸಲಿದ್ದಾರೆ.

"ಸಿಕ್ಕ ಎಲ್ಲಾ ಪಾತ್ರಗಳನ್ನು ನಾನು ಒಪ್ಪಲಾರೆ. ಸಿನಿಮಾ ತಂಡ ಹೊಸ[illegible] ಆಗಿರಲಿ, ಅನುಭವಿ ನಿರ್ದೇಶಕರೇ ಇರಲಿ, ಪಾತ್ರ ಚೆನ್ನಾಗಿದ್ದರೆ ಒಪ್ಪಿಕೊಳ್ಳುತ್ತೇ[illegible] ಇಲ್ಲದಿದ್ದರೆ, ಯಾವುದೇ ಕಾರಣಕ್ಕೂ ನಟಿಸಲ್ಲ" ಅನ್ನುವುದು ದೀ[illegible] ಮಾತು.

ದರ್ಶನ್ ನಟನೆಯ 'ಚಕ್ರವರ್ತಿ' ಸಿನಿಮಾದಲ್ಲಿ ದೀಪಾ ನಟಿಸಿದ್ದು ಮುಂದಿನ ತಿಂಗಳು ಈ ಸಿನಿಮಾ ತೆರೆಗೆ ಬರಲಿದೆ. ಈ ಚಿತ್ರದಲ್ಲಿ ಅವರು ಎರಡು ಶೇಡ್‌ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು ವಿಶೇಷ.



ಗೋಲ್ಡನ್ ರೆಸಾರ್ಟ್



ಸಿನಿಮಾ ರಂಗದ ಪಾಲಿಗೆ ಗಣೇಶ್ ಮನೆ ಗೋಲ್ಡನ್ ರೆಸಾರ್ಟ್ ಆಗಿದೆ. ಹಬ್ಬ ಹರಿದಿನಗಳು, ಬರ್ತ್‌ಡೇ ಪಾರ್ಟಿ, ನ್ಯೂ ಇಯರ್ ಹೀಗೆ ಒಂದಿಲ್ಲೊಂದು ನೆಪ ಮಾಡಿಕೊಂಡು ತಮ್ಮ ಆಪ್ತರಿಗೆ ತಮ್ಮದೇ ಮನೆಯಲ್ಲಿ ಪಾರ್ಟಿ ಏರ್ಪಡಿಸುತ್ತಾರೆ ಗಣೇಶ್ ಮತ್ತು ಶಿಲ್ಪಾ.


ದಿಗಂತ್, ಅಮೂಲ್ಯ, ಪ್ರಜ್ವಲ್ ದೇವರಾಜ್, ರವಿಶಂಕರ್ ಗೌಡ, ಮಾಳ್ವಿಕಾ ಅವಿನಾಶ್, ನಭಾ ನಟೇಶ್- ಹೀಗೆ ಅನೇಕ ಕಲಾವಿದರು ಈ ದಂಪತಿಗಳ ಆಹ್ವಾನವನ್ನು ಯಾವುದೇ ಕಾರಣಕ್ಕೂ ಮಿಸ್ ಮಾಡುವುದಿಲ್ಲ. ತಿಂಗಳಿಗೆ ಒಂದು ಬಾರಿಯಾದರೂ ಸೇರುವ ಈ ತಂಡದ ಬಗ್ಗೆ ಗಾಂಧಿನಗರದಲ್ಲಿ ಹಲವು ಗಾಸಿಪ್ ಹರಿದಾಡುತ್ತಿವೆ. ಅದರಲ್ಲಿ ಪ್ರಮುಖವಾಗಿ ಕೇಳಿ ಬರುತ್ತಿರುವುದು ಗಣೇಶ್ ಪತ್ನಿ ಶಿಲ್ಪಾ ಬಗ್ಗೆ. ಶಿಲ್ಪಾ ಈಗ ಕೇವಲ ಕಲಾವಿದನ ಪತ್ನಿಯಷ್ಟೇ ಅಲ್ಲ, ಸಕ್ರಿಯ ರಾಜಕಾರಣಿ ಕೂಡ. ಅದರಲ್ಲೂ ಬಿಜೆಪಿ ಮಹಿಳಾ ಘಟಕದ ಪ್ರಮುಖ ಸ್ಥಾನದಲ್ಲಿದ್ದಾರೆ. ಮುಂದಿನ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿ ಕೂಡ. ಮುಂದಿನ ದಿನಗಳಲ್ಲಿ ತಮ್ಮೊಂದಿಗೆ ಈ ಎಲ್ಲ ಕಲಾವಿದರು ಇರುತ್ತಾರೆಂಬ ಕಾರಣಕ್ಕಾಗಿ ಪಾರ್ಟಿಗಳು ಜೋರು ನಡೆಯುತ್ತಿವೆ ಎಂಬ ಮಾತು ಕೇಳಿಬರುತ್ತಿದೆ. ಇದು ನಿಜವೋ ಸುಳ್ಳೋ ಗೊತ್ತಿಲ್ಲ, ಆದರೆ, ಪಾರ್ಟಿಯ ನೆಪದಲ್ಲಿ ಅರ್ಧ ಸಿನಿಮಾ ರಂಗವನ್ನು ತಮ್ಮ ಮನೆಗೆ ಕರೆಯಿಸಿಕೊಳ್ಳುವುದಂತೂ ಸತ್ಯ.

ಸ್ಟಾರ್ ಜಗಳಕ್ಕೆ ಸುಮಲತಾ ಉತ್ತರ



ಸುದೀಪ್ ಮತ್ತು ದರ್ಶನ್ ಜಗಳ ನಾನಾ ರೂಪ ಪಡೆದುಕೊಳ್ಳುತ್ತಿದೆ. ಇವರಿಬ್ಬರೂ ಈ ಕುರಿತು ಮೌನವಹಿಸಿದ್ದರೂ, ಪರ ವಿರೋಧದ ಬ್ಯಾಟಿಂಗ್ ಮಾತ್ರ ನಿಂತಿಲ್ಲ. ದರ್ಶನ್ ಪರ ಶ್ರೀಮುರಳಿ, ಆದಿತ್ಯ ಸೇರಿದಂತೆ ಹಲವು ಕಲಾವಿದರು ಟ್ವಿಟರ್ ಮೂಲಕ ಬೆಂಬಲ ವ್ಯಕ್ತಪಡಿಸುತ್ತಿದ್ದು, ಸುದೀಪ್ ಅಭಿಮಾನಿಗಳನ್ನು ಇದು ರೊಚ್ಚಿಗೆಬ್ಬಿಸಿದೆ. ಹೀಗಾಗಿ ಸಾಮಾಜಿಕ ಜಾಲತಾಣದಲ್ಲಿ ಅಭಿಮಾನಿಗಳ ಮಧ್ಯೆ ಗುದ್ದಾಟ ಶುರುವಾಗಿದೆ. ಇದು ಇಲ್ಲಿಗೆ ನಿಲ್ಲಬೇಕೆಂಬ ಕಾರಣಕ್ಕಾಗಿ ಅಭಿಮಾನಿಯೊಬ್ಬರು ಅಂಬರೀಷ್‌ಗೆ ಮೊರೆ ಹೋಗಿದ್ದಾರೆ. ಟ್ವಿಟರ್ ಮೂಲಕ ಅಂಬರೀಷ್ ಪತ್ನಿ ಸುಮಲತಾಗೆ ಟ್ವೀಟ್ ಮಾಡಿ, ಈ ಜಗಳ ಬಗೆಹರಿಸುವಂತೆ ಅಂಬರೀಷ್‌ಗೆ ಮನವಿ ಮಾಡಿದ್ದಾರೆ. ಅಂಬರೀಷ ಮಧ್ಯಸ್ಥಿಕೆ ವಹಿಸಿದರೆ, ಗಲಾಟೆ ತಣ್ಣಗಾಗಬಹುದು ಅಂತ ಅವರು ಕೇಳಿದ್ದಾರೆ. ಅಭಿಮಾನಿಯೊಬ್ಬರ ಪ್ರಶ್ನೆಗೆ ಅಷ್ಟೇ ಮಾರ್ಮಿಕವಾಗಿ ಉತ್ತರ ನೀಡಿದ್ದಾರೆ ಸುಮಲತಾ. ಸುದೀಪ್ ಮತ್ತು ದರ್ಶನ್ ಇಬ್ಬರೂ ಪ್ರಬುದ್ಧ ನಟರು. ತಾವೇ ಅದನ್ನು ಸರಿಮಾಡಿಕೊಳ್ಳುವಂತಹ ಶಕ್ತಿ ಇದ್ದವರು. ಹಾಗಾಗಿ ಅಂಬರೀಷ್‌ರನ್ನು ಎಳೆತರಬೇಡಿ ಅಂದಿದ್ದಾರೆ. ಅಲ್ಲಿಗೆ ಈ ಜಗಳ ಇಲ್ಲಿಗೆ ಮುಗಿಯುವುದು ಅನುಮಾನ.

ಲಂಕೇಶ್-82 ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಲಂಕೇಶ್ ಪ್ರಕಾಶನದ ಹೊಸ ಪುಸ್ತಕಗಳು









ಲಂಕೇಶ್ ಬಳಗದ... ಗೈಡ್ ಪ್ರಕಾಶನದ ನೂತನ ಕೊಡುಗೆ



ಈಗ ಎಲ್ಲೆಡೆ ಲಭ್ಯ

ಪ್ರತಿಗಳಿಗಾಗಿ ಮತ್ತು ಮಾಹಿತಿಗಾಗಿ ಕರೆಮಾಡಿ 9880302817

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com